

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ।
ಫಲ ಮಾಗುವಂದು ತುತ್ತೂರಿ ದನಿಯಿಲ್ಲ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ।
ಹೊಲಿ ನಿನ್ನ ತುಟಿಗಳನು - ಮಂಕುತಿಮ್ಮ॥


**ವಿಳಾಸ**

ರಾಮಚಂದ್ರ ಹೆಗಡೆ ಸಿ.ಎಸ್, "ನೆನಪು" ನಂ.33,(172/3), 3ನೇ 'ಸಿ' ಅಡ್ಡರಸ್ತೆ,
ಕತ್ರಿಗುಪ್ಪೆ ಮುಖ್ಯರಸ್ತೆ, ವಿವೇಕಾನಂದನಗರ, ಬೆಂಗಳೂರು - 560 085.
ದೂರವಾಣಿ : 9986372503
Email:contact@chaitrarashmi.com, Web: www.chaitrarashmi.com



Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHITRA PRINTERS, 193, Link Road, Malleswaram, Bangalore- 560 003.


ಸೃಜನಶೀಲತೆಯ ಹುಡುಕಾಟದಲ್ಲಿ...


RNI KAR KAN/2006/19109
MAG (3)/NPP/272/2005-06


# ಚೈತ್ರರಶ್ಮಿ

- A RAY OF HOPE


ಕನ್ನಡ ಮಾಸಿಕ
ಮೇ - 2009




## ಇದು ಬದುಕುವ ಸಮಯ!






## ಕಥೆ ಕಟ್ಟುವ ಬಗೆ...

ಜೀವನಾನುಸಂಧಾನ

50 ನೇ ಸಂಚಿಕೆ

ಸೃಜನಶೀಲತೆಯ ಹುಡುಕಾಟದಲ್ಲಿ...
ಸಂಪಾದಕ : ರಾಮಚಂದ್ರ ಹೆಗಡೆ. ಸಿ. ಎಸ್.
Editor : Ramachandra Hegade C. S.
ಚೈತ್ರರಶ್ಮಿ - A RAY OF HOPE
RNI KAR KAN/2006/19109
MAG (3)/NPP/272/2005-06

| | | | | |
|---|---|---|---|---|
| ಸಂಪುಟ : ೫ | ಸಂಚಿಕೆ : ೫೦ | ಮೇ-೨೦೦೯ | ಪುಟ : ೪ + ೪೮ | ಬೆಲೆ : ೧೫/- |
| Vol. No. : 5 | Issue : 50 | May - 2009 | Page : 4 + 48 | Rs. : 15/- |

## ಅಂತರಂಗದಿಂದ...

# ಸಂಚಿಕೆ ಐವತ್ತು ಸಂಭ್ರಮ ತುಂಬಲಿ ಯಾವತ್ತೂ...

**ಚೈ**ತ್ರರಶ್ಮಿಯ ಭಾವಯಾನದ ೫೦ ನೇ ಸಂಚಿಕೆಯ ಹೊಸ್ತಿಲಲ್ಲಿ ನಿಂತು ಹಿಂತಿರುಗಿ ನೋಡಿದಾಗ ಏನೋ ಒಂದು ಧನ್ಯತೆ,ಪತ್ರಿಕೆ ಕಟ್ಟಿಕೊಟ್ಟ ಅವಿಸ್ಮರಣೀಯ ಅನುಭವಗಳು ಮನಸು ತುಂಬುತ್ತವೆ.ಬೆಂಗಳೂರೆಂಬ ಯಾಂತ್ರಿಕ ನಗರಿಯಲ್ಲಿ ಒಬ್ಬ ಸಾಮಾನ್ಯ ಅನಾಮಿಕ ವ್ಯಕ್ತಿ ಆಗಷ್ಟೆ ಉಳಿದುಹೋಗಬಹುದಾಗಿದ್ದ ಮತ್ತು ಕಳೆದುಹೋಗಬಹುದಾಗಿದ್ದ ನನ್ನಲ್ಲಿ ಹೊಸ ಚಿಂತನೆಯನ್ನು,ಜೀವನೋತ್ಸಾಹವನ್ನು ಬಿತ್ತಿದ್ದು, ಬೆಳೆಸಿದ್ದು, ವಿಸ್ತರಿಸಿದ್ದು ಚೈತ್ರರಶ್ಮಿಯೇ. ಪತ್ರಿಕೋದ್ಯಮದ ಗಂಧಗಾಳಿಯನ್ನೂ ಅರಿಯದೆ ತನ್ನನ್ನು ತಾನೇ 'ಸಂಪಾದಕ'ನೆಂದು ಕರೆದುಕೊಂಡವನಿಗೆ, ಕೇವಲ ಸಾಹಿತ್ಯಪ್ರೀತಿ, ಜೀವನಾಸಕ್ತಿ ಹಾಗೂ ಹುಂಬತನಗಳನ್ನೇ ಬಂಡವಾಳವಾಗಿಸಿಕೊಂಡವನಿಗೆ ಇಷ್ಟು ವರ್ಷಗಳಲ್ಲಿ ಈ ಸೃಜನಶೀಲತೆಯ ಹುಡುಕಾಟ ಕಲಿಸಿದ ಪಾಠ,ಕಟ್ಟಿಕೊಟ್ಟ ಜೀವನಾನುಭವ, ನೀಡಿದ ಸಿಹಿಕಹಿ ನೆನಪುಗಳು,ಜತೆಯಾಗಿಸಿದ ಸಹೃದಯೀ ಓದುಗ,ಬರಹಗಾರರ ಬಳಗ,ಅವರೆಲ್ಲರ ಪ್ರೀತಿ,ಅಕ್ಕರೆ,ಅಭಿಮಾನಗಳು ಬದುಕನ್ನು ಮತ್ತಷ್ಟು ಪ್ರೀತಿಸುವಂತೆ ಮಾಡಿವೆ.

ಮೈಸೂರಿನ ಹಾಸ್ಟೆಲೊಂದರಲ್ಲಿ ಕುಳಿತು ಪತ್ರಿಕೆಯನ್ನು ಕೈ ಬರಹದಲ್ಲಿ ಬರೆದು ಜೆರಾಕ್ಸ್ ಪ್ರತಿಗಳನ್ನು ಮಾಡಿ ಹಂಚುತ್ತಿದ್ದ,ಕೇವಲ ೧೦-೧೫ ಓದುಗರನ್ನಷ್ಟೇ ಹೊಂದಿದ್ದ ಆ ದಿನಗಳಿಂದ ಹಿಡಿದು ನೂರಾರು ಸಹೃದಯೀ ಓದುಗರ ಬಳಗವನ್ನು ಹೊಂದಿರುವ,ಅಂಚೆಯ ಮೂಲಕ ನೂರಾರು ಪ್ರತಿಗಳನ್ನು ನಾಡಿನ ವಿವಿಧೆಡೆಗೆ ಕಳಿಸುತ್ತಿರುವ ಈ ದಿನಗಳವರೆಗೆ,ಬೆಂಗಳೂರಿಗೆ ಬಂದ ಮೇಲೆ ಮೊದಲ ಡಿ.ಟಿ.ಪಿ ಪ್ರತಿಯನ್ನು ಮಾಡಿ ಸಂಭ್ರಮಿಸಿದ ಆ ಕ್ಷಣಗಳಿಂದ ಹಿಡಿದು ೫೦ನೆ ಸಂಚಿಕೆ ಸಿದ್ಧಪಡಿಸುತ್ತಿರುವ ಈ ಕ್ಷಣಗಳವರೆಗೆ, A3 ಸೈಜಿನ ಹಾಳೆಯ ಒಂದೇ ಮಗ್ಗುಲಿನಲ್ಲಿ ಮುದ್ರಣಗೊಂಡು ಅದನ್ನೇ 'ಪತ್ರಿಕೆ' ಅಂತ ನಾವು ಸಂಭ್ರಮಿಸುತ್ತಿದ್ದ ಆ ಕಾಲದಿಂದ ಹಿಡಿದು ರಿಜಿಸ್ಟರ್ಡ್ ಪತ್ರಿಕೆಯಾಗಿ ಹೊಸ ಹೊಸ ವಿಷಯಗಳೊಡನೆ ಆಕರ್ಷಕ ಮುಖಪುಟಗಳೊಡನೆ ಹೊರಬರುತ್ತಿರುವ ಈ ಘಳಿಗೆಯವರೆಗೆ ನಾನು,ಚೈತ್ರರಶ್ಮಿ,ಚೈತ್ರರಶ್ಮಿಯ ಬರಹಗಾರರ ಓದುಗರ ಬಳಗ ಎಲ್ಲವೂ ಸಾಕಷ್ಟು ಕಲಿತಿದ್ದೇವೆ ,ಸಾಕಷ್ಟು ಬೆಳೆದಿದ್ದೇವೆ. ಗ್ರಾಮೀಣ ಪ್ರತಿಭಾವಂತ ಬರಹಗಾರರ ಚೈತ್ರರಶ್ಮಿ ಬಳಗ,ದೂರದೇಶದಲ್ಲಿ ಕುಳಿತು ಇಂಟರ್ನೆಟ್‌ನಲ್ಲಿ ಪತ್ರಿಕೆ ಓದುತ್ತಾ ಪ್ರೋತ್ಸಾಹ ನೀಡುತ್ತಿರುವ ಸಹೃದಯೀ ಓದುಗ ಮಿತ್ರರು ಚೈತ್ರರಶ್ಮಿಯನ್ನು ಪ್ರೀತಿ ಅಕ್ಕರೆ ಅಭಿಮಾನಗಳಿಂದ ಪೋಷಿಸಿ ಬೆಳೆಸಿದ್ದಾರೆ, ಬೆಳೆಸುತ್ತಿದ್ದಾರೆ. ಇದುವರೆಗೆ ನನಗೆ ಬಂದಿರುವ ೫೦೦ ಕ್ಕೂ ಹೆಚ್ಚು ಈ-ಮೇಲ್ ಗಳು,೪೦೦ ಕ್ಕೂ ಹೆಚ್ಚು ಪತ್ರಗಳು "ಚೈತ್ರರಶ್ಮಿ" ಕೇವಲ ನನಗಷ್ಟೇ ಅಲ್ಲ, ನನ್ನಂತಹ ಇನ್ನೂ ನೂರಾರು ಮಂದಿಗೆ 'ಭರವಸೆಯ ಹೊನ್ನಕಿರಣ'ವಾಗಿ ಅವರೆಲ್ಲರ ಪ್ರೀತಿಗೆ ಪಾತ್ರವಾಗಿರುವುದಕ್ಕೆ ಸಾಕ್ಷಿಯಾಗಿ ನಿಂತಿವೆ.





ಕೆಲವೇ ವರ್ಷಗಳ ಹಿಂದಿನ ಮಾತು .ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ 'ಅನ್ನಪೂರ್ಣ ನಿಲಯ'ವೆಂಬ ನಮ್ಮ ಹಾಸ್ಟೆಲ್‌ನ ೧೩ ನೇ ನಂಬರಿನ ರೂಮಿನಲ್ಲಿ ನಾನೇ ಸಿದ್ಧಪಡಿಸಿದ್ದ 'ವಿಚಾರರಶ್ಮಿ' ಎಂಬ ಹೆಸರಿನ ಪುಟ್ಟ ನೋಟಿಸ್ ಬೋರ್ಡ್ ಒಂದಿತ್ತು. 'ದಿನಕ್ಕೊಂದು ಮಂಕುತಿಮ್ಮನ ಕಗ್ಗ' ವನ್ನು ಅರ್ಥಸಹಿತ ಬರೆದು ನಾನು ಆ ನೋಟಿಸ್ ಬೋರ್ಡ್ ನಲ್ಲಿ ಪ್ರಕಟಿಸುತ್ತಿದ್ದೆ.ರೂಮ್ ಗೆ ಬರುವ ಗೆಳೆಯರಿಗೆ ಕಗ್ಗವನ್ನು ಪರಿಚಯಿಸುವ,ಅವರು ಅದರಿಂದ ಪ್ರಭಾವಿತರಾಗುವಂತೆ ಮಾಡುವ ಉದ್ದೇಶ ನನ್ನದಾಗಿತ್ತು.

ಕೆಲವೊಮ್ಮೆ ನಾವು ಯಾವುದೋ ಒಂದಿಷ್ಟು ಅವಾಸ್ತವಿಕ ಆದರ್ಶಗಳನ್ನು,ಭ್ರಮೆಗಳನ್ನು ತಲೆಯಲ್ಲಿ ತುಂಬಿಕೊಂಡು ಏನೋ ಸಾಧಿಸಿಬಿಡುತ್ತೇವೆ ಎಂಬ ಹಮ್ಮಿನಿಂದ ಮುನ್ನಡೆದಾಗ ವಾಸ್ತವ ನಮ್ಮ ಭ್ರಮೆಗಳನ್ನು ಕಳಚಿ ಕರಗಿಸಿ ಬೆಚ್ಚಿಬೀಳಿಸುತ್ತ ಹೋಗುತ್ತದೆ. ನನಗಾದದ್ದೂ ಅದೇ. 'ಮನ್ನಣೆಯದಾಹವಂ ಎಲ್ಲಕಂ ತೀಕ್ಷ್ಣತಮ' ಎಂದು ಡಿ.ವಿಜಿ ಹೇಳುವಂತೆ ಅಂದಿನ ದಿನಗಳಲ್ಲಿ ಒಂದಷ್ಟು ಪ್ರಚಾರಪ್ರಿಯತೆಯ ಹುಚ್ಚೂ ನನಗಿತ್ತು ಎಂದರೆ ಸುಳ್ಳಲ್ಲ.ಆ ಕಾರಣದಿಂದಾಗಿಯೇ ನಮ್ಮ 'ವಿಚಾರರಶ್ಮಿ' ನಿರೀಕ್ಷಿತ ಫಲ ಕಾಣದೇ ನಿಲ್ಲುವ ಹಂತಕ್ಕೆ ಬಂದಿತ್ತು.ಆ ದಿನಗಳಲ್ಲಿಯೇ ನಾನು ನಮ್ಮ ಹಾಸ್ಟೆಲ್ ಎದುರಿನ ಪಾರ್ಕ್‌ನಲ್ಲಿದ್ದ ಗಾಂಧಿಭವನದಲ್ಲಿ ಹಿರಿಯ ಗಾಂಧಿವಾದಿಯೊಬ್ಬರನ್ನು ಭೇಟಿಯಾಗಿದ್ದು.ಯಾವ ಪ್ರಚಾರ ,ಪ್ರತಿಫಲದ ಅಪೇಕ್ಷೆಯಿಲ್ಲದೆ ಎಷ್ಟೋ ವರ್ಷಗಳಿಂದ ಪ್ರತಿದಿನ ಸೂರ್ಯೋದಯಕ್ಕೆ ಮುನ್ನವೇ ಗಾಂಧಿಭವನದ ಸುತ್ತಮುತ್ತಲ ಪ್ರದೇಶವನ್ನು ಕಸಗುಡಿಸಿ ಸ್ವಚ್ಛಗೊಳಿಸುತ್ತಿದ್ದ ಹಿರಿಯರು ಅವರು. "ಎಷ್ಟೋ ವರ್ಷದಿಂದ ಒಂದುದಿನವೂ ತಪ್ಪದೇ ಈ ಕೆಲಸ ಮಾಡುತ್ತಿದ್ದೀರಿ.ನಿಮ್ಮನ್ನು ಯಾರೂ ಗಮನಿಸುತ್ತಿಲ್ಲ,ನಿಮ್ಮಿಂದ ಯಾರೂ ಪ್ರಭಾವಿತರಾಗಲಿಲ್ಲ ಎಂಬ ಕೊರಗು ನಿಮ್ಮನ್ನು ಕಾಡಲಿಲ್ಲವೇ?" ಎಂದು ನಾನವರನ್ನು ಒಮ್ಮೆ ಕೇಳಿದ್ದೆ. ಅದಕ್ಕೆ ಅವರು ನೀಡಿದ ಉತ್ತರ ನನ್ನ ಜೀವನದೃಷ್ಟಿಯನ್ನು ಬದಲಿಸಿದ್ದು ಮಾತ್ರವಲ್ಲ,ಪ್ರತಿಬಾರಿ ಚೈತ್ರರಶ್ಮಿಯ ಸಂಚಿಕೆಯನ್ನು ಹೊರತಂದಾಗಲೂ ನನ್ನ ಚಿಂತನೆಯನ್ನು ಗಟ್ಟಿಗೊಳಿಸುವುದು ಅದೇ.

"ನೀವು ನಿಮ್ಮ ಕಾರ್ಯಕ್ಕೆ ಪ್ರತಿಯಾಗಿ ಏನನ್ನಾದರೂ ಪ್ರತಿಫಲ ನಿರೀಕ್ಷಿಸಿದಾಗ ಮಾತ್ರ ಯಾವುದೇ ಕೊರಗು ನಿಮ್ಮನ್ನು ಕಾಡಲು ಸಾಧ್ಯ.ನಿಮ್ಮ ಕಾರ್ಯವನ್ನು ಯಾರಾದರೂ ಗಮನಿಸಲಿ, ಗಮನಿಸದೇ ಇರಲಿ ಮುಖ್ಯವಾಗಿ ನಿಮಗೆ ಇರಬೇಕಾದದ್ದು "ಆತ್ಮಸಂತೃಪ್ತಿ".ಇನ್ಯಾರನ್ನೋ ಪ್ರಭಾವಿಸುವ ಹುಚ್ಚಿಗೆ ಬೀಳದೆ,ಯಾರದೋ ಹೊಗಳಿಕೆಗೆ ,ಮೆಚ್ಚುಗೆಗೆ ಕಾಯದೆ ಕೇವಲ ಸ್ವಮೇಲ್ವಿಚಾರಣೆಯಿಂದ ನಿಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಕಾರ್ಯ ಮಾಡುತ್ತ ಹೋಗಬೇಕು.ನಿಮ್ಮ ಕಾರ್ಯದಿಂದ ಸುತ್ತಮುತ್ತಲಿನ ನಾಲ್ಕಾರು ಮಂದಿಗೆ ಆನಂದ ದೊರಕುವುದಾದರೆ ಅದು ನಿಮ್ಮ ಪುಣ್ಯ".ಎಂದಿದ್ದರು ಅವರು. ಅವರ ಆ ಮಾತು ನನ್ನ 'ವಿಚಾರರಶ್ಮಿ'ಯನ್ನು ಮುನ್ನಡೆಸಿತು.ಮುಂದೆ ಅದೇ ಚೈತ್ರರಶ್ಮಿಗೆ ಪ್ರೇರಣೆಯಾದದ್ದು ಈಗ ಮಧುರ ನೆನಪು.

"ಲೋಕೋದ್ಧಾರಕ್ಕಾಗಿ ನಾವು ಕೆಲಸ ಮಾಡುತ್ತಿದ್ದೇವೆಂದು ಯಾರೂ ತಿಳಿದುಕೊಳ್ಳಬಾರದು.ನಮ್ಮ ಪ್ರಯತ್ನ ನಮ್ಮ ಏಳ್ಗೆಗಾಗಿ ,ನಮ್ಮ ಬಾಳಿನ ಸಫಲತೆಗಾಗಿ,ನಮ್ಮ ಜೀವನ ಸಂಸ್ಕಾರಕ್ಕಾಗಿ" ಎಂದಿದ್ದಾರೆ ನಾಡು ಕಂಡ ಶ್ರೇಷ್ಠ ಸಾಹಿತಿ,ಕವಿ,ದಾರ್ಶನಿಕ ಡಿ.ವಿ.ಜಿ.ಈ ಸತ್ಯವನ್ನು ಅರ್ಥಮಾಡಿಕೊಂಡರೆ ಮಾತ್ರ ನಮ್ಮ ಭ್ರಮೆಗಳು,ನಮ್ಮ ಅಹಮಿಕೆಗಳು ದೂರವಾಗಿ ನಮ್ಮ ಬದುಕನ್ನು ಉಜ್ವಲವಾಗಿಸಿಕೊಳ್ಳಲು,ನಮ್ಮ ಜೀವನಕ್ಕೊಂದು ಹೊಸತನವನ್ನು ತಂದುಕೊಳ್ಳಲು ಸಾಧ್ಯವಾದೀತು. 'ಚೈತ್ರರಶ್ಮಿ'ಯ ಸೃಜನಶೀಲತೆಯ ಹುಡುಕಾಟ ಅದಕ್ಕೊಂದು ದೀವಿಗೆಯಾಗಲಿ ಎಂದು ಪ್ರಾರ್ಥಿಸೋಣ.

ನಿಮ್ಮವನು
**ರಾಚಂ**
editor@chaitrarashmi.com

# ಚೈತ್ರರಶ್ಮಿಯೆಂಬ ಭಾವಯಾನ...

● ಮಹಾಬಲ ಭಟ್, ಗೋವಾ

ನಾನು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಯೋಜನೆಯೊಂದರಲ್ಲಿ ಮೈಸೂರಿನಲ್ಲಿ ಕಾರ್ಯನಿರತನಾಗಿದ್ದ ದಿನಗಳವು. ನನ್ನ ವಸತಿ ಶಾಂತಲಾ ಚಿತ್ರಮಂದಿರದ ಎದುರಿಗಿರುವ ಅಖಿಲಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿಯಾಗಿತ್ತು. ಶಾಂತಲಾ ಥಿಯೇಟರ್‌ನ ಪಕ್ಕದಲ್ಲಿಯೇ ಒಂದು ವಿದ್ಯಾರ್ಥಿನಿಲಯ. ಅಲ್ಲಿ ವಿವಿಧ ರೀತಿಯ ವಿದ್ಯಾರ್ಥಿಗಳು. ಕೆಲವರು ನಿದ್ದೆಮಾಡಲು ಸ್ಥಳ ಬೇಕೆಂದು ಸೇರಿಕೊಂಡಿದ್ದರೆ, ಇನ್ನು ಕೆಲವರು ಚಟದಾಸರಾಗಿ ಮನೆಗಿಂತ ಇದೇ ಉತ್ತಮಸ್ಥಳ ಎಂದು ಭಾವಿಸಿ ವಿದ್ಯಾರ್ಥಿಗಳ ಮುಖವಾಡ ಧರಿಸಿದ್ದರು. ಹಾಗಂತ ಒಳ್ಳೆಯ ವಿದ್ಯಾರ್ಥಿಗಳೇ ಇರಲಿಲ್ಲವೆಂದಲ್ಲ. ಅಂತಹ ವಿದ್ಯಾರ್ಥಿಗಳ ಬಗ್ಗೇ ನಾನು ಈಗ ಬರೆಯಹೊರಟಿದ್ದು. ಅವರು ನಿಜವಾಗಿಯೂ ವಿದ್ಯೆಯ ಅರ್ಥಿಗಳೇ ಆಗಿ ತಮಗೆ ದೊರೆತಿರುವ ಅನುಕೂಲತೆಗಳನ್ನುಪಯೋಗಿಸಿಕೊಂಡು ಜ್ಞಾನಾರ್ಜನೆಯಲ್ಲಿ ತೊಡಗಿದ್ದರು. ಕೆಲವು ಉತ್ಸಾಹಿ ತರುಣರು ಆಗಾಗ ವಿದ್ಯಾರ್ಥಿಪರಿಷತ್ತಿಗೆ ಭೇಟಿಯಿಡುತ್ತಿದ್ದರು. ಅಂಥವರಲ್ಲಿ ನನ್ನನ್ನು ಆಕರ್ಷಿಸಿದವರು ಒಬ್ಬ ಆಯುರ್ವೇದ ವಿದ್ಯಾರ್ಥಿ ನಾರಾಯಣ ಹೆಗಡೆ, ಇನ್ನೊಬ್ಬ ಇಂಜಿನಿಯರಿಂಗ್ ವಿದ್ಯಾರ್ಥಿ ರಾಮಚಂದ್ರ ಹೆಗಡೆ.

ಒಂದಿನ ಅವರ ಒತ್ತಾಯದ ಮೇರೆಗೆ ಅವರ ಕೊಠಡಿಗೆ ಹೋಗಿದ್ದೆ. ನನಗೆ ಸ್ವಲ್ಪ ಸಾಹಿತ್ಯದಲ್ಲಿ ಆಸಕ್ತಿಯಿರುವುದನ್ನು ಗಮನಿಸಿದ್ದ ರಾಮಚಂದ್ರ ತಾನು ಡೈರಿಯಲ್ಲಿ ಗೀಚಿದ್ದ ಕೆಲವು ಕವಿತೆಗಳನ್ನು ತೋರಿಸಿದ. ಕೆಲವು ಲೇಖನಗಳನ್ನೂ ಮುಂದಿಟ್ಟ. ಮೊದಮೊದಲಿಗೆ ಅದು ತನ್ನ ಪ್ರತಿಭೆಯನ್ನು ತೋರಿಸಿಕೊಳ್ಳುವ ಉತ್ಸಾಹದಲ್ಲಿರುವ ತರುಣನೊಬ್ಬನ ವ್ಯರ್ಥಪ್ರಲಾಪ ಅನಿಸಿತು. ಆದರೂ ತುಂಬಾ ಚೆನ್ನಾಗಿದೆ ಎಂದು ಹೇಳಿ ಸುಮ್ಮನಾದೆ.

ಇನ್ನೊಮ್ಮೆ ಅವನ ಕೊಠಡಿಗೆ ಹೋದಾಗ ಗೋಡೆಯ ಮೇಲೆ ಮಂಕುತಿಮ್ಮನಕಗ್ಗದ ನುಡಿಯೊಂದು ಅರ್ಥಸಹಿತ ಅಂಟಿಸಲ್ಪಟ್ಟಿತ್ತು. ‘ಪ್ರತಿದಿನ ಕಗ್ಗದ ಒಂದೊಂದು ನುಡಿಯನ್ನು ಹೀಗೆ ಬರೆದು ಹಚ್ಚುತ್ತಿದ್ದೇನೆ’ ಎಂಬ ವಿವರಣೆ ರಾಮುವಿನಿಂದ ಬಂತು. ಸ್ವಲ್ಪದಿನಗಳ ನಂತರ ಕಗ್ಗದ ಜೊತೆಗೆ ಕೆಲವು ಕವಿತೆಗಳೂ, ಪುಟ್ಟ ಪುಟ್ಟ ಬರಹಗಳೂ ಕಾಣಿಸಿದವು. ‘ಭಟ್ರೆ, ಒಂದು ಭಿತ್ತಿಪತ್ರಿಕೆ ಮಾಡುವ ವಿಚಾರವಿದೆ’ ಎಂದು ರಾಮು ಹೇಳಿದಾಗ ಇವನೇನು ಇಂಜಿನಿಯರಿಂಗ್ ಕಲಿಯಲು ಬಂದಿದ್ದಾನೋ ಇಲ್ಲ ಪತ್ರಿಕೆ ಮಾಡಲೋ ಎಂದು ನಗು ಬಂದರೂ, ಇಂತಹ ಯುವಕನೊಬ್ಬನಲ್ಲಿ ಸಾಹಿತ್ಯದ ಬಗ್ಗೆ ಇಷ್ಟೊಂದು ಆಸಕ್ತಿ ಇದೆಯಲ್ಲ ಎಂದು ಖುಷಿಯೂ ಆಯಿತು. ಎಷ್ಟು ದಿನ ನಡೆಯುತ್ತದೆಯೋ ನಡೆಯಲಿ ಎಂದು ಬೆನ್ನು ತಟ್ಟಿದೆ.

ನೋಡನೋಡುತ್ತಿದ್ದಂತೆಯೇ ಒಂದು ಭಿತ್ತಿಪತ್ರಿಕೆ ಸಿದ್ಧವಾಯಿತು. ತನ್ನ ಕಾವ್ಯಕನ್ನಿಕೆ ‘ಚೈತ್ರರಶ್ಮಿಯ’ ಹೆಸರನ್ನೇ ಈ ಪತ್ರಿಕೆಯ ಹಣೆಪಟ್ಟಿಗೂ ಅಂಟಿಸಿದ. ‘ಭಟ್ಟರೆ, ನಾಲ್ಕಾರು ಪ್ರತಿ ಝೆರಾಕ್ಸ್ ಮಾಡಿಸಿಕೊಡಿ ಗೆಳೆಯರಿಗೆಲ್ಲ ಹಂಚುತ್ತೇನೆ’ ಅಂದ. ಆಯಿತು ಎಂದು ಕೆಲವು ಪ್ರತಿ ತೆಗೆದುಕೊಟ್ಟೆ. ‘ಇದು ನಿಮ್ಮಿಂದಲೇ ಬಿಡುಗಡೆಯಾಗಬೇಕು’ ಎಂದಾಗ ನಗು ಬಂದರೂ





ಹಸ್ತಬರಹದ ಆ ಕಾಗದದ ಮಡಿಕೆಯನ್ನು ಬಿಚ್ಚಿ ವಿದ್ಯುಕ್ತವಾಗಿ ಬಿಡುಗಡೆ ಮಾಡಿದೆ.

ಹೀಗೆಯೇ ಒಂದೆರಡು ತಿಂಗಳು ಏಳಿ ಆಕಾರದ ಕಾಗದದಲ್ಲಿ ಒಂದು ಮಗ್ಗಲಿನಲ್ಲಿ ಕೈಯಿಂದಲೇ ಬರೆದು ಪತ್ರಿಕೆ ಪ್ರಕಟವಾಯಿತು. ಅಷ್ಟರಲ್ಲಿ ನಾನು ಮೈಸೂರು ಬಿಡುವ ಪ್ರಸಂಗ ಬಂತು. ನಾನು ಗೋವಾಕ್ಕೆ ಬಂದು ನೆಲಸಿದ ನಂತರ ಒಂದಿನ ರಾಮುವಿನ ಕರೆ ಬಂತು. ‘ಈ ಸಲ ಕವನ ವಿಶೇಷಾಂಕವನ್ನು ಮಾಡಬೇಕೆಂದಿದ್ದೇನೆ, ಡಿ.ಟಿ.ಪಿ ಮಾಡಿಸುವ ವಿಚಾರವೂ ಇದೆ’ ಎಂದ. ಈಗಾಗಲೇ ವಿದ್ಯಾಭ್ಯಾಸ ಮುಗಿಸಿ ತಾಂತ್ರಿಕ ನಗರಿ ಬೆಂಗಳೂರನ್ನು ಸೇರಿದ್ದ ರಾಮುವಿನ ತಲೆಗೆ ಈ ವಿಚಾರಬಂದಿದ್ದು ಆಶ್ಚರ್ಯವೇನಲ್ಲ. ಹೀಗೆ ಮೊದಲ ಡಿ.ಟಿ.ಪಿ. ಪ್ರತಿ ಹೊರಬಂತು.

ಕಂಪ್ಯೂಟರ್ ಎಂಬ ಮಿದುಳಿಗೆ ಸಿಕ್ಕ ಚೈತ್ರ ರಶ್ಮಿಯ ರೂಪ ಬದಲಾಗುತ್ತ ಹೋಯಿತು. ಏಳಿ ಆಕಾರದ ಹಾಳೆಯ ಒಂದೇ ಮಗ್ಗುಲಿನಲ್ಲಿ ಮುದ್ರಣ ಕಾಣುತ್ತಿದ್ದ ಚೈತ್ರರಶ್ಮಿ ಎರಡೂ ಮಗ್ಗುಲಿಗೆ ಮುದ್ರಣವಾಗತೊಡಗಿತು. ಇಷ್ಟರಲ್ಲೇ ನೋಂದಣಿಗೂ ಪ್ರಯತ್ನ ನಡೆದಿತ್ತು. ಅವರ ಕೋರಿಕೆಯಂತೆ ಪತ್ರಿಕೆ ೧/೮ ಆಕಾರವನ್ನು ಪಡೆದುಕೊಂಡಿತು. ಒಂದೆರಡು ವರ್ಷಗಳಲ್ಲೇ ಚೈತ್ರರಶ್ಮಿಯ ಓದುಗರ ಹಾಗೂ ಬರಹಗಾರರ ಸಂಖ್ಯೆ ಗಣನೀಯವಾಗಿ ಏರಿತ್ತು. ಈಗ ಚೈತ್ರರಶ್ಮಿ ಹೇಗಿದೆ ಎಂಬುದು ನಿಮಗೆಲ್ಲ ಗೊತ್ತಿರುವ ವಿಷಯವೇ.

ಚೈತ್ರರಶ್ಮಿಯ ಕೆಲವೊಂದು ವೈಶಿಷ್ಟ್ಯವನ್ನು ನಾವು ಗಮನಿಸಲೇ ಬೇಕು. ಚೈತ್ರರಶ್ಮಿ ಆರಂಭವಾದುದು ಹಸ್ತಪ್ರತಿಯಿಂದ. ಇಂದು ಹದಿನಾರು ಪುಟಗಳ ಸುಂದರವಾಗಿ ಮುದ್ರಿತವಾದ ಪತ್ರಿಕೆ ಪ್ರಕಟವಾಗುತ್ತಿದೆ. ಸಾಮಾನ್ಯವಾಗಿ ಪತ್ರಿಕೆಯನ್ನು ಆರಂಭಿಸುವವರು ಕನಿಷ್ಠ ಆರು ತಿಂಗಳಿಗಾಗುವಷ್ಟು ಲೇಖನಗಳನ್ನು ಮೊದಲೇ ಸಿದ್ದಮಾಡಿಟ್ಟುಕೊಂಡಿರುತ್ತಾರೆ. ಚೈತ್ರರಶ್ಮಿಯಲ್ಲಿ ಅಂತಹ ಲೇಖನ ಬಂಡವಾಳ ಮತ್ತು ಆರ್ಥಿಕ ಬಂಡವಾಳ ಸಂಗ್ರಹವೇನೂ ಇರಲಿಲ್ಲ. ಯಾಕೆಂದರೆ ಚೈತ್ರರಶ್ಮಿಯ ಆರಂಭದ ಉದ್ದೇಶ ನಮ್ಮ ಸುತ್ತಲಿನವರನ್ನು ಬರೆಯಲು ಪ್ರೇರೇಪಿಸುವುದಾಗಿತ್ತು. ‘ಸೃಜನಶೀಲತೆಯ ಹುಡುಕಾಟ’ವೇ ಇದರ ಗುರಿಯಾಗಿತ್ತು. ಹಾಗಾಗಿ ಒಂದು ಸಂಚಿಕೆ ಸಿದ್ಧವಾದ ತಕ್ಷಣ ಮತ್ತೊಂದು ಸಂಚಿಕೆಗಾಗಿ ಹುಡುಕಾಟ ಆರಂಭವಾಗುತ್ತಿತ್ತು. ದೊಡ್ಡ ಬಾಯಿಯೊಂದಿಗೆ ಆರಂಭವಾದ ಪತ್ರಿಕೆಗಳನೇಕ ಒಂದೆರಡು ತಿಂಗಳಿನಲ್ಲೇ ಮುಚ್ಚಿಹೋದ ಉದಾಹರಣೆಯೂ ಇದೆ. ಚೈತ್ರರಶ್ಮಿಯ ಉದ್ದೇಶ ಪ್ರಚಾರ ಗಿಟ್ಟಿಸುವುದಾಗಲೀ ಹಣಮಾಡುವುದಾಗಲಿ ಆಗಿರಲಿಲ್ಲ. ಹಾಗಾಗಿ ಮೈಸೂರಿನಲ್ಲಿ ಹೊತ್ತಿದ ಸಣ್ಣ ಕಿಡಿ ಇಂದು ದೀವಟಿಗೆಯಾಗಿದೆ. ಇಂದಿಗೂ ಚೈತ್ರರಶ್ಮಿಯು ಸಂಪಾದಕನ ಉತ್ಸಾಹವೆಂಬ ಬಂಡವಾಳದ ಮೇಲೆಯೆ ನಡೆಯುತ್ತಿರುವುದು ನಿಮಗೆಲ್ಲ ತಿಳಿದಿರುವ ವಿಚಾರ.

ಚೈತ್ರರಶ್ಮಿಯ ಮೂಲ ಉದ್ದೇಶ ಸೃಜನಶೀಲತೆಯ ಹುಡುಕಾಟ. ಹಳ್ಳಿಮನೆಯ ಪ್ರತಿಭೆಗಳನ್ನು ಬೆಳಕಿಗೆ ತರುವುದು. ಈ ಉದ್ದೇಶದಲ್ಲಿ ಪತ್ರಿಕೆ ಸಂಪೂರ್ಣವಾಗಿ ಸಫಲವಾಗಿದೆಯೆನ್ನಬಹುದು. ಒಂದೆಡೆ ತಮ್ಮ ಪ್ರತಿಭೆಯ ಪ್ರಕಾಶನಕ್ಕೆ ಸೂಕ್ತ ವೇದಿಕೆಯಿಲ್ಲದೆ ಪರದಾಡುತ್ತಿರುವವರಿಗೆ ವೇದಿಕೆಯಾದರೆ, ಇನ್ನೊಂದೆಡೆ ಹೆಚ್ಚು ಓದಲು ಬರೆಯಲು ಕೆಲವರಿಗೆ ಪ್ರೇರಣೆಯನ್ನು ನೀಡಿದೆ. ಮತ್ತೊಂದೆಡೆ ನಾಡಿನ ಖ್ಯಾತಪತ್ರಿಕೆಗಳಿಗೆ ಬರೆಯುವ ಆಸೆಯಿದ್ದ ಚಿಗುರು ಪ್ರತಿಭೆಗಳಿಗೆ ಯಶಸ್ಸಿನ ಮೆಟ್ಟಿಲಾಗಿದೆ. ಚೈತ್ರರಶ್ಮಿಯಲ್ಲಿ ಬರೆದು ಪಳಗಿ ಮಹಾನ್ ಪತ್ರಿಕೆಗಳಿಗೆ ಬರೆಯುವಷ್ಟು ತಯಾರಾಗಿದ್ದಾರೆ ಕೆಲವು ಮರಿಲೇಖಕರು.

ಚೈತ್ರರಶ್ಮಿಯ ಮುಖ್ಯ ವೈಶಿಷ್ಟ್ಯ ಅದರ ಸ್ತರ. 'ನಮಗೆ ಮಹಾಕಾವ್ಯ ಬೇಡ, ಬಾಲಭಾಷಿತ ಸಾಕು' ಎಂದು ಹಿಂದೊಮ್ಮೆ ಹೇಳಿದ್ದೆವು. ಹಾಗಂತ ಎಳೆಯರು ಗೀಚಿದ್ದನ್ನೆಲ್ಲ ಪ್ರಕಟಿಸುತ್ತಾ ಹೋದರೆ ಪತ್ರಿಕೆಯ ಸ್ತರ ಕುಗ್ಗುತ್ತದೆ. ಸ್ತರ ಹಾಗೂ ಪ್ರೋತ್ಸಾಹ ಎರಡನ್ನೂ ತೋಲಿಸುವುದು ಹಗ್ಗದ ಮೇಲಿನ ನಡೆಯಂತೆ. ಚೈತ್ರರಶ್ಮಿಯ ಮೊದಲ ಸಂಚಿಕೆಯಿಂದ ಇಂದಿನ ಸಂಚಿಕೆಯವರೆಗೂ ತನ್ನ ಸ್ತರವನ್ನು ಕಾಪಾಡಿಕೊಂಡು ಬಂದಿದೆ. ಲೇಖನಗಳ ಆಯ್ಕೆ, ಪರಿಷ್ಕರಣೆ ಮೊದಲಾದ ಕಾಯಕದಲ್ಲಿ ಸಂಪಾದಕರು ತೋರುತ್ತಿರುವ ಶ್ರದ್ಧೆ ಮೆಚ್ಚತಕ್ಕದ್ದು.

ಚೈತ್ರರಶ್ಮಿ ಒಂದು ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪತ್ರಿಕೆ. ಇಲ್ಲಿ ಹುಚ್ಚು ರಾಜಕೀಯ ವಿಷಯಗಳಿಗೆ ಅವಕಾಶವಿಲ್ಲ. ಪ್ರಚಲಿತ ವಿದ್ಯಮಾನಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳಿರುತ್ತವೆ. ನಮ್ಮ ಯುವಜನತೆಯನ್ನು ಚಿಂತನೆಗೆ ಹಚ್ಚುವ 'ಚಿಂತನರಶ್ಮಿ'ಯಿದೆ. ಕಳೆದು ಹೋಗುತ್ತಿರುವ ಪತ್ರ ಸಂಸ್ಕೃತಿಯನ್ನು ನೆನೆಪಿಸುವ 'ಪತ್ರರಶ್ಮಿ'ಯಿದೆ. ಹೃದಯಾಂತರಾಳದಲ್ಲಿ ಭಾವತರಂಗಗಳನ್ನು ಎಬ್ಬಿಸುವ ಭಾವರಶ್ಮಿಯಿದೆ. ಸಹೃದಯಮನೋಹಾರಿಯಾದ ಕಾವ್ಯರಶ್ಮಿಯಿದೆ. ದೇಶಭಕ್ತಿಯನ್ನು ಮೂಡಿಸುವ ಕೆಚ್ಚೆದೆಯ ಬರಹಗಳಿವೆ. ಹೆಚ್ಚಿನವರು ತಿಳಿದಿರದ ರಾಷ್ಟ್ರಭಕ್ತರನ್ನು, ಸಮಾಜಸೇವಕರನ್ನು ಪರಿಚಯಿಸುವ ಲೇಖನಗಳಿವೆ. ನಗೆಮುಗುಳನ್ನು ಅರಳಿಸುವ ಲಲಿತಸ್‌ಪ್ರಬಂಧಗಳಿವೆ. ಓದುಗರ ಬರಹಗಾರರ ಸೃಜನಾತ್ಮಕತೆಯನ್ನು ಅರಳಿಸುವ ವಿಧಾನದ ಬಗ್ಗೆ ಚಿಂತನೆ-ಸಂಶೋಧನೆ ನಿರಂತರವಾಗಿ ನಡೆದೇ ಇದೆ.

ಒಟ್ಟಿನಲ್ಲಿ ಚೈತ್ರರಶ್ಮಿಯ ಬೆಳಕಿನ ಪಯಣ ಮುಂದುವರಿದಿದೆ. ಈ ಪತ್ರಿಕೆ ಕೆಲವರಲ್ಲಿ ಬರೆಯುವ ಹವ್ಯಾಸವನ್ನು ಮೂಡಿಸಿದ್ದರೆ ಇನ್ನು ಕೆಲವರಲ್ಲಿ ಓದುವ ಹವ್ಯಾಸವನ್ನು ಬೆಳೆಸಿದೆ. ಚೈತ್ರರಶ್ಮಿಯ ಬರಹಗಾರರನೇಕರು ತಮ್ಮದೇ ಬ್ಲಾಗಿನರಮನೆ ಕಟ್ಟಿಕೊಂಡಿದ್ದಾರೆ. ಹಳೆಯ ಬರಹಗಾರರನೇಕರು ಕಳಚಿಹೋಗಿದ್ದರೂ ನಿರಂತರವಾಗಿ ಹೊಸ ಹೊಸ ಬರಹಗಾರರ ಪ್ರವಾಹ ಬರುತ್ತಲೇ ಇದೆ. ಸೃಜನಶೀಲತೆಯ ಹುಡುಕಾಟ ನಡೆದೇ ಇದೆ.

ಇದು ಚೈತ್ರರಶ್ಮಿಯ ೫೦ನೇ ಸಂಚಿಕೆ. ಮೊದಲಸಂಚಿಕೆಯಿಂದ ಈವರೆಗೂ ಜೊತೆಗಿರುವ ಕೆಲವೇ ಮಂದಿಯಲ್ಲಿ ನಾನೂ ಒಬ್ಬ. ಸುವರ್ಣಸಂಚಿಕೆಯ ಸಂದರ್ಭದಲ್ಲಿ ಆರಂಭದ ಸುವರ್ಣಕ್ಷಣಗಳನ್ನು ನೆನಪಿಸಿಕೊಳ್ಳುವುದು ಯೋಗ್ಯವಾದೀತೆಂದು ಭಾವಿಸಿ ನನ್ನ ನೆನಪಿನ ಬುತ್ತಿಯನ್ನು ನಿಮ್ಮೆದುರು ಬಿಚ್ಚಿಟ್ಟಿದ್ದೇನೆ. ಈ ೫೦ ರ ಸಂಭ್ರಮವನ್ನು ಆಚರಿಸುತ್ತಿರುವ ನಾವು ೫೦೦ ಸಂಭ್ರಮವನ್ನೂ ಅಮಿತ ಉತ್ಸಾಹದಿಂದ ಆಚರಿಸುವ ಆಶಾಭಾವನೆಯಿಂದಿರೋಣ. ■

**ಚುಟುಕ**

**ನೀ ಕಥೆಗಾತಿ!**

ಕಥೆ ಅರ್ಧಕ್ಕೇ ನಿಂತಿದೆ;
ನನ್ನ ಬದುಕಿನಲ್ಲಿ
ನಿನ್ನ ಕಥೆ
ನಿಂತೋದಂತೆ
ಹೌದು, ನೀ ಕಥೆಗಾತಿ !

*****

**ಕಟು ಸತ್ಯ**

ನಿನ್ನಲ್ಲಿ ನಾನಿಟ್ಟ
ಬೆಟ್ಟದಷ್ಟು ಪ್ರೀತಿಗೆ
ನೋವೆಂಬುದು
ಬಡ್ಡಿ!!

– ಪವನ್ ಭಟ್, ಗಂಗೋತ್ರಿ





**ಕಥಾ ರಶ್ಮಿ**

# ಹೂ ಬಿಟ್ಟ ಬೀಜ

● ಎನ್.ಆರ್. ರೂಪಶ್ರೀ, ಶಿರಸಿ

"ಅಮ್ಮಾ, ಕಣ ಮಾಡಿ ಹಾಕಿದ್ದೆಯಲ್ಲ, ಆ ಬೀಜ ಇನ್ನು ಮೊಳಕೆಯಾಗಲೇ ಇಲ್ಲ."

"ಆಗತ್ತೆ ಪುಟ್ಟಿ ನಿನ್ನೆ ಅಷ್ಟೆ ಹಾಕಿದ್ದೇನೆ. ಇವತ್ತೆ ಮೊಳಕೆ ಬಂದು ಬಿಡತ್ತಾ?"



'ಇನ್ನು ಎಷ್ಟು ದಿವಸ ಬೇಕಮ್ಮ...?'

'ನೀನೆ ಲೆಕ್ಕ ಇಡು'.

'ಇವತ್ತಾಗಲೇ ಒಂದು ದಿವಸ ಆಯ್ತು ಅಲ್ವೇನಮ್ಮ'.

'ಹೌದು ಪುಟ್ಟಿ. ಇನ್ನು ಹದಿನೈದು ಇಪ್ಪತ್ತು ದಿವಸ ಬೇಕು. ಅದು ಮೊಳಕೆಯೊಡೆಯಲು',

'ಅಷ್ಟು ದಿವಸನಾ..?'

'ಪುಟ್ಟಿ ನೀನು ತಕ್ಷಣಕ್ಕೆ ಬೆಳೆದು ಬಿಟ್ಟೆಯಾ? ನಿನ್ಗೆ ದಿನಾ ಸಣ್ಣಿರುವಾಗ ಹಾಲು, ಹಣ್ಣಿನ ರಸ ಕೊಡ್ತಾ ಕೊಡ್ತಾ ಬೆಳಲಿಲ್ವಾ...? ಈಗ ಎಷ್ಟು ಮುದ್ದು ಮುದ್ದಾಗಿ ಮಾತನಾಡ್ತಿ ನೋಡು.... ಹಾಗೆ... ಆ ಬೀಜನೂ ಪುಟ್ಟಿ. ದಿನಾ ನೀರು ಸಿಂಪಡಿಸಬೇಕು. ನೋಡ್ತಾ ಇರಬೇಕು. ಇರುವೆ ಬರದ ರೀತಿ ರಕ್ಷಿಸಬೇಕು. ಹೀಗೆ ಮಾಡಿದ್ರೆ ನೋಡು ಹೇಗೆ ಚೆನ್ನಾಗಿ ಮೊಳಕೆ ಬರತ್ತೆ ಅಂತಾ',

'ಹೌದು... ಅಮ್ಮಾ... ಹಾಗಾದ್ರೆ ನಾನು ದಿನಾ ಅದಕ್ಕೆ ನೀರು ಹಾಕ್ತೇನೆ'.

'ಮತ್ತೆ ನಿನ್ನ ಹೋಂವರ್ಕ್ ... ಎಲ್ಲ'.

'ಇದರ ಜೊತೇನೆ ಮಾಡ್ಕೋತೀನಿ ಅಮ್ಮಾ',

'ಹಾಗಾದ್ರೆ ನಾನು ನೋಡಲಿಕ್ಕೆ ಬರೋದಿಲ್ಲ, ಆಯ್ತಮ್ಮ'.

ನಮ್ಮ ಮದುವೆಯಾಗಿ ಹದಿನೈದು ವರ್ಷದ ನಂತರ ಹುಟ್ಟಿದವಳು ಪುಟ್ಟಿ. ಹೆಸರು ರಕ್ಷಿತಾ ಎಂದಾದರೂ ಅವಳು ಎಲ್ಲರ ಬಾಯಲ್ಲಿ ಪುಟ್ಟಿಯೇ ಆಗಿದ್ದಳು. ತುಂಟತನ, ನಗು, ಸ್ವಲ್ಪ ಹಠ, ಎಲ್ಲದರ ಜೊತೆಗೆ ನಮ್ಮ ಮನೆಯ ಕಣ್ಮಣಿಯಾಗಿ ಬೆಳೆದವಳು. ಮಕ್ಕಳಿಲ್ಲ ಎಂದು ಕೊರಗಿ, ಕೊರಗಿ ಅಂತು ನನ್ನ ಹೊಟ್ಟೆಯಲ್ಲೊಂದು ಕುಡಿ ಒಡೆದಿತ್ತು. ಆಗಿನ ಸಂಭ್ರಮ ಹೇಳತೀರದು. ಪುಟ್ಟಿ ಹುಟ್ಟಿದಾಗಿನಿಂದ ಮನೆಯಲ್ಲಿ ಎಷ್ಟು ಹೊತ್ತಿಗೂ ಸಂತಸ. ಮನೆಯವರ ಆನಂದಕ್ಕಂತು ಪಾರವೇ ಇಲ್ಲ.

ಈಗ ಎರಡನೇ ತರಗತಿ ಓದುತ್ತಿರುವ ಪುಟ್ಟಿ ಮುದ್ದು ಮುದ್ದಾಗಿ ಮಾತನಾಡುತ್ತೆ. ಪ್ರಶ್ನೆಗಳ ಮೇಲೆ ಪ್ರಶ್ನೆ. ಎಲ್ಲವೂ ಕೂಡಲೇ ಆಗಿಬಿಡಬೇಕು. ಕಾಯುವ ತಾಳ್ಮೆಯೇ ಇಲ್ಲ. ಅವಳಿಗೇನು ಗೊತ್ತು ನಾನು ಹದಿನೈದು ವರ್ಷ ಅವಳ ಬರುವಿಕೆಗಾಗಿ ಕಾದಿದ್ದು। ಶಾಲೆಯಲ್ಲೂ ತುಂಬಾ ಚೂಟಿ, ಎಲ್ಲದರಲ್ಲೂ ಮುಂದು.

ನಿನ್ನೆ ಹಿತ್ತಲಲ್ಲಿ ಪಾತಿಮಾಡುತ್ತಿದ್ದಾಗ ... 'ಅಮ್ಮ ... ಈ ಗಿಡದ ಹೂವು ನೋಡು ಎಷ್ಟು ಚಂದ ಚಂದ' ಹೇಳುತ್ತಲೇ ನಾನು ಹಾಕುತ್ತಿದ್ದ ಬೀಜ ನೋಡುತ್ತಿದ್ದಳು. ಆಗಲೇ ಅವಳಿಗೆ ಕುತೂಹಲ, ಗುಂಡು ಗುಂಡಗಿನ ಮಾತ್ರೆ ಥರಹ ಇದೆ ಇದು, ಗಿಡ ಆಗತ್ತಾ..?

ಹೌದು ಪುಟ್ಟಿ... ಇದು ಮೊಳಕೆಯೊಡೆದು ಗಿಡ ಆಗಿ ಹೂವು ಬಿಡತ್ತೆ ನೋಡ್ತಾ ಇರು... ಎಂದಾಗಲಂತೂ ಪುಟ್ಟಿಗೆ ಮತ್ತೂ ಆಶ್ಚರ್ಯ..., ಹೌದಾ.. ಎಂದು ಮುಖ ಅಗಲಿಸಿದಳು. ಕೆಲಸ ಮುಗಿಸಿ ಮನೆ ಒಳಗೆ ಬಂದರೂ ಪುಟ್ಟಿಗೆ ಬೀಜದ್ದೆ ಸುದ್ದಿ. ನಾನೇ ನೋಡ್ಕೋತೀನಿ ಎನ್ನುವ ವಾಗ್ದಾನ ಬೇರೆ. ಆಕೆಯ ಆಸಕ್ತಿಗೆ ನಾನು ಪ್ರೋತ್ಸಾಹಿಸಿದೆ. ಕಪ್ಪಾದರೂ ಹಿತ್ತಲಿಗೆ ಬ್ಯಾಟರಿ ತಗೊಂಡು ಹೋಗಿ ನೋಡ್ಕಂಡು ಬಂದಾಗಿತ್ತು. 'ಅಮ್ಮಾ .... ಇರುವೆ ಬಂದಿಲ್ಲ ಹಾಗೆ ಇದೆ.'

ಪುಟ್ಟಿ ರಾತ್ರಿ ಹೋಗಬೇಡ ಅಂದರೂ ಬೀಜದ ಕಾಳಜಿಯಲ್ಲಿ ನನ್ನ ಮಾತನ್ನು ಕೇಳುತ್ತಿರಲಿಲ್ಲ. ರಾತ್ರಿ ಮಲಗಿದ್ದಾಗಲೂ ಬೀಜದ ಕನವರಿಕೆ. ನನಗಂತೂ ಯಾಕಾದ್ರೂ ಅವಳ ಎದುರಿಗೆ ಹಾಕಿದೆನೋ ಅನ್ನಿಸುತ್ತಿತ್ತು. ಆದರೂ ಮಕ್ಕಳ ಮನಸ್ಸಿನ ಕೋಮಲತೆಯ ಬಗ್ಗೆ ನನ್ನ ಅಂತಃಕರಣವೂ ಕಲಕುತ್ತಿತ್ತು.

ದಿನಾ ನೋಡಿ, ನೋಡಿ, ಅಂತು ಹತ್ತನೇ ದಿವಸಕ್ಕೆ ಕೊಂಚ ಮೊಳಕೆ ಎದ್ದಿತು. ಪುಟ್ಟಿಯ ಉತ್ಸಾಹಕ್ಕಂತೂ ಪಾರವೇ ಇಲ್ಲ. ತನ್ನ ಗೆಳತಿಯರಿಗೆಲ್ಲ ಹೇಳಿ ಕುಣಿದಾಡಿದ್ದಳು. ಪ್ರತಿದಿನ ನೀರನ್ನು ಶ್ರದ್ಧೆಯಿಂದ ಹಾಕುತ್ತಿದ್ದಳು. ನಾನು ಬಿತ್ತಿದ್ದ ಪ್ರತಿಯೊಂದು ಬೀಜವೂ ಮೊಳಕೆಯೊಡೆದಿತ್ತು. ಒಂದೂ ಹಾಳಾಗಿರಲಿಲ್ಲ. ಪುಟ್ಟಿಯ ಕಾಳಜಿಯೇ ಅದಕ್ಕೆ ಕಾರಣವಾಗಿತ್ತು. ಒಂದು ಬೆಕ್ಕು, ನಾಯಿ, ಆ ಕಣದ ಸುತ್ತ ಓಡಾಡುವಂತಿರಲಿಲ್ಲ, ಓದುವಾಗಲೂ ಬಾಗಿಲನ್ನು ತೆರೆದು ಮೊಳಕೆ ನೋಡುತ್ತಲೇ ಓದುತ್ತಿದ್ದಳು. ಮೊಳಕೆಗಳೆಲ್ಲ ನಿಧಾನಕ್ಕೆ ಬೆಳೆಯತೊಡಗಿತ್ತು. ಸ್ವಲ್ಪ ಗೊಬ್ಬರ ಹಾಕಿ, ಮಣ್ಣು ಏರಿಸಿಕೊಟ್ಟಿದ್ದಳು. ನಾನು ಹಾಕ್ತೀನಿ ಪುಟ್ಟಿ.... ನಿನ್ನ ಕೈಯೆಲ್ಲ ರಾಡಿ ಅಗತ್ತೆ ಅಂದರೂ, ಕೇಳ್ತಿರಲಿಲ್ಲ... ಇಲ್ಲ ಅಮ್ಮ ನಾನೇ ಹಾಕಬೇಕು ಎನ್ನುವ ಹಠ. ಗೆಳತಿಯರ ಹತ್ತಿರ ಮನೆಗೆ ಬಂದಾಗಲೆಲ್ಲ ವರ್ಣನೆ. ಪುಟ್ಟಿ 'ಪುಟ್ಟ ಮಾತ್ರೆ ಥರಹ ಇತ್ತು. ಈಗ ನೋಡು ಹೇಗೆ ಹಸಿರಾಗಿ ಗಿಡ ಬೆಳೀತಿದೆ. ಇದು ನಮ್ಮ ಥರಾನೇ...ನಿಮ್ಮ ಮನೆಲೂ ಹಾಕ್ರೆ' ಎಂದು ಒತ್ತಾಯಿಸುತ್ತಿದ್ದಳು. ಒಂದಿಬ್ಬರು ನನ್ನ ಹತ್ತಿರಾನೆ ಬೀಜ ಒಯ್ದು ಹಾಕಿದ್ದರು. ಆದರೆ ಅವರ  ಅವರ ಮನೇಲಿ ಸರಿಯಾಗಿ ಬೆಳೆದಿರಲಿಲ್ಲ. ಆಗಂತೂ ನೋಡಿದೆಯಾ ಅಮ್ಮಾ...... ನಮ್ಮ ಮನೇಲಿ ಹೇಗೆ ಬೆಳದಿದೆ ಅಂತಾ... ಎಂದು ಕಾಲರ್ ಹಾರಿಸುತ್ತಿದ್ದಳು. ಆಕೆಯ ಖುಷಿಯಲ್ಲಿ ನಾವಿಬ್ಬರೂ ಭಾಗಿಯಾಗಿದ್ದೆವು.

ಒಂದು ದಿವಸ ಮನೆಗೆ ಓಡಿ ಬಂದಳು, ಅಮ್ಮಾ... ಇಲ್ಲಿ ದನ ಬಂದಿತ್ತಾ..? ಇಲ್ಲ ಪುಟ್ಟಿ ಯಾಕೆ... ಎಂದೆ. ಅಮ್ಮಾ ನಮ್ಮ ಶಾಲೆಯಲ್ಲಿ ದನ ಬಂದು ಗಿಡನ್ನೆಲ್ಲ ತಿಂದು ಬಿಡ್ತು ಅದಕ್ಕೆ ಇಲ್ಲಿಯೂ ಬಂತೆನೋ ಅಂತ... ಕ್ಲಾಸಿದ್ದರೂ ಬಂದು ಬಿಟ್ಟೆ ಅಮ್ಮಾ... ಅಂದಳು. ಪುಟ್ಟಿ ನಾನು ನೋಡಲ್ವಾ.....? ಶಾಲೆಗೆ ಹೋಗು ಅಂದೆ. ಆಯ್ತಮ್ಮ ಎಂದು ಹೊರಟಳು. ಆದರೂ ಮುಖದಲ್ಲಿ





ಒಂದು ರೀತಿಯ ಅಸಂತೋಷ. ದಿನದ ಗೆಲುವಿರಲಿಲ್ಲ. ಸಂಜೆ ಬಂದಾಗ ಕೇಳಿದ್ರಾಯ್ತು ಎಂದು ಸುಮ್ಮನಾದೆ.

ಗಿಡ ಸಾಕಷ್ಟು ದೊಡ್ಡದಾಗಿತ್ತು. ಒಂದು ರೀತಿ ಸೊಕ್ಕಿನಿಂದ ಬೆಳೆದಿತ್ತು. ಚಿಕ್ಕ ಚಿಕ್ಕ ಮೊಗ್ಗಾಗಿತ್ತು. ಅಮ್ಮಾ ಇದ್ಯಾವ ಹೂ... ಎಂದಳು. ಜಿನಿಯಾ ಪುಟ್ಟಿ ಎಂದೆ. ತುಂಬಾ ಕಲರ್ ಆಗತ್ತಲ್ಲಾ.... ಎಂದಳು. ಹೌದು ಪುಟ್ಟಿ ಇದರಲ್ಲಿ ಒಟ್ಟು ನಾಲ್ಕು ಜಾತಿ ಇದೆ ಅಂದೆ. ಅಬ್ಬಾ....... ಎಲ್ಲ ಬಿಟ್ಟರೆ ಎಷ್ಟು ಚಂದ ಅಲ್ವಾ... ಅಂದಳು. ಹೌದು ಪುಟ್ಟಿ ನಿನ್ನ ಥರಹ ಚೆನ್ನಾಗಿ ಕಾಣತ್ತೆ ಅಂದೆ. ಅಮ್ಮಾ ಇನ್ನೊಂದೆರಡು ದಿವಸದಲ್ಲಿ ಹೂ ಬಿಡಬಹುದಾ ಎಂದಳು. ಬಿಡತ್ತೆ ಪುಟ್ಟಿ. ಈಗ ಒಳಗೆ ನಡಿ ತುಂಬ ತಂಪಿದೆ ಹಿತ್ತಲಲ್ಲಿ ಎಂದೆ.

ಆಗಲೇ ಪುಟ್ಟಿಗೆ ಶೀತ ಪ್ರಾರಂಭವಾಗಿತ್ತು. ಬೆಳಗ್ಗೆ ಮುಖ ಕಳೆಗುಂದಿದ್ದಕ್ಕೆ ಕಾರಣ ತಿಳಿಯಿತು. ಔಷಧಿ ಕೊಟ್ಟು ಮಲಗಿಸಿದೆ. ರಾತ್ರಿ ಮೈಯೆಲ್ಲ ಕೆಂಡ. ಮನೆಯವರು ಕೆಲಸದ ನಿಮಿತ್ತ ದೆಹಲಿಗೆ ಹೋಗಿದ್ದರು. ದಿಕ್ಕೇ ತೋಚದಾಯ್ತು. ಜ್ವರದ ತಾಪಕ್ಕೆ... ಅಮ್ಮಾ... ಮೊಗ್ಗು... ಹೂವು... ಎಂದು ಬಡಬಡಿಸುತ್ತಿದ್ದಳು. ಅಂತು ಬೆಳಗಾದ ತಕ್ಷಣ ಡಾಕ್ಟರ್ ಹತ್ತಿರ ಓಡಿದೆ. ಪರೀಕ್ಷಿಸಿದ ಡಾಕ್ಟರ್ ತಕ್ಷಣ ಅಡ್ಮಿಟ್ ಆಗಬೇಕು ಅಂದರು. ಒಮ್ಮೆ ಕುಸಿದು ಬಿಟ್ಟೆ. ಡಾಕ್ಟರ್ ಜೀವಕ್ಕೇನು ತೊಂದರೆ ಇಲ್ವಲ್ಲಾ ಎಂದೆ. ಹೇಳಕ್ಕಾಗಲ್ಲ. ತುಂಬ ಜ್ವರ ಇದೆ ನೋಡೋಣ ಎಂದರು. ಮನೆಯವರು ಬಂದಿದ್ದರು. ಆಸ್ಪತ್ರೆಯ ಬೆಡ್ ಮೇಲೆ ಪುಟ್ಟಿ ಶಾಂತವಾಗಿ ಮಲಗಿದ್ದಳು, ಮನೇಲಿ ಎಷ್ಟು ಹೊತ್ತಿಗೂ ಚಿನಕುರುಳಿ ರೀತಿ ಓಡಾಡ್ತಾ ನಗ್ತಾ ಇದ್ದ ಪುಟ್ಟಿ ಈಗ ಸ್ತಬ್ದವಾಗಿದ್ದಳು. ಕಣ್ಣನ್ನ ಆಗಾಗ ತೆರೆದು ಮುಚ್ಚಿ ಮಾಡುತ್ತಿದ್ದಳು. ಹೊಟ್ಟೆಗೆ ಏನೂ ತಗೋತಿರಲಿಲ್ಲ. ಒತ್ತಾಯ ಮಾಡಿದರೆ ಒಂಚೂರು ಹಣ್ಣಿನ ರಸ. ಆಗಲೇ ಡಾಕ್ಟರ್ ಗುಳಿಗೆ ಔಷಧಿ ಕೊಟ್ಟಿದ್ದರು. ಆದರೂ ಜ್ವರ ಇಳಿದಿರಲಿಲ್ಲ. ಕಣ್ಣು ಮುಚ್ಚಿಯೇ ಪುಟ್ಟಿ..... ಅಮ್ಮಾ ಹೂವು ಹೂವು ಎನ್ನುತ್ತಿದ್ದಳು. ನನಗಂತು ಕರುಳೇ ಕಿವುಚಿದಂತಾಗುತ್ತಿತ್ತು. ಹೂ ಬಿಡತ್ತೆ ಪುಟ್ಟಿ..... ನೀನು ಆರೋಗ್ಯವಾಗಿ ಬಾ... ಮತ್ತಷ್ಟು ಹಾಕೋಣ ಹಿತ್ತಲಲ್ಲಿ ಎಂದೆ. ಸಮಾಧಾನ ಆಯ್ತೋ ಏನೋ... ಸುಮ್ಮನೆ ಮಲಗಿದಳು. ಡಾಕ್ಟರ್ ಬಂದು ಏಳಮ್ಮ..... ಏಳಮ್ಮ... ಅಲುಗಾಡಿಸಿದರು. ಇಲ್ಲ... ಪುಟ್ಟಿ... ಪುಟ್ಟಿ... ಕಣ್ಣು ಬಿಡುತ್ತಿಲ್ಲ. ಮಾತನಾಡುತ್ತಿಲ್ಲ. ಡಾಕ್ಟರ್ ಎಷ್ಟೇ ಪ್ರಯತ್ನ ಪಟ್ಟರು ಪುಟ್ಟಿ ಏಳಲಿಲ್ಲ. ಡಾಕ್ಟರ್ ಉಸಿರಾಟ ನಿಂತಿದೆ ಎಂದರು. ಬವಳಿ ಬಂದು ಬೀಳುತ್ತಿದ್ದ ನನ್ನನ್ನು ನರ್ಸ್ ಹಿಡಿದರು.

ಹದಿನೈದು ವರ್ಷದ ನಂತರ ಒಂದು ಕುಡಿ ಚಿಗುರಿತ್ತು. ಈಗ... ಮನೆ ತುಂಬ ಅರಣ್ಯರೋದನ. ಮಾತು ಮೌನವಾಗಿತ್ತು. ಶೂನ್ಯ ಆವರಿಸಿತ್ತು. ಮಕ್ಕಳಿಲ್ಲದಿದ್ದರೆ ಚೆನ್ನಾಗಿತ್ತೇನೋ... ಈ ರೀತಿ... ಪುಟ್ಟಿ ಇಲ್ಲದೆ ಇರೋದಾದ್ರೂ ಹೇಗೆ? ಮನೆಯಲೆಲ್ಲ ಅಕೆಯ ಓಡಾಟದ್ದೆ ನೆನಪು... ಎಲ್ಲಿ ನೋಡಿದರೂ ಅಮ್ಮ... ಅಮ್ಮ ಎಂದು ಕರೆದಂತೆ. ಎರಡು ದಿನದಿಂದ ಅಡಿಗೆ ಮಾಡಿರಲಿಲ್ಲ. ಅಡಿಗೆ ಮಾಡಿಟ್ಟು ಹಿತ್ತಲಿಗೆ ಹೋದರೆ ಜಿನಿಯಾ ಹೂ ಬಿಟ್ಟಿತ್ತು.  ಒಮ್ಮಲೇ ದುಃಖ ಉಮ್ಮಳಿಸಿ ಬಂತು. ಹಿತ್ತಲಲ್ಲೆ ಕುಸಿದು ಕುಳಿತೆ. ಪುಟ್ಟಿ .... ಹೂ ಬಿಟ್ಟಿದೆ ನೊಡೇ... ನೋಡೇ... ಎಂದೆ. ಎಲ್ಲಿ ಪುಟ್ಟಿ... ಎಲ್ಲ ಬರಿದು ಮಾಡಿ ಹೋಗಿಬಿಟ್ಟಳು. ನನ್ನ ಒಡಲು.... ಮಡಿಲು ಎಲ್ಲ. ಹಗಲು ಇರುಳು ಬೀಜ, ಮೊಳಕೆ, ಗಿಡ, ಮೊಗ್ಗು ಎನ್ನುವ ಕನವರಿಕೆಯಲ್ಲಿ ಕಳೆದ ಪುಟ್ಟಿ ಹೂ ನೋಡಲೇ ಇಲ್ಲ. ಕಿತ್ತು ಹಾಕಿ ಬಿಡಲೆ ಎನಿಸಿತು. ಹೂ ನೋಡಿದಾಗಲೆಲ್ಲ ದುಃಖ ತಡೆಯಲಾಗುತ್ತಿರಲಿಲ್ಲ. ಆದರೆ ಪುಟ್ಟಿ ಅದೆಷ್ಟು ಪ್ರೀತಿಯಿಂದ ಬೆಳೆಸಿದ್ದಳು. ಅವಳಿಗೂ ಒಂದು ಮಗುವಾದಂತೆ। ಹೂವೆ ಪುಟ್ಟಿ ಎಂದು ಸಮಾಧಾನ ಮಾಡ್ಕೊಂಡೆ.

ಅದರೂ ಹೃದಯದ ಕಂಪನ ಕಡಿಮೆಯಾಗುತ್ತಲೇ ಇರಲಿಲ್ಲ.

ಮನೆಯಲ್ಲಿ ದೀಪ ಹಚ್ಚದೆ ಎಷ್ಟೋ ದಿನವಾಗಿತ್ತು. ಮನೆಯವರು ಜರ್ಜರಿತವಾಗಿದ್ದರು. ಪುಟ್ಟಿ ಕೊಟ್ಟು ಹೋದ ಆಘಾತ ಮರೆಯುವ ಲಕ್ಷಣಗಳೇ ಇರಲಿಲ್ಲ. ನಮ್ಮಿಬ್ಬರ ಕಣ್ಣಲ್ಲಿ ನೀರ ಹೊರತು ಮತ್ತೇನೂ ಕಾಣಲು ಸಾಧ್ಯವಿರಲಿಲ್ಲ. ರಾತ್ರಿ ಮಲಗಿದರೆ ಬೆಳಗ್ಗೆ ಏಕಾಗತ್ತೋ ಎನ್ನುವ ಚಿಂತೆ. ಮನೆಯ ತುಂಬ ಪುಟ್ಟಿಯ ತೊದಲು ಮಾತಿನ ನೆನಪು, ರೀ... ನಾಳೆ ಪುಟ್ಟಿ ಹೋಗಿ ಒಂದು ತಿಂಗಳು ಎಂದೆ. ಮನೆಯವರು ಆಕಾಶದತ್ತ ಕಣ್ಣು ತಿರುಗಿಸಿದರು.

ಬೆಳಗ್ಗೆ ರಂಗೋಲಿ ಹಾಕಲೆಂದು ಬಾಗಿಲು ತೆರೆದರೆ... ಹೊಸ್ತಿಲ ಬಳಿ ಮಗುವಿನ ಅಳು. ಸಂತೋಷ ಕುತೂಹಲ, ಆಶ್ಚರ್ಯ, ಆಚೆ... ಈಚೆ ನೋಡಿದೆ. ಯಾರೂ ಕಾಣಲಿಲ್ಲ. ತಕ್ಷಣ ಎದೆಗವಚಿಕೊಂಡೆ, ರೀ... ಏಳ್ರೀ.... ಪುಟ್ಟಿ ಬಂದಿದ್ದಾಳೆ ಎಂದೆ. ಆಗಷ್ಟೇ ಹುಟ್ಟಿದ ಮಗು.... ಮುದುರಿ ನನ್ನ ಮಡಿಲಲ್ಲಿ ಮಲಗಿತ್ತು. ಯಾರದ್ದೋ ಏನೋ... ವಿಚಾರಿಸೋಣ ಬಾ... ಎಂದರು. ಬೇಡ ರೀ......., ಆದರೂ ಅವರು ಸುತ್ತಮುತ್ತ ಕೇಳಿದರು. ಯಾರೂ ಗೊತ್ತಿಲ್ಲ ಎಂದರು. ನಾನಂತು ಸದ್ಯ ಎಂದು ನಿಟ್ಟುಸಿರಿಟ್ಟೆ. ಮನೆಯವರಿಗೂ ಅಮಿತ ಆನಂದ, ಮತ್ತೆ ರಕ್ಷಿತಾ ಹುಟ್ಟಿ ಬಂದಿದ್ದಳು. ನಮ್ಮ ಮನೆಯ ಪುಟ್ಟಿಯಾಗಿ, ಮತ್ತೊಂದು ಕುಡಿ ಒಡೆದಿತ್ತು. ಅರಳಿ ನಿಂತ ಜಿನಿಯಾ ಸ್ವಾಗತಿಸಿತ್ತು. ನಾನು ಮತ್ತೆ ಕಣ ಮಾಡಿ ಬೀಜ ಹಾಕುವ ತಯಾರಿಯಲ್ಲಿದ್ದೆ. ಹಿತ್ತಲ ಬಳಿಯೇ ಅಂಬೆ ಹರಿಯುತ್ತ ಬಂದ ಪುಟ್ಟಿ ಬೀಜ ಕೆದಕುತ್ತಿತ್ತು. ಈಗಲೇ ತಯಾರಿನಾ..... ಪುಟ್ಟಿ ಎಂದು ಮುತ್ತಿಟ್ಟು ಎದೆಗವಚಿಕೊಂಡೆ. ಆದರೂ ಕೆಳಗಿಳಿಯಬೇಕೆಂಬ ಹಠ. ಪುಟ್ಟಿಯ ರೀತಿ..... ಹೂ ತೋರಿಸುತ್ತಿದ್ದಂತೆ ಮರೆತು ನಗತೊಡಗಿತು. ಜೊತೆಯಲ್ಲಿ ನಾನು ... ■

## ಕವಿ ಸಮಯ

ಕವಿ ಸೃಷ್ಟಿಯಲಿ ಕಂಡ ಕನಸೆಷ್ಟು ಚೆಂದ,
ನೆಲಮುಗಿಲು ಒಂದಾಯ್ತು, ನೋಡು ನೋಡೆಂದ,
ತಾರೆಗಳ ಹೂವೆಂದ, ನದಿಗಳನು ಹೆಣ್ಣೆಂದ,
ಜಡೆಮೋಡದೊಳಗಿಟ್ಟು, ತಾ ಬೆಸೆದ ಬಂಧ.

ಹೂಮಳೆಯ ಮುತ್ತೆಂದ, ಬಿರುಮಳೆಗೂ ಚೆಲುವೆಂದ,
ಬಿರುಗಾಳಿ ರೌದ್ರತೆಗೆ ರಮಣೀಯವೆಂದ,
ಮಿಂಚಲ್ಲೂ ಮಿಂಚಾದ, ಸಿಡಿಲಲ್ಲೂ ಹಾಡಾದ
ಕಪ್ಪಿರುಳು ಹುಣ್ಣಿಮೆಯ, ತಾ ಕಂಡು ಕೊಂಡ.

ಗಿರಿಶಿಖರ ಗಂಡೆಂದ, ಹೂ ಚಿಗುರು ಮಗುವೆಂದ,
ಧರೆಯನ್ನೇ ಆಡಿಸುವ ತೊಟ್ಟಿಲೆಂದ,
ಹೊಸ ಲೋಕ ಸೃಷ್ಟಿಸಿದ, ದೇವರಿಗೂ ಹೆಸರಿಟ್ಟ,
ಸೃಷ್ಟಿಕರ್ತನ ಕರ್ತ ತಾನೆಂದು ಕೊಂಡ

**–ಕಮಲಾ.ಜಿ.ಹೆಗಡೆ, ಕೊಂಡದಕುಳಿ**

## ಚುಟುಕ

### ವಿಪರ್ಯಾಸ

ನಿನ್ನ ಪ್ರೇಮ ನೆನಪಾದಾಗ
ಹೊಳೆಯಂಚಿನ,
ಬಾಲ್ಯದ ಮಳಲಾಟ
ನೆನಪಾಗುತ್ತದೆ–
ಕಟ್ಟುವುದು;
ಮತ್ತು ಮುರಿಯುವುದು!!

*****

### ಸತ್ಯ

ತಪ್ಪುಗಳಿಗೆ
ಸಾವಿರ ಸಮರ್ಥನೆಯ
ಬೇಲಿ ಹೆಣೆದಿದ್ದೇನೆ
ಅಷ್ಟಾದರೂ
ಲಂಕೆ ಸುಟ್ಟ ಹನುಮನಂತೆ
ಆತ್ಮ ಸಾಕ್ಷಿ ಹೊರಗೇ...

– ನವೀನ್ ಭಟ್, ಗಂಗೋತ್ರಿ





# ಕಥೆ ಕಟ್ಟುವ ಬಗೆ... ವಸುಧೇಂದ್ರರ ಮಾತಿಗೆ ಅರಳಿ ನಿಂತ ನಗೆ

(ಬರಹರೂಪ : **ಮನೋರಮಾ ಬಿ.ಎನ್**)

***'ನಾನು ಕಥೆ ಬರೀಲಿಕ್ಕೆ ಪ್ರಾರಂಭಿಸಿ ಆರೇಳು ವರ್ಷ ಆಯಿತಷ್ಟೆ. ಹೀಗಿರುವಾಗ 'ಕಥೆ ಕಟ್ಟುವುದು ಹೇಗೆ' ಎಂಬ ವಿಷಯದಲ್ಲಿ ಉಪನ್ಯಾಸ ಕೊಡಿ ಅಂತಂದ್ರೆ ಮುಜುಗರ ಅನ್ಸುತ್ತೆ' ಅಂತ ವಸುಧೇಂಧ್ರ ವಿನೀತಭಾವದಿಂದಲೇ ಪೀಠಿಕೆ ಹಾಕಿದ್ದರು. ಅವರೊಂದಿಗಿನ ಕಥೆಗಳ ಕುರಿತಾದ ಒಂದೂವರೆ ಘಂಟೆಗಳ ಸುದೀರ್ಘ ಸಂವಾದದ ಪುಟ್ಟ ಪುಟ್ಟ ನೆನಪುಗಳನ್ನು ನಿಮ್ಮೆದುರಿಗಿರುಸುತ್ತಿದ್ದೇನೆ.***



'**ಹೇ**ಳಲಾರದ ಕಥೆಗಳೇ ಇಲ್ವೇ !' ಹಳೆಯ ವಸ್ತುಗಳಿಗೆ ಹೊಸ ರೂಪ ಹೊಸ ಬಣ್ಣ, ಹೊಸ ಕಣ್ಣು. ಅದೊಂದು ಬೆರಗಿನ, ಸಂಭ್ರಮದ ಅನುಭವ. ಆದರೆ ಆ ಕ್ಷಣ ಕ್ಷಣಿಕವಾಗಬಾರದಷ್ಟೇ!

ಕಥೆ ಅವಸರದ ಪ್ರಸವ ಅಲ್ಲ. ಸ್ಪಂದನವಿಲ್ಲದೆ ಕಥೆ ಮಾಡಲು ಹೊರಟರೆ ಆ ಪ್ರಯತ್ನ ನಿರರ್ಥಕ. ಕಥೆಗಿಂತ ಬದುಕು ದೊಡ್ಡದು. ಬದುಕಿನ ಒಂದು ಭಾಗ ಕಥೆಯೇ ಹೊರತು, ಕಥೆಯೇ ಬದುಕಲ್ಲ.

'ಕಣ್ಣು ತೆರೆದು ಬದುಕಬೇಕು. ಕಣ್ಣು ಮುಚ್ಚಿ ಬರೆಯಬೇಕು'. ಏಕೆಂದರೆ ಕಥೆಗೆ ಬೇಕಿರುವುದು, ಅದು ಹುಟ್ಟುವುದು ಮೌನದಲ್ಲಿ..ಅಂತರಂಗದಲ್ಲಿ.. ಕಥೆ ಬರೆಯೋದಕ್ಕೆ 'ಧ್ಯಾನ' ಬೇಕೆ ಬೇಕು. ಅಂದರೆ ಕಥೆಯಲ್ಲೇ ಮಿಂದು ಮುಳುಗುವ ಕಥಾ ಧ್ಯಾನ!

ಕಥೆ ಬರೀಬೇಕು ಅಂತಿದೀರಾ? ಹಾಗಾದ್ರೆ ಓದೋ ಚಟ ಬೆಳೆಸಿಕೊಳ್ಳಿ. ಕಥೆ ಕೇಳುವ ಅಭ್ಯಾಸವನ್ನೂ ಕೂಡಾ ! ನನಗಂತೂ ಸಾಹಿತ್ಯಕ್ಕಿಂತಲೂ ಸಿನಿಮಾಗಳೇ ಕಥೆಗಳಿಗೆ ಸ್ಫೂರ್ತಿ. ಬೇರೆ-ಬೇರೆ ಭಾಷೆಗಳ ಸಿನಿಮಾದೆಡೆಗಿನ ಹಪಹಪಿಯೇ ನನ್ನನ್ನು ಇನ್ನಷ್ಟು ಕಥೆ ಬರೆಯಲು ಪ್ರೇರೇಪಿಸುತ್ತದೆ. ಜೀವನವನ್ನು ಅನುಭವಿಸೋದು ಕೂಡಾ ಕಥೆ ಹೆಣೆಯುವಲ್ಲಿ ಒಂದು ದಾರಿಯಾಗುತ್ತದೆ.

ಒಂದು ವೇಳೆ ಕಥೆಗೂ, ಕವನಕ್ಕೂ –ಎರಡಕ್ಕೂ ಸರಿಹೊಂದುವ ವಸ್ತು ಸಿಕ್ಕಿದರೆ ಏನು ಮಾಡ್ತೀರಿ ? ಕಾಯ್ಕಿಣಿ ಹೇಳೋ ಹಾಗೆ,

**ಕಥೆ ಕಟ್ಟಲಿಕ್ಕಾಗದು. ಅದು ಹುಟ್ಟುವ ಪ್ರಕ್ರಿಯೆ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಿರುತ್ತದೆ. ನಮ್ಮ ಅನುಭವದ ಕಥೆಯನ್ನು, ನಮ್ಮದೇ ಆದ ಪ್ರಪಂಚದಲ್ಲಿ ಬರೆಯೋಣ. ತಂತ್ರವೆನ್ನುವುದು ಏನಿದ್ದರೂ ಕಥೆಯೆಂಬ ದೇಹಕ್ಕೆ ಮಾಡುವ ಶೃಂಗಾರ !**

'ಕಾವ್ಯ ಎನ್ನುವುದು ಪ್ರೇಮ. ಕಥೆ ಎನ್ನುವುದು ಮದುವೆ. ಕಾವ್ಯವು ವಧುವಾದರೆ, ಕಥೆ ವರ.' ವಸ್ತು ಮತ್ತು ಓದುಗರ ಆಯ್ಕೆ ನಿಮ್ಮದು.

ನೀವು ಐದು ಸಾವಿರ ಜನರು ಕುಳಿತು ಒಂದು ವರ್ಷ ಓದುವ ಕಥೆ, ಸಾಹಿತ್ಯವನ್ನು ಬರೀತೀರೋ? ಅಥವಾ, ಐವತ್ತು ಜನರಂತೆ ಒಂದು ಸಾವಿರ ವರ್ಷ ಕೃತಿಯನ್ನು ಬರೀತೀರೋ?

ಕಥೆ ಬರೆಯಲು ಪ್ರಾಮಾಣಿಕತೆ ಬೇಕು. ಧೈರ್ಯ ಬೇಕು. atleast ಇಂದಿನ ಮಟ್ಟಿಗಾದ್ರೂ ಕಥೆ ಬರೆಯೋವಾಗ ಪ್ರಾಮಾಣಿಕರಾಗಿರಬೇಕು. ಇಲ್ಲವಾದರೆ ಇಂದಿಗೆ ಚೆಂದ ಕಂಡ ಕಥೆ ನಾಳೆಗೆ ನಂದಿ ಹೋಗುತ್ತದೆ. ಸಾವಿರಾರು ಜನರ ಮನಸ್ಸಿಗೆ ಸುಖ ಕೊಟ್ಟರೂ, ಒಬ್ಬನ ಮನಸ್ಸನ್ನು ಹಿಂಸಿಸಿ ನೋಯಿಸುವುದು ಕಥೆಗಾರನ ಅಪ್ರಾಮಾಣಿಕತೆಯನ್ನು ತೋರಿಸುತ್ತದೆ.

ನಾವು ಪ್ರಭಾವಗಳಿಂದ ತಪ್ಪಿಸಿಕೊಳ್ಳಲಾರೆವು. ಆದರೆ ಅಂತಹ ಪ್ರಭಾವಗಳಲ್ಲೂ ನಮ್ಮದೇ ಶೈಲಿ, ಬಳಸಿಕೊಳ್ಳುವ ಕಲೆ, ಸ್ವಂತಿಕೆ ಇದ್ದರೆ ಎಷ್ಟು ಒಳ್ಳೆಯದು ಅಲ್ಲವೇ ? ಕಥೆಗಾರನು ಪೂರ್ವಾಗ್ರಹ ಬಿಟ್ಟು, ಎಲ್ಲವನ್ನೂ ಒಂದೇ ಚೌಕಟ್ಟಿಗೆ ಸೇರಿಸದೆ ನೋಡಿದಾಗಲೇ, ವಸ್ತುಗಳೆಡೆಗೆ ಪೂರ್ಣವಾಗಿ ತನ್ನನ್ನು ಅರ್ಪಿಸಿಕೊಳ್ಳಲು ಸಾಧ್ಯ. ಹಾಗಾಗಿ ನಿಮ್ಮೊಳಗಿನ, ಹೃದಯಾಂತರಾಳದ ಅಭಿವ್ಯಕ್ತಿ ಅಲ್ಲಿರಲಿ. ಪಾತ್ರ, ಸನ್ನಿವೇಶಗಳೂ ಬೇರೆ ಬೇರೆ ಅನ್ನಿಸಿದರೂ, ಕಥೆಗೆ ಇರುವ ಒಳಧ್ವನಿ ನಮ್ಮದಾಗಿರಲಿ.

ಕಥೆಗಳಲ್ಲಿ 'ಕಥನ ಕುತೂಹಲ'ವಿರಬೇಕು., ನಿಜ. ಆದರೆ ಕುತೂಹಲದ ಕುದುರೆಯೇರುವ ಪ್ರಸಂಗ ಪ್ರತೀ ಬಾರಿ ಒಳ್ಳೆಯದಲ್ಲ.

'ಕಲ್ಲು ಹೂವಾಗಿ ಅರಳುತ್ತದೆ' ಅನ್ನುವುದಿದ್ದರೆ ಹೂವಾಗಿ ಅರಳುವ ಸೌಂದರ್ಯದ ನಿರೀಕ್ಷೆ ಕಥೆಗಾರನಿಗೆ ಇರಬೇಕೇ ವಿನಃ 'ಅದ್ಹೇಗೆ, ಕಲ್ಲು ಹೂವಾಗಿ ಅರಳಿಯೇ ಬಿಡುತ್ತದೆ? ನೋಡಿಯೇ ಬಿಡೋಣ' ಎನ್ನುವ ವೈಜ್ಞಾನಿಕ, ವೈಚಾರಿಕ ನೆಲೆಗಟ್ಟಲ್ಲ. ಯಾವತ್ತಿಗೂ ವಿಚಾರಗಳು ಕಥೆಗಳಿಗೆ ಪೂರಕವಾಗಿ ಧ್ವನಿಸಬೇಕೇ ಹೊರತು, ಅದನ್ನೇ ಕೇಂದ್ರವಾಗಿಟ್ಟುಕೊಳ್ಳಬಾರದು.

ನಮ್ಮ ಕಾಲದ್ದೇ ಆದ ಸಂಗತಿಗಳಿಗೇ ಅವಕಾಶ ನಾವು ಕೊಡದಿದ್ದರೆ ಹ್ಯಾಗೆ ? ಕಥೆ ಮೇಲಿನ ಪ್ರೀತಿ ಭಾಷೆಯನ್ನೇ ಮೀರಿ ನಿಲ್ಲಬೇಕು.

ಇಂದಿನ ಕಾಲದಲ್ಲಿ ಹದಿನೈದು ದಿನ ಪ್ರವಾಸಕ್ಕೆ ಹೊರದೇಶಕ್ಕೆ ಹೋಗಿಬಂದವರೂ ಕೂಡಾ ' ಪ್ರವಾಸ ಕಥನ'ಗಳನ್ನು ಬರೆದು ಪ್ರಕಟಿಸುತ್ತಾರೆ. ಎಲ್ಲೋ ಕೆಲವರು ಮಾತ್ರ ಆಳವಾಗಿ ಶೋಧಿಸಿದ್ದು ಬಿಟ್ಟರೆ, ಉಳಿದೆಲ್ಲವು ಸುಮ್ಮನೆ ನೋಡುವ ಪ್ರಕ್ರಿಯೆ ಅಷ್ಟೇ!

ಪಾತ್ರದ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಕಥೆಗೆ ಮಾಡುವ ಬಹಳ ದೊಡ್ಡ ಅನ್ಯಾಯ ಮತ್ತು ಅವಮಾನ. ಕಥೆಗಾರನಿಗೆ ಚಹಾ ಕುಡಿಯುವ ಅಭ್ಯಾಸವಿಲ್ಲವೆಂದರೆ ಪಾತ್ರಗಳೂ ಚಹಾ ಕುಡಿಯಬಾರದು ಎಂಬ ಕುತರ್ಕ ಯಾಕೆ ? ಕಥೆಯ ಪಾತ್ರದೊಳಗೆ ನಾವು ಹೋಗಿ-ಬಂದು ಬರೆಯಬೇಕೇ ವಿನಃ, ಪಾತ್ರಗಳನ್ನು ನಮ್ಮಲ್ಲಿ ಆಹ್ವಾನಿಸಿ ಬರೆಯುವ ಪ್ರಯತ್ನ ಮಾಡಬಾರದು.

ನಮ್ಮ ಸ್ನೇಹಿತರಿಗೇ ನಮ್ಮ ಕಥೆಗಳು ಅರ್ಥವಾಗದೇ ಹೋದಲ್ಲಿ ಏನು ಲಾಭ ? ಕೇವಲ ವಿಮರ್ಶಕರನ್ನು ಮೆಚ್ಚಿಸುವ ಕೆಲಸ ಮಾಡೋಕೆ ಹೊರಟರೆ, ಒಂದಲ್ಲ ಒಂದು ದಿನ ಕಥೆ, ಮನಸ್ಸಿಗೆ ತಟ್ಟದೇ ಬಿದ್ದು ಹೋಗುತ್ತದೆ. ಯಾರೋ ಪಂಡಿತರು ಹೇಳಿದ ಮಾತ್ರಕ್ಕೆ ಕಥೆ ಚೆನ್ನಾಗಿದೆ ಎಂಬ ಆಯ್ಕೆ ನಮ್ಮದಾಗಬಾರದು. ಯಾವುದೇ ಕೃತಿಯನ್ನಾಗಲೀ ಸ್ವೀಕರಿಸುವ ಮುಕ್ತ ಮನೋಭಾವ, ಜೊತೆಗೊಂದಿಷ್ಟು ಸ್ವಂತಿಕೆ ಪ್ರತಿಯೊಬ್ಬರಲ್ಲೂ ಇದ್ದರೆ ನಮ್ಮ ಆಯ್ಕೆಗಳನ್ನು





ಮತ್ಯಾರೋ ನಿಯಂತ್ರಿಸಲಾರರು. ಬಹುಷಃ ಇಂದಿನ ಹಲವರಿಗೆ ಮತ್ತು ಕಥೆಗಳಿಗೆ ಹಿರಿಯರನ್ನು ಮೆಚ್ಚಿಸುವುದೇ ಮುಖ್ಯ ಗುರಿಯಾಗಿದೆ !

ಕಥೆಗಳು ಅಂಗಳದಲ್ಲಿ ಹಾಕುವ ರಂಗೋಲಿಯಂತಿರಬೇಕೇ ವಿನಃ ಎಂಜಿನಿಯರಿಂಗ್ ಡ್ರಾಫ್ಟ್‌ಬೋರ್ಡ್‌ನ ಡ್ರಾಯಿಂಗ್ ಗಳಾಗಬಾರದು. ಕಥೆಯೆಂಬ ಕಥೆಯೇ ಓದುವುದಕ್ಕೆ ಕಷ್ಟ ಆದರೆ ಹ್ಯಾಗೆ ಸ್ವಾಮೀ ?

'ನನ್ನ ಕಥೆಗಳು ಮುಖ್ಯವಾಹಿನಿಯಲ್ಲಿ ಬರಬೇಕು' ಅನ್ನೋ ಹಟಕ್ಕೆ ಕಟ್ಟುಬಿದ್ದು ಮಿತಿಗಳನ್ನು ಹಾಕಿಕೊಂಡರೆ ಕಥಾ ಸ್ವಾತಂತ್ರ್ಯವನ್ನೇ ಕಸಿದುಕೊಂಡಂತೆ ! ಕೆಲವೊಂದು ಬಾರಿ ಒಳ್ಳೆಯ ಕಥೆಯಾದರೂ ಅದು ಮುಖ್ಯವಾಹಿನಿಗಳಲ್ಲಿ, ಮಾಧ್ಯಮದಲ್ಲಿ ಪ್ರಕಟವಾಗದೇ ಹೋಗಬಹುದು. ಹಾಗಾಗಿ ಕಥೆಗಾರ ತಾನು ಬರೆದ ಕಥೆ ತಕ್ಷಣವೇ ಶ್ರೇಷ್ಠ ಕಥೆಯಾಗಬೇಕು ಎಂಬ ಅಭಿಪ್ರಾಯಕ್ಕೆ ಇಳಿಯಬಾರದು.

ಕಥೆಗಾರರು ಮೈಗಳ್ಳತನಕ್ಕೆ ಬೀಳೋದು ಯಾವಾಗ ? – 'ಸ್ಫೂರ್ತಿ ಬರಬೇಕು' ಅಂತ ಪಟ್ಟಾಗಿ ಕುಳಿತು ಪ್ರಯತ್ನ ಕೈಬಿಟ್ಟಾಗ ! ಕೊನೆಗೆ ಕಥೆ ಅದರ ಪಾಡಿಗೆ, ತಾನು ತನ್ನ ಪಾಡಿಗೆ. ಕಥೆ ಬರೆಯುವ passion ಇದ್ದರೆ ಸಮಯ ಇಲ್ಲದಿದ್ದರೂ ನಾವು ಅದನ್ನು ಹೊಂದಿಸಿಕೊಳ್ಳಬಲ್ಲೆವು. ನಾನಂತೂ ಆಫೀಸ್‌ಗೆ ಹೋಗುವ, ಮತ್ತು ವಾಪಾಸ್ಸು ಬರುವ ತಲಾ ಒಂದೂವರೆ–ಒಂದೂವರೆ ಗಂಟೆಗಳ ಹೊತ್ತಿನಲ್ಲಿ ಬೆಂಗಳೂರಿನ ಟ್ರಾಫಿಕ್ ಜಾಮ್‌ನ ನಡುವೆ ಕತೆ ಬರೆಯೋದನ್ನು ಅಭ್ಯಾಸ ಮಾಡಿಕೊಂಡಿದ್ದೇನೆ. ಕಂಪ್ಯೂಟರ್ ಲ್ಯಾಪ್‌ಟಾಪ್ ನನ್ನ ಕೈ ಹೇಳಿದಂತೆ ಕೇಳುತ್ತಾ ಹೋಗುತ್ತದೆ. ಹಾಗಾಗಿಯೇ ನನ್ನ ಕಥಾ ಸಂಕಲನ 'ಚೇಳು' ಬೆಂಗಳೂರಿನ ಟ್ರಾಫಿಕ್‌ಗೂ, ಅದರ ನಡುವೆ ತೊಂದರೆಯಾಗದಂತೆ ಓಡಿಸುವ ನನ್ನ ಡ್ರೈವರ್‌ಗೂ ಅರ್ಪಣೆ !

ವಿದೇಶಗಳಲ್ಲಿ ಸಣ್ಣ ಕಥಾ ಪ್ರಕಾರ ಅಡಗಿಹೋಗುತ್ತಿದೆಯದರೂ, ಯಾವುದೇ ಲೇಖಕನ ಕಥೆ ಬಂದರೂ ಅದೊಂಥರಾ ಸಂಭ್ರಮ ! ಎಷ್ಟೋ ಸಲ ಲೇಖಕನೇ ಆ ಸಂಭ್ರಮದಲ್ಲಿ ಪಾಲ್ಗೊಳ್ಳುವುದಕ್ಕಾಗಿ ತಾನೇ ತೆರಳಿ ಪ್ರತಿಗಳನ್ನು ಮಾರಾಟ ಮಾಡುವ ಸಂಸ್ಕೃತಿ ಇದೆ. ಹಾಗಾಗಿ, 'ಕಥೆ ಬರೆಯೋ ತನಕ ಮಾತ್ರ ತನ್ನದು. ಬರೆದ ನಂತರ ಓದುಗರದ್ದು' ಅನ್ನೋ ಮಾತಿನಲ್ಲಿ ಅರ್ಥವಿಲ್ಲ. ಬಿಡುಗಡೆ ಅನ್ನೋದು ಮನಸ್ಸಿನ ಪ್ರಕ್ರಿಯೆ. ಓದುಗ ಕಥೆಯನ್ನು ಓದಿದ ಮೇಲೆ ನಮ್ಮ ಹೃದಯದಿಂದ ಅವನ ಮನಸ್ಸಿಗೆ ಆಗುವ ಭಾವ ವರ್ಗಾವಣೆಯೇ ಕಥೆಯ ಬಿಡುಗಡೆ...

ಯಾವ ರೀತಿಯ ಓದುಗರು ಮೆಚ್ಚಿದ್ದಾರೆ ಎಂಬುದು ಮುಖ್ಯವೇ ಹೊರತು ವಿಮರ್ಶಕರನ್ನು ನಂಬಿ, ಕಥೆಗಳನ್ನು ಶ್ರೇಣೀಕರಿಸಿ ಪುರಸ್ಕರಿಸುವುದೋ, ತಿರಸ್ಕರಿಸುವುದೋ ಒಳ್ಳೆಯದಲ್ಲ. ಜನಪ್ರಿಯತೆಯೂ ಸಾಹಿತ್ಯಕ್ಕೆ ಅಗತ್ಯವಾದದ್ದರಿಂದ ಯವುದೇ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯ ಅಂತ ಧಿಕ್ಕರಿಸುವ ಅಗತ್ಯವಿಲ್ಲ.

ಕಥೆ ಕಟ್ಟಲಿಕ್ಕಾಗದು. ಅದು ಹುಟ್ಟುವ ಪ್ರಕ್ರಿಯೆ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತಿರುತ್ತದೆ. ನಮ್ಮ ಅನುಭವದ ಕಥೆಯನ್ನು, ನಮ್ಮದೇ ಆದ ಪ್ರಪಂಚದಲ್ಲಿ ಬರೆಯೋಣ. ತಂತ್ರವೆನ್ನುವುದು ಏನಿದ್ದರೂ ಕಥೆಯೆಂಬ ದೇಹಕ್ಕೆ ಮಾಡುವ ಶೃಂಗಾರ !

ಒಟ್ಟಿನಲ್ಲಿ ವಸುದೇಂಧ್ರರ 'ಕಥೆ ಕಟ್ಟುವ' ಟಿಪ್ಸ್ ನಮ್ಮೊಳಗಿನ ಕಥೆಗಳಿಗೆ ಪುಟ್ಟ ಮುನ್ನುಡಿ. ಏನಂತೀರಾ !

ಪುಸ್ತಕ ಪರಿಚಯ




● ಮಲೆನಾಡಿಗ

# ವಸುಧೇಂದ್ರರ “ಹಂಪಿ ಎಕ್ಸ್‌ಪ್ರೆಸ್”

**ಹಂ**ಪಿ ಎಕ್ಸ್‌ಪ್ರೆಸ್ ಎಂಬ ಜೀವಂತ ರೈಲಿನಲ್ಲಿ ಇರುವುದು ಎಂಟೇ ಬೋಗಿಗಳಾದರೂ ಅವುಗಳಲ್ಲಿ ತುಂಬಿರುವ ಜೀವಕಣಗಳು ನೂರಾರು. ಬಳ್ಳಾರಿ ಹಾಗೂ ಬೆಂಗಳೂರಿನ ಜನಜೀವನ ಕಥೆ ಇದಾದರೂ ಅವುಗಳ ವ್ಯಾಪ್ತಿ ಇನ್ನೂ ಹೆಚ್ಚಿನದು. ಹಂಪಿ ಎಕ್ಸ್‌ಪ್ರೆಸ್ ಕಥಾ ಪುಸ್ತಕ ಬಿಡುಗಡೆ ಮುನ್ನವೇ ಹೆಚ್ಚಿನ ಪ್ರಚಾರಕ್ಕೆ ಒಳಗಾಗಿತ್ತು. ಮುಖಪುಟ ವಿನ್ಯಾಸ ಸ್ಪರ್ಧೆ ಏರ್ಪಡಿಸಿ ಸೃಜನಶೀಲ ವಿನ್ಯಾಸಗಾರರನ್ನು ಬೆಳಕಿಗೆ ತರುವ ಪ್ರಯತ್ನ ಶ್ಲಾಘನೀಯ.

ಅಂದ ಹಾಗೆ ಐದನೇ ವರ್ಷಕ್ಕೆ ಕಾಲಿರಿಸಿರುವ ಲೇಖಕ ವಸುಧೇಂದ್ರ ಅವರ ಛಂದ ಪುಸ್ತಕ ಪ್ರಕಾಶನಕ್ಕೆ ಭೇಷ್ ಅನ್ನದೇ ಇರಲು ಸಾಧ್ಯವಿಲ್ಲ. ನೆನಪಿನ ಸುರಳಿನಂತೆ, ಹೊಕ್ಕುಳ ಬಳ್ಳಿ ಸಂಬಂಧದ ಪ್ರತೀಕದಂತೆ ಕಾಣುವ ಮುಖಪುಟ ವಿನ್ಯಾಸ ಅರ್ಥಗರ್ಭಿತವಾಗಿದ್ದರೂ (ತಜ್ಞರ ಪ್ರಕಾರ) ಒಳಗಿರುವ ಕಥೆಗಳಿಗೆ ಹೋಲಿಸಿದರೆ ತೀರಾ ಸರಳವಾಗಿದೆ ಎನಿಸುತ್ತದೆ. ಒಳ ಚಿತ್ರಗಳ ಬಗ್ಗೆ ಎರಡು ಮಾತಿಲ್ಲ. ಮುನ್ನುಡಿ ಎಂಬ ಪ್ರಿವ್ಯೂ ಇಲ್ಲದ ನೇರ ಕಥಾಲೋಕಕ್ಕೆ ನಮ್ಮನ್ನು ಕರೆದುಕೊಂಡು ಹೋಗುವ ವಸುಧೇಂದ್ರ ಕ್ರಮ ಸ್ವಾಗತಾರ್ಹ. ಓದುಗ ಹಾಗೂ ಲೇಖಕನ ನಡುವೆ ಮಧ್ಯವರ್ತಿಯಾಗಿ ವರ್ತಿಸುವ ಮುನ್ನುಡಿ ಅಥವಾ ಬೆನ್ನು ತಟ್ಟಲು ಬರೆಯುವ ಬೆನ್ನುಡಿ ಯಾವ

**ಇಲ್ಲಿ ಬಹುತೇಕ ಪ್ರತಿ ಕಥೆಗಳು ಇನ್ನಷ್ಟು ಅರ್ಥಪೂರ್ಣ ಸನ್ನಿವೇಶಗಳೊಂದಿಗೆ ಪುಟ ಹೆಚ್ಚಿಸಿ ಮನ ತುಂಬುವ ಸಾಮರ್ಥ್ಯ ಹೊಂದಿವೆ. ಆದರೆ ಕಥಾ ಸಾಗರದ ವ್ಯಾಪ್ತಿಯ ಹರಿವನ್ನು ಜನರಿಗೆ ಬೇಕಾದ ರೀತಿಯಲ್ಲಿ ಕಟ್ಟಿಕಟ್ಟಿ ಹೀರಲು ಬಿಟ್ಟಿದ್ದಾರೆ ಲೇಖಕರು.**





ರೀತಿ ಪೂರಕವೋ ನಾ ಕಾಣೆ. ಮುನ್ನುಡಿ ಎಂದರೆ ಅದನ್ನು ಖ್ಯಾತ ನಾಮರ ಕೈಲಿ ಬರೆಸಬೇಕು ಎಂದು ಒದ್ದಾಡುವ ಕಿರಿಯ ಲೇಖಕರನೇಕರನ್ನು ಬಲ್ಲೆ. ಹಿಂದಿನಿಂದ ಬೆಳೆದು ಬಂದ ಪದ್ಧತಿಯಾದ್ದರಿಂದ ಇದರಲ್ಲಿ ಯಾರದೂ ತಪ್ಪೆಂದು ಅರ್ಥೈಸುವಂತಿಲ್ಲ.

ಮೊದಲಿಗೆ ಸೀಳುಲೋಟ ಸರಳ ಕಥೆಯಾಗಿದ್ದು, ಬಡ ಕುಟುಂಬದ ಹಳ್ಳಿಯ ಬದುಕಿನ ಸ್ಥೂಲ ಪರಿಚಯ ಮಾಡಿಸುತ್ತದೆ. ಗೊರೂರರ ‘ನಮ್ಮ ಊರಿನ ರಸಿಕರು’ ಕಥೆಯಂತೆ ಇಲ್ಲಿ ಇರುವ ಪಾತ್ರಗಳಾದ ರಮಾಬಾಯಿ, ಹುಲಿಕುಂಟಿ ಮತ್ತಿತರರು ಬಹು ಬೇಗ ಓದುಗರ ಮನಸ್ಸಿನಾಳಕ್ಕೆ ಇಳಿದುಬಿಡುತ್ತಾರೆ. ತನ್ನ ಅಣ್ಣನಿಂದ ಬಂದ ಮದುವೆ ಕರೆಯೋಲೆಗೆ ರಮಾಬಾಯಿ ಸ್ಪಂದಿಸುವ ರೀತಿ, ಮದುವೆಗೆ ತೆರಳಲು ಮಾಡಿಕೊಳ್ಳುವ ತಯಾರಿ, ತಿರುಪತಿ ತಿಮ್ಮಪ್ಪನ ಕಾಣಲು ಇರುವ ಏಕೈಕ ಮಾರ್ಗ ಜೊತೆಗೆ ರಮಾಬಾಯಿ ಹಾಗೂ ಅವಳ ಪೂರ್ವ ಇತಿಹಾಸ ಇಷ್ಟು ಚೊಕ್ಕವಾಗಿ ಮೂಡಿಬಂದಿದೆ. ಕಳ್ಳ ಹೊಕ್ಕಳಾದ ರಮಾಬಾಯಿ ಹುಲಿಕುಂಟಿ ಕುಟುಂಬ ತಿಮ್ಮಪ್ಪನ ದರ್ಶನ ಮಾಡಲು ಕಳ್ಳತನ ಮಾಡಬೇಕಾದ ಪ್ರಸಂಗ, ಕಳ್ಳತನ ಮಾಡಲು ಮನೆಯನ್ನು ಬಿಟ್ಟು ಕೊಡುವ ಪದ್ದಕ್ಕ “ ಬರ್‍ರಿ ಬರ್‍ರಿ ಕಳ್ಳತನಕ್ಕೆ ಬರ್ತೀರಿ ಅಂತ ರಮಾಬಾಯಿ ಬೆಳಿಗ್ಗೇನೇ ಹೇಳಿದ್ಲು” ಎನ್ನುವ ಮಾತು, ಅನಂತರ ಹುಲಿಕುಂಟಿ ಹಾಗೂ ಆತನ ಮಗ ಆಡುವ ಮಾತುಗಳು, ಮನೆಯಲ್ಲಿರುವ ಸಕಲ ವಸ್ತುಗಳನ್ನು ಬಿಟ್ಟು ರಂಗೋಲಿ ಹಾಕಿದ್ದ ಸೀಳುಲೋಟವನ್ನು ಕದ್ದ ಹುಲಿಕುಂಟಿ ವರ್ತನೆ ಯಾರಿಗಾದರೂ ನಗು ತರಿಸದೇ ಬಿಡದು.

ಅಣ್ಣನ ಮದುವೆಯಲ್ಲಿ ಸ್ವಲ್ಪವಾದರೂ ಒಡವೆ ಧರಿಸಿ ಮೆರೆಯಬೇಕು ಎಂದು ಬಯಸುವ ರಮಾಬಾಯಿ, ಬೋಳೆ ಸ್ವಭಾವದ ಹುಲಿಕುಂಟಿ ಹಾಗೂ ಮಗನನ್ನು ಕಟ್ಟಿಕೊಂಡು ರೈಲ್ವೇ ನಿಲ್ದಾಣದಲ್ಲಿ ನಿಂತಾಗ ನಡೆಯುವ ಪ್ರಸಂಗ ಸುಂದರವಾಗಿದೆ. ಮಗ ಚಾಕೋಲೇಟ್ ಬಗ್ಗೆ ಯೋಚಿಸಿದರೆ, ಹುಲಿಕುಂಟಿ ಅಲ್ಲಿದ್ದ ನೋಟಿಸ್ ಬೋರ್ಡಿನ ಪ್ರಕಟಣೆಗಳು ಮುದ್ರಣಗೊಂಡಿದ್ದು ತಾನು ಕೆಲಸ ಮಾಡುವ ಮುದ್ರಣಾಲಯದಲ್ಲಿ ಎಂದು ತಿಳಿದಾಗ ಸಂತೋಷ ಪಡುವ ರೀತಿ ಸಹಜತೆಯಿಂದ ಕೂಡಿದೆ. ಮೊದಲ ಬಾರಿ ರೈಲು ಪ್ರಯಾಣದ ಅನುಭವದ ಕಥಾಮೃತದ ಎಳೆ ಇನ್ನಷ್ಟು ಹಿಗ್ಗಿಸಬಹುದಿತ್ತು. ಕಾಳಮ್ಮನ ಕಳ್ಳಹೊಕ್ಕಲು, ಹುಲಿಕುಂಟಿ ಪೂರ್ವಜರು ಹಾಗೂ ಕಳ್ಳ ಶ್ರೀರಾಮುಲು ಕಥೆ ಮನದಲ್ಲಿ ತುಂಬಿಕೊಂಡಿದ್ದ ರಮಾಬಾಯಿ ಬೆಟ್ಟ ಹತ್ತುವಾಗ ಹುಲಿಕುಂಟಿಗೆ ಮೆಟ್ಟಿಲು ಕಾಣುವುದೇ ಎಂದು ಪ್ರಶ್ನಿಸುವ ರೀತಿ, ಹಳ್ಳಿಗರ ನಂಬಿಕೆ, ಮುಗ್ಧತೆಯನ್ನು ತೋರುತ್ತದೆ. ಬೆಟ್ಟ ಹತ್ತುವಾಗಿನ ದೃಶ್ಯಾವಳಿ ಕೂಡ ಸೀಮಿತವಾಗಿದೆ. ಇನ್ನಷ್ಟು ರಮಣೀಯವಾಗಿ ಮೂಡಿಸಬಹುದಿತ್ತು. ಆದರೆ ಅತಿಯಾದ ವರ್ಣನೆ, ವೈಭವೀಕರಣ ವಸುಧೇಂದ್ರ ಅವರ ಜಾಯಮಾನಕ್ಕೆ ಒಗ್ಗುವುದಿಲ್ಲವಾದ ಕಾರಣ ಓದುಗರು ಮನ್ನಿಸಿ ಕಥೆಯನ್ನು ಮುಂದುವರೆಸಬಹುದು.

ನಂತರ ಕಥೆಯಲ್ಲಿ ಸೀಳುಲೋಟ ಪ್ರಧಾನ ಪಾತ್ರ ವಹಿಸಿದರೂ ವರದಣ್ಣನ ಮನೆ ಮದುವೆ ಪ್ರಮುಖ ಎಂದು ನನಗನಿಸುತ್ತದೆ. ರಾಯಲಸೀಮೆಯ ಮದುವೆಯ ಗತ್ತು ಗೈರತ್ತು, ಸಂಭ್ರಮ ಗಲಾಟೆ ವಿವರಿಸಲು ಇನ್ನೊಂದು ಕಾದಂಬರಿ ಬರೆದರೂ ನಷ್ಟವಿಲ್ಲ. ಬಹುಶಃ ಬಳ್ಳಾರಿ ಭಾಗದ ಗಲಾಟೆ ಸಹಿತ ಮದುವೆಯನ್ನು ಕಂಡಿರುವವರೆಲ್ಲರೂ ಮದುವೆ, ಆಚರಣೆ, ಬೀಗರ ಜಗಳಗಳು ಒಂದೇ ಪ್ರಸಂಗದಲ್ಲಿ ಮುಗಿದಿರುವುದು ಕಮ್ಮಿಯಾಯಿತು ಎನಿಸಬಹುದು. ಆದರೆ ಕಥೆಯ ಪರಿಮಿತಿಗೆ ಸೂಕ್ತವಾಗಿರುವುದರಿಂದ ಯಾವುದೇ ಅಡ್ಡಿಯಿಲ್ಲದೆ ಕಥೆ ಮುಂದಕ್ಕೆ ಸಾಗುತ್ತದೆ. ಹುಲಿಕುಂಟಿ ಹೊಟ್ಟೆನೋವು ಪ್ರಸಂಗ, ಆಸ್ಪತ್ರೆ, ತಿಮ್ಮಪ್ಪನ ದರ್ಶನ ಕಾಣಿಕೆ ಅರ್ಪಣೆ ಎಲ್ಲವೂ ವೇಗವಾದ

ನಿರೂಪಣೆಯನ್ನು ಪಡೆದು ಉತ್ತಮ ರೀತಿಯಲ್ಲಿ ಕಥೆ ಕೊನೆಗೊಂಡಿದೆ. ಆದರೆ ಒಂದು ಕಾದಂಬರಿಗೂ ಮೀರಿದ ಸರಕನ್ನು ಕಥೆಯ ರೂಪದಲ್ಲಿ ಹಿಡಿದಿಟ್ಟಿದ್ದಕ್ಕೆ ಭೇಷ್ ಎನ್ನಲೇ ಬೇಕು.

****

ಅತ್ಯಂತ ಆಪ್ತವಾದ ನಿರೂಪಣೆ ಹಾಗೂ ಸರಳವಾಗಿ ಗಂಭೀರ ಚಿಂತನೆಗಿಡುವಂಥ ಸತ್ವವನ್ನುಳ್ಳ ಕಥೆಯಾಗಿ ಕೆಂಪುಗಿಳಿ ಹೊರಬಂದಿದೆ. ಬಾಲ್ಯದ ನೆನಪುಗಳು, ಶಾಲೆ, ಕಟ್ಟುಕಥೆಗಳು, ಬಣ್ಣಬಣ್ಣದ ಕನಸುಗಳ ಹೊತ್ತ ಕಂಗಳು ಕೊನೆಗೆ ಒಂದೇ ಬಣ್ಣಕ್ಕೆ ಹೊಂದಿಕೊಳ್ಳುವ ರೀತಿ ಅಸಹನೀಯ ವಾದರೂ ಸತ್ಯಸಂಗತಿಯಾಗಿದೆ. ಬಳ್ಳಾರಿ ಗಣಿ ಧೂಳು ಇಲ್ಲಿ ಪ್ರಮುಖವಾಗಿ ನೆಲೆಯನ್ನು ಸೂಚಿಸಿದರೆ, ಕೆಂಪುಗಿಣಿ ಜೀವ ಸಂಕುಲದ ಕುರುಹಾಗಿದೆ. ಹಾಸ್ಯಮಯ ಪ್ರಸಂಗಗಳು ಅನೇಕ ಇದ್ದರೂ ಅವು ನಗುವಿಗಿಂತ ಹೆಚ್ಚಾಗಿ ವಾಸ್ತವತೆಯನ್ನು ಪ್ರತಿಬಿಂಬಿಸುತ್ತವೆ. ಉಳ್ಳಾಗಡ್ಡಿ ಬೆಳೆಯುವ ಬಗೆ, ಗದ್ದೆಯನ್ನು ಬಾಲಕ ಕಮಲದ ಹೂವುಗಳಿಂದ ಅಲಂಕರಿಸುತ್ತಾ ವರ್ಣನೆಯಲ್ಲಿ ಮುಳುಗುವ ರೀತಿ ಕೊನೆಗೆ ವಾಸ್ತವದ ಗದ್ದೆಯ ದರ್ಶನ, ಹತ್ತಿರವಿದ್ದರೂ ಅನಾದರಣೆಯಿಂದ ಸಹಜ ಕಲಿಕೆಯಿಂದ ದೂರಾದ ಎಳೆಯರ ಪ್ರಪಂಚ, ನಂಬಿಕೆಯ ಆಳು ಈರಪ್ಪ ಹಾಗೂ ಅವನು ಹೇಳುವ ರಸವತ್ತಾದ ಕಥೆ ಮುಂದೊಂದು ದಿನ ವಾಸ್ತವ ರೂಪ ತಾಳಿದಾಗ ಆಗುವ ಸಂಕಟ, ಇದ್ದದ್ದನ್ನು ಇರದಿದ್ದಕ್ಕಾಗಿ ಕಳೆದುಕೊಳ್ಳುವ ರೀತಿ ಎಲ್ಲಾ ಕಡೆ ನಡೆದು ಬಂದಿದೆ ಆದರೂ, ಬಳ್ಳಾರಿ ಪರಿಸರದಲ್ಲಿ ಈ ಕಾಲಕ್ಕೆ ಹೆಚ್ಚು ಪ್ರಸ್ತುತವಾದ ಕಥಾ ಹಂದರ ಇಲ್ಲಿ ನಿರೂಪಣೆಯನ್ನು ಮೀರಿ ಆಳಕ್ಕೆ ಇಳಿದಿದೆ.

ಕಥೆ ಓದಿ ಮುಗಿಸಿ ಮೈಮೇಲಿನ ಕೆಂಧೂಳು ಕೂತಿದೆ ಕೆಡವಿಕೊಳ್ಳೋಣ; ಕಿಟಕಿಯಾಚೆ ಕೆಂಪುಗಿಣಿಯಿದೆಯೇ ನೋಡೋಣ ಎನ್ನುವಷ್ಟೂ ತಲ್ಲೀನ ಮೂಡುತ್ತದೆ. ವಿದ್ಯೆಯ ವೈಭವವಾಗಲಿ, ಹಳ್ಳಿಯಲ್ಲಿ ಉಳಿದವರ ಪಾಡಾಗಲಿ ಇಲ್ಲಿ ಮುಖ್ಯವಾಗಲ್ಲ. ಪರಿಸರ ಎಂಬ ನಿಧಿಯ ಜೊತೆ ಜೀವಿಗಳ ನೆಲೆಯೇ ಕಣ್ಮರೆಯಾಗುತ್ತಿರುವುದು ಕಠೋರ ಸತ್ಯವಾಗಿ ಲೇಖಕರನ್ನು ಕಾಡಿದೆ. ಆದರೆ ಬಾಲಕ ಕಥೆಯಲ್ಲಿ ಕೇಳಿದಂತೆ ಈ ನಿಧಿಯನ್ನು ಉಳಿಸಲು ಬೃಹತ್ ಸರ್ಪವಾಗಲಿ ಇನ್ನೊಂದಾಗಲಿ ಬರುವುದು ಕನಸಿನ ಮಾತು. ಸ್ವತಃ ಓದು ಕಲಿತವರೂ ಏನೂ ಮಾಡಲಾಗದ ಸ್ಥಿತಿ ನಿರ್ಮಾಣವಾಗಿರುವುದು; ವಿಷ ಪರಿಸರದಲ್ಲೂ ಅನಿವಾರ್ಯ ಜೀವನ ಸಾಗಿಸಬೇಕಾಗಿರುವುದನ್ನು ಕಾಣಬಹುದು. ಆರಂಭದ ನಿರೂಪಣೆ ಹಾಗೂ ಅಂತ್ಯದಲ್ಲಿ ಮಕ್ಕಳ ಕಥೆಗೆ ಸಾಮೀಪ್ಯ ನೀಡಿರುವುದು ಮೆಚ್ಚುವಂಥದ್ದು.

*******

'ಕೆಂಧೂಳಿ' ಕಥೆಯನ್ನು 'ಕೆಂಪುಗಿಣಿ'ಯ ನಂತರ ಓದಿದರೆ ಮತ್ತಷ್ಟು ಆಪ್ತತೆ ಮೂಡುತ್ತದೆ. ಈ ಕಥೆಯಲ್ಲಿ ಬರುವ ಚಿಕ್ಕಮ್ಮ ಬೆಂಗಳೂರಿಗೆ ಬಂದರೂ ಬಳ್ಳಾರಿಯ ಧೂಳಿನ ಭೂತವನ್ನು ಕೊಡವಿಕೊಳ್ಳಲು ಪದೇ ಪದೇ ಕೈತೊಳೆಯುವುದು ಸಣ್ಣ ಸಂಗತಿ ಎನಿಸಿದರೂ, ಗಾಢ ಅರ್ಥವನ್ನು ಹೊಂದಿದೆ. ಈ ಕಥೆಯಲ್ಲಿ ವಿವಾಹ ಸಂಬಂಧ, ಅಂತರ್ಜಾತಿ, ಸಮಾಜ ಎಂದೆಲ್ಲಾ ಬಂದರೂ ಕುಟುಂಬದಲ್ಲಿ ಒಬ್ಬರ ಸಾವಿನ ನಂತರದ ಉಳಿದವರ ಬದುಕಿನ ಪರಿಚಯ ಮಾಡಿಸುತ್ತದೆ. ಪಾತ್ರಧಾರಿ ವಿಷ್ಣುವಿನ ನೆನಪನ್ನೂ ಅಳಿಸಿಕೊಳ್ಳಲು ಅವನನ್ನು ಪ್ರೀತಿಸಿದ್ದ ಮುಸ್ಲಿಂ ಹುಡುಗಿ ಹೇಳುವ ಮಾತು, ವಿಷ್ಣುವಿನ ತಂದೆ ಮಗನ ಕಾರ್ಖಾನೆಯಿಂದ ಸಿಗುವ ಪರಿಹಾರ ಧನಕ್ಕೆ ಪರಿತಪಿಸುವುದು ಮನಸ್ಸಿನಲ್ಲಿ ಉಳಿಯುತ್ತವೆ.





'ಎರಡು ರುಪಾಯಿ' ಕಥೆಯಲ್ಲಿ ಹಾಸ್ಯ ತಾನಾಗಿ ಪ್ರಕಾಶಿಸದಿದ್ದರೂ, ಈ ಕಾಲದಲ್ಲಿ ಇಂಥ ಜನರಿರುತ್ತಾರೆಯೇ ಎಂದು ಪ್ರಶ್ನಿಸುವಂತೆ ಮಾಡುತ್ತದೆ. ಆದರೆ, ಹಳ್ಳಿಗರಲ್ಲಿ ಸತ್ಯವಂತರು, ತಾವು ನಿರ್ಗತಿಕರಾದರೂ ಉಪಕಾರ ಸ್ಮರಣೆಯನ್ನು ಮರೆಯುವುದಿಲ್ಲ ಎಂಬುದನ್ನು ಸಣ್ಣ ನಿದರ್ಶನದ ಮೂಲಕ ನಿರೂಪಿಸಲಾಗಿದೆ. ಉಳಿದ ಕಥೆಯಂತೆ ನಿರೂಪಣೆ ಬಿಗಿಯಿಲ್ಲದಿದ್ದರೂ ಕಥೆಯ ಥೀಮ್ ಗಟ್ಟಿಯಿದ್ದು, ಕಥೆ ಸರಳವಾಗಿರುವುದರಿಂದ ಓದಲು ಅಡ್ಡಿಯಿಲ್ಲ. ಕೊನೆಯ ಬರುವ ಹಮಾಲಿಯ ಮಗ ಹಮಾಲಿಯೇ ಆಗುತ್ತಾನೆ ಎಂಬುವ ಸತ್ಯ ಅರಗಿಸಿಕೊಳ್ಳಲಾಗುವುದಿಲ್ಲ. ಕೊನೆ ಭಾಗ ನೈಜತೆಗಿಂತ ಮಾನವೀಯ ಆಪ್ತತೆಯನ್ನು ಎತ್ತಿ ತೋರಿಸುತ್ತದೆ.

ಆದರೆ ಇದೇ ಮಾತನ್ನು 'ನವಿರುಗರಿ' ಕಥೆಗೆ ಹೇಳಲು ಬರುವುದಿಲ್ಲ. ಕಥೆಯ ತಿರುಳು ಹೊಯ್ದಾಡುತ್ತಾ, ಸುವರ್ಣಕ್ಕನ ಸ್ವಗತವೇ ಹೆಚ್ಚಾಯಿತು ಎನಿಸುತ್ತದೆ. ಮಗುವಿನ ಲಾಲನೆ ಪಾಲನೆ ಬಗ್ಗೆ ಒಂದಷ್ಟು ಕುತೂಹಲ ಮೂಡಿದರೂ ಕೊನೆಯಲ್ಲಿ ನಿರಾಸೆಯಾಗುತ್ತದೆ. ವೈದೇಹಿಯ ಕಠೋರ ಮಾತುಗಳು, ವೆಂಕಟೇಶನಿಗೆ ಮಕ್ಕಳ ಮೇಲೆ ವಿಶೇಷ ಪ್ರೀತಿಗೆ ಕಾರಣ, ಅಕ್ಕನ ವ್ಯಾಕುಲತೆ ಯಾವುದೋ ಅಷ್ಟಾಗಿ ಮನಸ್ಸಿಗೆ ತಟ್ಟುವುದಿಲ್ಲ. ತನ್ನೂರಿನ ಕೆರೆಯನ್ನು ಬಹಳ ವರ್ಷಗಳಾದ ಮೇಲೆ ನೋಡಿದ ಸಂಭ್ರಮ ಒಂಚೂರು ಈ ಕಥೆಯನ್ನು ನೆನಪಿಸಬಲ್ಲದು ಅಷ್ಟೇ.

*******

ಕೊನೆಯಲ್ಲಿ ಮೂಡಿರುವ 'ಪೆದ್ದಿ ಪದ್ಮಾವತಿ' ಕಥೆ ಹಾಸ್ಯ ಹಾಗೂ ದೈನ್ಯತೆಯ ಕಥಾ ಹಂದರ ಹೊಂದಿದೆಯಾದರೂ, ಸ್ವಬಲದಿಂದ ಏಳಿಗೆ ಸಾಧಿಸಲು ಹವಣಿಸುತ್ತಿರುವ ಹೆಣ್ಮಗಳ ಕಥೆ ಎನ್ನಬಹುದು. ರೂಪದಲ್ಲಿ ಸೊನ್ನೆಯಾದರೂ ಗುಣದಲ್ಲಿ ಪರಿಪೂರ್ಣವಾದ ಪದ್ಮಾವತಿಯ ವಿದ್ಯೆ ನಿಂತ ನೀರಾದ ಮೇಲೆ, ಬಾವಿ ನೀರನ್ನು ಸೇದುವ ಕಾಯಕಕ್ಕೆ ಇಳಿಯುವುದು, ಗಂಡನಿಂದ ಪರಿತ್ಯಕ್ತಳಾದ ತಾಯಿ ಕಷ್ಟಪಡುವುದು ಸೂಕ್ತವಾಗಿ ಮೂಡಿದೆ.

ಆದರೆ ಕಥೆಯ ಶೀರ್ಷಿಕೆ ನೋಡಿದ ತಕ್ಷಣ ಇದು ಹಾಸ್ಯಮಯ ಕಥೆ ಇರಬಹುದು ಎನಿಸುವುದು ಸಹಜ. ಇದಕ್ಕಾಗಿ ಪದ್ಮಾವತಿಯನ್ನು ಪೆದ್ದಿಯನ್ನಾಗಿಸಲು ಒಂದೆರಡು ಪ್ರಸಂಗಗಳನ್ನು ಹೆಣೆಯಲಾಗಿದೆ. ಎಸ್ಸೆಸ್ಸೆಲ್ಸಿ ಪಾಸ್ ಆಗದ, ಮದುವೆ ವಯಸ್ಸಿಗೆ ಬಂದರೂ ಮನೆಯಲ್ಲೇ ಇರುವ ಮಗಳಿದ್ದರೂ, ಬುದ್ಧಿವಂತ ಹೆಣ್ಣನ್ನು ಕಟ್ಟಿಕೊಂಡು ತನ್ನನ್ನು ತೊರೆದ ಗಂಡ ಹೀಗೆ ನಾನಾ ದುಃಖಕರ ಸಂಗತಿಗಳ ನಡುವೆ ಬದುಕುತ್ತಿರುವ ಪದ್ಮಾವತಿ ಉರುಫ್ ಪೆದ್ದಿಯ ತಾಯಿ ವೇದಮ್ಮ ಈ ಕಥೆಯ ಹೈಲೈಟ್ ಆಗಿ ಕಾಣಿಸುವುದು. ಕಳೆದು ಹೋದ ಉಂಗುರ ಸಿಗುವ ಪ್ರಸಂಗ, ಪದ್ಮಾವತಿಯನ್ನು ನೋಡಲು ಬರುವ ವರ ಮಹಾಶಯನ ಪ್ರಸಂಗಗಳು ಓದುವಂತಿದೆ. ಅಂತಿಮ ಭಾಗದಲ್ಲಿ ದೂರಾದ ಅಪ್ಪನ ಸಾವು, ಅಮ್ಮನ ದುಃಖ, ಬಂಡ್ರಿ ಮೇಷ್ಟ್ರರ ಆಶಾಕಿರಣದ ನಡುವೆ ಬಾವಿಕಟ್ಟೆಯ ಬಳಿ ನಡೆಯುವ ಕೋತಿಮರಿ ಮರಣ ಸನ್ನಿವೇಶ ಕಥೆಗೆ ಹೊಸ ಆಯಾಮ ನೀಡಿ ಒಳ್ಳೆಯ ಮುಕ್ತಾಯ ಹಾಡಿದೆ.

*******

'ಕ್ಷಮೆಯಿಲ್ಲದೂರಿನಲಿ', ಹೊಸ ಹರೆಯ ಕಥೆಗಳು ಇಂದಿನ ಫಾಸ್ಟ್ ಯುಗವನ್ನು ಹಗುರವಾಗಿ ತೋರಿಸಿದೆ. ವಸುಧೇಂದ್ರ ಅವರ ಉಳಿದ ಕಥೆಗಳಂತೆ ಇಲ್ಲಿ ವಾಸ್ತವತೆಗೆ ಹೆಚ್ಚು ಒತ್ತು ನೀಡಲಾಗಿದೆ. ಕ್ಷಮೆಯಿಲ್ಲದೂರಿನಲಿ, ಮಾಡರ್ನ್ ವಠಾರಗಳಾದ ಅಪಾರ್ಟ್ ಮೆಂಟ್ ಜೀವನದ ಬಗ್ಗೆ ಸಣ್ಣ

ಪ್ರಸಂಗದ ಮೂಲಕ ಹೇಳುತ್ತ ಹೋಗುವ ಲೇಖಕರು, ತಂತ್ರಜ್ಞಾನದ ಉಪಯೋಗ, ದುರ್ಬಳಕೆಯ ಬಗ್ಗೆ ನೇರವಾಗಿ ಹೇಳಿದ್ದಾರೆ. ಇಷ್ಟು ಸಣ್ಣ ವಿಷಯವನ್ನು ಅಷ್ಟೊಂದು ದೊಡ್ಡದು ಮಾಡಲು ಸಾಧ್ಯವೇ ಎಂದೆನಿಸಿದರೂ, ಇದಕ್ಕಿಂತ ಹೊಲಸಾಗಿ, ಕ್ಷುಲ್ಲಕರಾಗಿ ನಗರವಾಸಿಗಳು ವರ್ತಿಸುವುದು ಕಾಮನ್ ಆಗಿದೆ.

ಕಥೆ ಹಿಂದಿನ ಕಥೆಗಳಿಗಿಂತ ಕೊಂಚ ವೇಗದ ನಿರೂಪಣೆ ಹೊಂದಿದ್ದು, ಬೇಗ ಓದಿಸಿಕೊಂಡು ಹೋಗುತ್ತದೆ. ಅರ್ಥವಿಲ್ಲದ ಚಾಟ್, ಇಮೇಲ್‌ಗಳಂತೆ ಯಾಹೂ, ಗೂಗಲ್ ಗ್ರೂಪ್‌ಗಳಲ್ಲಿ ನಡೆಯುವ ಚರ್ಚೆಗಳು ಜೀವಕ್ಕೆ ಮಾರಕವಾದ ಪ್ರಸಂಗಗಳು ನಡೆದಿವೆಯಾದರೂ ಅದು ತನ್ನ ಬುಡಕ್ಕೆ ಬರುವವರೆಗೂ ಯಾರಿಗೂ ತಟ್ಟುವುದಿಲ್ಲ ಎಂಬುದನ್ನು ಕಾಣಬಹುದು.

******

ಇನ್ನೊಂದು ಕಥೆ 'ಹೊಸ ಹರೆಯ', ಇಂದಿನ ಕುಲಗೆಡುತ್ತಿರುವ ಯುವ ಪೀಳಿಗೆಗೆ ಹಿಡಿದ ಕನ್ನಡಿಯಾಗಿದೆ. ಇಂಜಿನಿಯರಿಂಗ್ ಓದು, ಕಾಲ್ ಸೆಂಟರ್ ಉದ್ಯೋಗ, ಡೇಟಿಂಗ್, ಪೋರ್ನ್ ಸೈಟ್ ಪ್ರಭಾವ, ಸೆಕ್ಸ್ ಅಡ್ವೈಸರ್, ಹೆತ್ತವರನ್ನೇ ಧಿಕ್ಕರಿಸುವ ಧೈರ್ಯ, ದುಡಿಯುವ ಹಂಬಲ, ಪಾಶ್ಚಿಮಾತ್ಯರಂತೆ ತಮ್ಮ ಹಾದಿ ತಾವೇ ನೋಡಿಕೊಳ್ಳಬಲ್ಲವು ಎಂಬ ಯುವ ಪೀಳಿಗೆಯ ವಿಶ್ವಾಸದ ಸುತ್ತ ಕಥೆ ಸುತ್ತುತ್ತದೆ. ಕಥೆಯ ನಿರೂಪಣೆ, ಅಂತ್ಯ, ಪ್ರತಿ ಸನ್ನಿವೇಶಕ್ಕೂ ಕಾರಣಗಳು, ಕೈ ತಪ್ಪಿಹೋದ ಮಗ, ಮುನಿಸಿಕೊಂಡ ಗಂಡನ ನಡುವೆ ಮರುಗುತ್ತಾ ಆಶಾವಾದಿಯಾಗಿರುವ ತಾಯಿಯ ಕಂಗಳಲ್ಲಿ ಹೊಸ ಹರೆಯ ಹೇಗೆ ಕಾಣುವುದೆಂಬುದನ್ನು ಓದಲೇ ಬೇಕು. ಇದರಲ್ಲಿ ಯಾರದೂ ತಪ್ಪಿಲ್ಲ ಜೀವನ ಶೈಲಿಯ ಅಳವಡಿಕೆ ಹಾಗೆ ಮಾಡಿಸುತ್ತದೆ ಎನ್ನುವಷ್ಟರ ಮಟ್ಟಿಗೆ ಸಹಜವಾಗಿ ಕಥೆ ಮೂಡಿ ಬಂದಿದೆ.

**ಕೊನೆ ಸಾರ:** ವಸುಧೇಂದ್ರ ಅವರು ಆದಷ್ಟೂ ಬೇಗ ಪೂರ್ಣ ಪ್ರಮಾಣದ ಕಾದಂಬರಿ ರಚನೆ ಮಾಡಲಿ ಎಂಬ ಆಶಯದೊಂದಿಗೆ ಹೇಳಬಹುದಾದ ಸಂಗತಿಯಂದರೆ, ಇಲ್ಲಿ ಬಹುತೇಕ ಪ್ರತಿ ಕಥೆಗಳು ಇನ್ನಷ್ಟು ಅರ್ಥಪೂರ್ಣ ಸನ್ನಿವೇಶಗಳೊಂದಿಗೆ ಪುಟ ಹೆಚ್ಚಿಸಿ ಮನ ತುಂಬುವ ಸಾಮರ್ಥ್ಯ ಹೊಂದಿವೆ. ಆದರೆ ಕಥಾ ಸಾಗರದ ವ್ಯಾಪ್ತಿಯ ಹರಿವನ್ನು ಜನರಿಗೆ ಬೇಕಾದ ರೀತಿಯಲ್ಲಿ ಕಟ್ಟೆಕಟ್ಟಿ ಹೀರಲು ಬಿಟ್ಟಿದ್ದಾರೆ ಲೇಖಕರು. ಹಂಪಿ ಎಕ್ಸ್‌ಪ್ರೆಸ್‌ನಲ್ಲಿ ಸುತ್ತಾಡಿ ಹೊರಬಂದಾಗ ಮೈಗಂಟುವ ಧೂಳು ಕೊಡವುವ ಮನಸ್ಸಾದರೂ, ಮನಸ್ಸಿಗಂಟಿದ ಧೂಳು ಹಾಗೆ ಇರುವಾಗ ಅದನ್ನು ಕೊಡವದೆ ಹೊರಮೈ ಧೂಳನ್ನು ಸ್ವಚ್ಛಗೊಳಿಸುವುದು ಎಷ್ಟು ಸರಿ ಅನ್ನಿಸುತ್ತದೆ. ಮನಸ್ಸು ತಿಳಿಯಾಗಿಸಿಕೊಳ್ಳಲು ಒಮ್ಮೆ ಹಂಪಿ ಎಕ್ಸ್ ಪ್ರೆಸ್ ಹತ್ತಲೇಬೇಕು. ನಿಮ್ಮನ್ನು ಕಥಾ ಲೋಕಕ್ಕೆ ಕರೆದೊಯ್ಯಲು ಹಸನ್ಮುಖಿ ಚಾಲಕ ಕವ್ ಲೇಖಕ ವಸು ಕಾಯುತ್ತಿರುತ್ತಾರೆ.

### ಚುಟುಕು-ಗುಟುಕು

**ಕೋಟಾಗಳು**

ನಮ್ಮ ನೋವುಗಳು
ನಮಗೇ ಮೀಸಲಾದ ಕೋಟಾಗಳು
ಬೇಕೆಂದರೂ ಬೇರೆಯವರಿಗೆ ಸಿಗದ
ರಿಸರ್ವೇಶನ್ ಸೀಟುಗಳು !!

– ಕಪಿಲಾ ಶ್ರೀಧರ್





● ಕಾರ್ತಿಕ್ ಪರಾಡ್ಕರ್



ಪುಟಾಣಿ ಕಥೆ

# ದೇವರು ಬದುಕುತ್ತಾ ಸಾಯುತ್ತಾ

ದೇವರು ಸತ್ತು ಹೋದರು ಅಂತ ಸುದ್ದಿ ಸಿಕ್ಕಿತು.

ಸಾಲಿಗ್ರಮಕ್ಕೆ ಹಾಲು ಎರೆದು ಸ್ವಚ್ಛಗೊಳಿಸುತ್ತಿದ್ದವ ಮಡಿ ಪಂಚೆಯಲ್ಲಿ ಓಡಿ ಹೋದ. ಅದಾಗಲೇ 24X7 ಚಾನೆಲ್ಲಗಳೆಲ್ಲಾ ಬ್ರೇಕಿಂಗ್ ನ್ಯೂಸ್ನಲ್ಲಿ ಈ ಸುದ್ದಿಯನ್ನು ಚ್ಯೂಯಿಂಗಮ್ಮಿನಂತೆ ಎಳೆಯಲು ಶುರು ಮಾಡಿದ್ದರು.

ದೇವರು ಇಷ್ಟು ಬೇಗ ಸಾಯಲು ಕಾರಣವೇನು?

ಮೊದಲ ನೋಟಕ್ಕೆ ಹಾರ್ಟ್ ಅಟ್ಯಾಕ್ ತರಹ ಕಾಣುತ್ತೆ. ಆದರೆ ಹೃದಯ ನಿಂತು ಹೋಗುವ ವಯಸ್ಸಾ ದೇವರದ್ದು.

ದೇವ್ರೂ ಕೂಡಾ ಸಾಯ್ತಾರೆ ಅಂದ್ರೆ ಅಶ್ಚರ್ಯ.

ಆದರೆ ಪೋಲೀಸ್ ಇಲಾಖೆ ಈ ಘಟನೆಯನ್ನು ಆತ್ಮಹತ್ಯೆಯೋ, ಕೊಲೆಯೋ, ಸಹಜ ಸಾವೋ ಎಂಬುದನ್ನು ಇನ್ನೂ ದೃಢಪಡಿಸಿಲ್ಲ.

ಎಲ್ಲರೂ ಓಡೋಡಿ ಬಂದರು. ಸತ್ತ ದೇವರನ್ನು ನೋಡಲು.

ಹೆಣವನ್ನು ಕಂಡಾಗ ಎಲ್ಲರಿಗೂ ಒಮ್ಮೆ ಅವರವರ ದೇವರ ಮುಖ ಕಂಡಿತು. ಮತ್ತೊಮ್ಮೆ ಹೆಣ ತಮ್ಮ ದೇವರನ್ನು ಹೋಲುತ್ತಿಲ್ಲವಲ್ಲ ಅಂತ ಅನ್ನಿಸಲು ಶುರುವಾಯ್ತು

ಇವರೆಲ್ಲರ ಮಧ್ಯೆ ದೇವರು ಬದುಕುತ್ತಾ ಸಾಯುತ್ತಾ, ಸಾಯುತ್ತಾ ಬದುಕುತ್ತಾ.....

ದೇವರ ಹೆಣ ಕೊಳೆಯಲು ಆರಂಭವಾಯ್ತು.



ಪುಟಾಣಿ ಕಥೆ

# ನಗು ಅತ್ತ ದಿನ

ಅದೊಂದು ದಿನ...

ನಗು ಅತ್ತಿತು.

ಅದನ್ನು ನೋಡಿ ಅಳು ಗಾಬರಿಯಾಗಿ ನಕ್ಕಿತು.

ಒಂದೇ ದಿನದೊಳಗೆ ಇಡೀ ಜಗತ್ತು ಬದಲಾಯಿತು.

ಜನ ನಗುವಲ್ಲೆಲ್ಲ ಅಳತೊಡಗಿದರು.

ಅಳುತ್ತಿದ್ದವರೆಲ್ಲ ನಗಲು ಶುರು ಮಾಡಿದರು.

ಮಾಷ್ಟ್ರು ಹುಡುಗನಿಗೆ ನಾಲ್ಕರ ಮಗ್ಗಿ ತಪ್ಪು ಹೇಳದ್ದಕ್ಕೆ ಅಡಿಕೋಲಿನಿಂದ ಗಂಟಿಗೆರದು ಕೊಟ್ಟರು. ಹುಡುಗ ಜೋರಾಗಿ ಗಳಗಳನೆ ನಕ್ಕ.

ಚರ್ಚಿನ ಕನ್ಫೆಶನ್ ಬಾಕ್ಸ್ ನಲ್ಲಿ ಪಾದ್ರಿಗಳಿಗೆ ನಗು ನಗುತ್ತ ದುಃಖ ತೋಡಿಕೊಳ್ಳುವವರು ಕಂಡು ಬಂದರು. ಕಾಮಿಡಿ ಸೀರಿಯಲ್ಲುಗಳು ಧಿಡೀರನೆ ನಿಂತು ಹೋದವು.

ಲಾಫಿಂಗ್ ಕ್ಲಬ್ಬುಗಳ ತುಂಬಾ ಹ್ಹಹ್ಹಹ್ಹ ಬದಲು ಅಳುವವರ ಆಕ್ರಂದನ ಮುಗಿಲು ಮುಟ್ಟಿತು.

ಸತ್ತಾಗ ಜನ ನಗತೊಡಗಿದರು.

ಮಗು ಹುಟ್ಟಿದಾಗ ಅಳತೊಡಗಿದರು.

ಸತ್ತ ಹೆಣದ ಮುಂದೆ "ಹ್ಹ...ಹ್ಹ...ಹ್ಹೆಹ್ಹೆ ...ಹ್ಹಹ್ಹ... ಹೋಗ್ಬಿಟ್ಟೆಯಲ್ಲಪ್ಪಾ" ಅಂತ ಹೌಸ್ಫುಲ್ ನಗು.

ಇದನ್ನೆಲ್ಲಾ ನೋಡಿ ಸಿಕ್ಕಾಪಟ್ಟೆ ಕನ್ಫ್ಯೂಸ್ ಆದದ್ದು ಸಾವಿಗೆ.

ಜನ ಸಾಯುವಾಗ ನಗುತ್ತಾರೆ ಅಂತ ತಿಳಿದಾಕ್ಷಣ

ಸಾವು ಅಳಲು ಶುರು ಮಾಡಿತು!!

ಹಾಗೂ

ಅದು ನಿಜವಾಗಲೂ ಅತ್ತಿತು!!

3 ಪುಟಾಣಿ ಕಥೆ

# ಪ್ರಣತಿಯ ಬೆಳಕಿಗೆ ಕಾದವ

ಅವಳು "ಪ್ರಣತಿ"

ಸಾವಿರ ಕಾರ್ತಿಕೋತ್ಸವದ ಬೆಳಕನ್ನು ತನ್ನಲ್ಲಿ ಬಚ್ಚಿಟ್ಟುಕೊಂಡವಳು. ದೇವಸ್ಥಾನದ ಗರ್ಭಗುಡಿಯ ಮುಂಬಾಗಿಲಲ್ಲಿ ಪ್ರತಿ ದಿನವೂ ಎರಡು ಹಣತೆ ಬೆಳಗುತ್ತಿದ್ದವಳು.

ಅವನು "ಅವನೇ"

ಕಾರ್ತಿಕೋತ್ಸವದ ಬೆಳಕಿನ ತೇರಲ್ಲಿ ಕಳೆದುಹೋದವ. ಪ್ರಣತಿಯ ಬೆಳಕಿಗಾಗಿ ಹಪಹಪಿಸಿದವ. ಪ್ರತಿ ದಿನವೂ ಗರ್ಭಗುಡಿಯ ಮುಂದಿನ ಬೆಳಕಲ್ಲಿ ಉಳಿದು ಹೋದವ. ಅವಳು ಹಚ್ಚಿಟ್ಟ ದೀಪ ದಿನವೂ ಆರಿ ಹೋಗುತ್ತಿದ್ದಾಗ ಗುಟ್ಟಾಗಿ ಎಣ್ಣೆ ಸುರಿದವ.

ಒಂದು "ಮುಂಜಾನೆ"

ಆತ ದೇವಸ್ಥಾನಕ್ಕೆ ಹೋದಾಗ ಪ್ರಣತಿ ಉರಿಯುತ್ತಿರಲಿಲ್ಲ. ಮಾಸಿದ ತಿಬಿಲೆ, ಬಿಳಿಯೆಲ್ಲ ಕಪ್ಪಾಗಿದ್ದ ಬತ್ತಿ ಅಷ್ಟೇ ಅಲ್ಲಿದ್ದದ್ದು. ಆತ ಪ್ರಣತಿಯ ಬೆಳಕಿಗೆ ಕಾದ. ಕೈಯಲಿದ್ದ ಎಣ್ಣೆಯ ಡಬ್ಬಿ ಹಾಗೇ ಉಳಿಯಿತು.

ರಾತ್ರಿಯಾಯಿತು, ಬೆಳಗಾಯಿತು. ವರುಷಗಳು ಉರುಳಿದವು. ಆದರೂ ಆತನ ಮೊಗದ ಕಾತರ ಕರಗಲಿಲ್ಲ.

ಕೊನೆಗೊಂದು ದಿನ ಅಲ್ಲಿ ನಿಂತಿದ್ದ ಆತ ದೇವರಾದ!

ನೋಡ ನೋಡುತ್ತಿದ್ದಂತೆ ಪ್ರಣತಿ ಆತನ ಕಣ್ಣಲ್ಲಿ ಬೆಳಗಿತು!

4 ಪುಟಾಣಿ ಕಥೆ

# Sorry, ನನಗೆ ನಗಲು ಪರ್ಮಿಶನ್ ಕೊಟ್ಟಿಲ್ಲ



"Sorry ನನಗೆ ನಗಲು ಪರ್ಮಿಶನ್ ಕೊಟ್ಟಿಲ್ಲ"

ಅಶ್ಚರ್ಯವಾಯ್ತು. ಇದಂತೂ ಒಳ್ಳೇ ಬ್ರೇಕಿಂಗ್ ನ್ಯೂಸ್ ಆಗಲಿಕ್ಕೆ ಫಿಟ್ ಅನ್ನಿಸಿತು. ಒಂದೆರಡು ಬೈಟ್ ತಗೊಂಡ್ರಾಯ್ತು. ಇವತ್ತಿನ ಅರ್ಧ ಗಂಟೆ ಪ್ರೋಗ್ರಾಂ ಡಮಾರ್. ಈ ವಾರದ ಟಿಆರ್‌ಪಿ ಏರಲಿಕ್ಕೆ ಇಷ್ಟು ಸಾಕು. ಚೀಫ್ ಕೂಡಾ ದಿಲ್ ಖುಷ್.

ಆದರೆ ನನಗೆ ಒಗಟು ಅನ್ನಿಸಿದ್ದು ಆತನ ಮಾತು.

ಒಳ್ಳೆ ಬಂಗಲೆ ಇದೆ. ಓಡಾಡಲಿಕ್ಕೆ ಸ್ಕೋಡಾ. ಅಷ್ಟು ದೊಡ್ಡ ಹುದ್ದೆ ಬೇರೆ. ಆರ್ಡರು ಮಾಡುವುದಷ್ಟೇ ಕೆಲಸ. ಈತನಿಗೆ ನಗಲು ಯಾರ ಪರ್ಮಿಶನ್ ಬೇಕು. ಇದಂತೂ ಹಾಸ್ಯಾಸ್ಪದ. ಅಥವಾ ಆತನಿಗೆ ಪತ್ರಕರ್ತನಾದ ನನ್ನನ್ನು ರೇಗಿಸಿ ಖುಷಿಪಡಬೇಕು ಅಂತ ಅನ್ನಿಸುತ್ತಿದೆಯಾ? ಆದರೆ ಅದು ನನ್ನ ಅನುಮಾನ ಮಾತ್ರ. ಆತ ಸಂದರ್ಶನದುದ್ದಕ್ಕೂ ಹಾಗೆ ತೋರ್ಪಡಿಸಿಕೊಳ್ಳಲಿಲ್ಲ. ಆತನ ಎದೆಯಾಳದಲ್ಲೇನೋ ಭಯಂಕರ ನೋವಿನ ಸಂತೆ ಇದ್ದಂತೆ ನನಗನಿಸಿತು.

ಆತ ವಿವರಿಸುತ್ತಾ ಹೋದ.

ಯಾಕೆ ನಗಲು ಸಾಧ್ಯವಾಗುತ್ತಿಲ್ಲ. ನಕ್ಕರೆ ಏನು ಪ್ರಾಬ್ಲಂ. ಎಲ್ಲವನ್ನು ಹೇಳುತ್ತಲೇ ಇದ್ದ. ಆತನನ್ನು ಕೇಳುತ್ತಾ ಹೋದಂತೆಲ್ಲಾ ಇದೇ ಕತೆ ಎಲ್ಲೋ ಕೇಳಿದ



ಚೈತ್ರರಶ್ಮಿ

ಹಾಗಿದೆಯಲ್ಲ ಅನ್ನುವ ಅನುಮಾನ ಶುರುವಾಯಿತು. ಪಾತ್ರಗಳು, ಸನ್ನಿವೇಶಗಳು ಸ್ವಲ್ಪ ಆಚೆ–ಈಚೆ. ಆದರೆ ಇಡೀ ಕತೆಯ ಹೂರಣ ಒಂದೇ. ಯಾರ ಕತೆ ಇದು.

"ಈ ಕತೆಯನ್ನೆಲ್ಲೋ ಕೇಳಿದ ಹಾಗಿದೆಯಲ್ಲ. ಸೇಮ್ ಟು ಸೇಮ್ ನಿಮ್ಮದೇ ಸಮಸ್ಯೆ ಆತನಿಗೆ ಕೂಡಾ" ಅಂತ ಆತನ ಎದುರು ಬಾಯ್ಬಿಟ್ಟು ಹೇಳಲು ಆಗಲಿಲ್ಲ. "ಅರ್ಜೆಂಟ್ ಪ್ರೋಗ್ರಾಂ ಕವರ್ ಮಾಡ್ಬೇಕು. ಮತ್ತೆ ಫೋನ್ ಮಾಡ್ತೀನಿ" ಹಾಗಂತ ಹೇಳಿ ಹೊರಬಿದ್ದೆ.

ಡೈರಿ ಸರ್ಕಲ್ಲಿನ ಟ್ರಾಫಿಕ್ಕಿನಿಂದ ಹೊರಬಂದಾಗ ಸುಸ್ತೋ ಸುಸ್ತು.

ಆಗಲು ಕಾಡುತ್ತಿದ್ದದ್ದು ಆತ ಹೇಳಿದ ಆತನದ್ದೇ ಕತೆ.

ಅದರ ಪ್ರತಿ ಭಾವನೆ, ಸಮಸ್ಯೆ, ಸನ್ನಿವೇಶ ಎಲ್ಲೋ ನನಗೆ ಪರಿಚಿತ ಅನ್ನಿಸಿತು. ಬಹುಷಃ ನನ್ನ ಪರಿಚಯದವನದ್ದೇ ಸಮಸ್ಯೆ ಇದು. ಅವನಿಗೂ ನಗಲು ಆಗುತ್ತಿರಲಿಲ್ಲ. ಯಾರದು.....?

ಛೆ...ಸದ್ಯಕ್ಕೆ ನೆನಪಾಗುತ್ತಿಲ್ಲ.

ಅದಾದ ನಂತರದ ಘಳಿಗೆಗೆ ನಗಲು ಪ್ರಯತ್ನಿಸಿದೆ.

ಸಾಧ್ಯವಾಗಲಿಲ್ಲ !

5 ಪುಟಾಣಿ ಕಥೆ

# ಯಾವ ಮೋಹನ ಮುರಳಿ ಕರೆಯಿತೋ...

ಊರಿಂದ ಪೇಟೆಗೆ ಹೊರಟಿದ್ದೆ.

ನನ್ನ ಸೀಟ್ ನಂಬರು:ಎ4, ಸ್ಲೀಪರ್ ಸೀಟು.

ಮೂಡುಬಿದಿರೆಯ ಏಕಾಂಗಿತನ, ಉಜಿರೆ ಪಕ್ಕದ ಕುಡುಮೌನಿ ಗಡಾಯಿಕಲ್ಲು, ಧರ್ಮಸ್ಥಳದ ದೀಪದ ಬೆಳಕು ದಾಟಿದಾಗ ಹತ್ತಿರ ಹತ್ತಿರ ಹನ್ನೆರಡು.



ಉಳುಕುತ್ತಾ,ಬಳುಕುತ್ತಾ ಬಸ್ಸು ಶಿರಾಡಿ ಘಾಟಿ ಏರುತ್ತಿದ್ದದ್ದು, ಬಲ ಬದಿಯಲ್ಲಿ ಜನರೇಟರಿನ ಬೆಳಕಲ್ಲಿ ರಾತ್ರಿ ಪಾಳಿಯ ಹೆಂಗಸರು, ಗಂಡಸರು ಗುಂಡ್ಯದ ಹೊಳೆಯ ಅಣೆಕಟ್ಟೆಗೆ ಕಾಂಕ್ರೀಟು ಹೊರುತ್ತಿದ್ದುದು ನೋಡಿದೆ. ನೋಡಿ ಆನಂದಿಸುವುದೋ, ದುಃಖಿಸುವುದೋ ಎಂದು ತಿಳಿಯುವ ಮೊದಲೇ ಮಂಪರು ನಿದ್ದೆ.

ಎದ್ದಾಗ ಬಸ್ಸು ಎಲ್ಲೋ ನಿಂತಿತ್ತು.

ಆಗ ಗಂಟೆ ಎರಡು. ಬಸ್ಸಿನಲ್ಲಿದ್ದವರಲ್ಲಿ ಬಹಳಷ್ಟು ಮಂದಿ ಹೊರಗೆ ಹೋಗಿದ್ದರು. ಉಳಿದವರು ಕೂತಲ್ಲ, ಕೆಲವರು ಮಲಗಿದಲ್ಲಿ ಚೆಲ್ಲಾಪಿಲ್ಲಿಯಾಗಿದ್ದರು.

ಅಷ್ಟು ಹೊತ್ತು ಬಲವಂತದಿಂದ ಕಟ್ಟಿಕೊಂಡಿದ್ದ ಉಚ್ಚೆಯನ್ನು ಹೊರಹಾಕಲು ಓಡಿದೆ. ಕೊರೆಯುವ ಚಳಿ. ಒಂದೈದು ನಿಮಿಷ ಒದ್ದಾಡಿದೆ.

ಒಂದರ ಪಕ್ಕ ಒಂದು. ಮಹಾನಗರದ ಕಡೆ ಹೊರಟ ಬಸ್ಸುಗಳು. ಕೆಲವರು ಹೊರಗಡೆ ಕಾಫಿ ಹೀರುತ್ತಿದ್ದರು. ಚಳಿಯಲ್ಲಿ ನಡುಗುತ್ತಿದ್ದರು. ಹೋಟೇಲಿನ ಸಿಡಿ ಪ್ಲೇಯರ್ "ಏನೋ ಒಂಥರಾ" ಎಂದು ಅರಚುತ್ತಿತ್ತು.

ಸ್ವಲ್ಪ ಹೊತ್ತಲ್ಲೇ

ಒಂದೊಂದೇ ಹೆಡ್ ಲೈಟುಗಳು ಬೆಳಗಿದವು.

ಬಸ್ಸಿನ ಡ್ರೈವರುಗಳು ಅಕ್ಸಿಲೇಟರಿನ ಮೇಲೆ ಕಾಲು ಅದುಮಲು ಶುರುಮಾಡಿದರು. ಸ್ಟೇರಿಂಗಿನ ಆಣತಿಯಂತೆ ಚಕ್ರಗಳು ತಿರುಗಿದವು ವೇಗವಾಗಿ, ಆಚೆ–ಈಚೆ.

ನನ್ನದು ಯಾವ ಬಸ್ ನಂಬರು?

C1, M,Y,Z,1,2,3.......?????????

ಆ ಕ್ಷಣಕ್ಕೆ ಹೊಳೆಯಲಿಲ್ಲ.

ಅಕ್ಸಿಲೇಟರಿನ ವೇಗಕ್ಕೆ ಬಸ್ಸಿನ ಟಯರುಗಳು ಸ್ಪೀಡಾಗಿ ನನ್ನಿಂದ ದೂರ ಓಡಲು ಶುರು ಮಾಡಿದವು.

ವೇಗವಾಗಿ ಮತ್ತೂ ವೇಗವಾಗಿ.

# ಜನಪದದಲ್ಲಿ ಲಾಲಿಹಾಡು

● ಸುಲೋಚನಾ, ಶಿರಸಿ

"ಲಾಲಿ" ಎಂದಾಕ್ಷಣ ಎಳೆಹಸುಗೂಸುಗಳ ನೆನಪಾಗುವುದು ಸಹಜ. ಇಂದಿನ ಯಾಂತ್ರಿಕ ಜೀವನದಲ್ಲಿ, ಆಧುನಿಕ ಮಹಿಳೆ ಮುಂದುವರಿಯುವ ಸಂಭ್ರಮದಲ್ಲಿ ನಮ್ಮ ಸಂಸ್ಕೃತಿಯ ಭಾಗವಾದ ಜಾನಪದ 'ಲಾಲಿ' ಹಾಡನ್ನು ಮರೆತಿರುವುದು ನಿಜಕ್ಕೂ ಖೇದಕರ. ಇನ್ನು ಗುಂಡಿ ಒತ್ತಿದರೆ ಸಾಕು, ಕುಳಿತಲ್ಲೆ ಎಲ್ಲವನ್ನೂ ನೋಡುವ, ಬೇಕಿದ್ದನ್ನು ಪಡೆಯುವ ಟಿ.ವಿ. ಕಂಪ್ಯೂಟರ್ ಯುಗದಲ್ಲಿ ಇಂದಿನ ಕಂದಮ್ಮಗಳು ಬಾಲ್ಯದ ಮುಗ್ಧತೆಯನ್ನು ಕಳೆದುಕೊಂಡಿದ್ದಲ್ಲದೆ ಇಂತಹ ಮಧುರವಾದ 'ಲಾಲಿ' ಹಾಡಿನಿಂದ ವಂಚಿತರಾಗಿರುವುದಂತೂ ಸತ್ಯ.

ಸ್ವಲ್ಪ ಸಮಾಧಾನಕರ ಅಂಶವೆಂದರೆ ಎಲ್ಲೋ ಹಳ್ಳಿಗಳಲ್ಲಿ ಹಳೆಯ ತಲೆಮಾರಿನ ಜನರಿರುವಲ್ಲಿ 'ಲಾಲಿ'ಹಾಡು ಅಲ್ಪಸ್ವಲ್ಪ ಬಳಕೆಯಲ್ಲಿರುವುದು ಮೂರು ಸಾಲುಗಳುಳ್ಳ ತ್ರಿಪದಿಯ ರೂಪದಲ್ಲಿರುವ 'ಲಾಲಿ' ಹಾಡು ಅನುಭವದ ಮೂಸೆಯಲ್ಲಿ ಅರಳಿದ ಕಲಾಕೃತಿಗಳೇ ಸರಿ. ಜನರಿಂದ ಜನರಿಗೆ ಹರಿದು ಬಂದು, ಸಂಗ್ರಹ ಯೋಗ್ಯವಾದ ಇವುಗಳನ್ನು ಹಿರಿಯರ ಬಾಯಲ್ಲಿ ರಾಗವಾಗಿ ಕೇಳಿದರೆ ಇದಕ್ಕೊಂದಿಷ್ಟು ಮೆರುಗು.

'ಲಾಲಿ ಎಂಬುದ ಬಾಲ ಆಲಿಸಿ
ಕೇಳುವ ಹಾಲ ಹಂಬಲವ ಮರೆಯುವ
ಗೋಕುಲದ ಹಾಲ ಹಳ್ಳದಲಿ ಹರಿಯೋಟ'.

ಸ್ನಾನವನ್ನು ಮಾಡಿಸಿ, ತೊಟ್ಟಿಲಲ್ಲಿ ಮಲಗಿಸುವಾಗ ತಾಯಿಯ ಮಡಿಲಿನಿಂದ ದೂರಾಗುವೆನೆಂಬ ಭೀತಿಗೆ ರಚ್ಚೆ ಹಿಡಿಯುವ ಮಗು ಹಾಡು ಕೇಳಿದಾಕ್ಷಣ, ಹಾಲು ಬೇಕೆನ್ನುವ ಹಂಬಲವನ್ನು ಮರೆತು, ತಾಯಿಯ ಮಧುರಗಾನವನ್ನು ಕೇಳುತ್ತಾ ತನ್ನೊಂದಿಗೆ ಆಕೆ ಇರುವಳೆಂಬ ನಂಬಿಕೆಯಿಂದ, ಹಾಯಾಗಿ ಸುಖನಿದ್ದೆ ಮಾಡುವುದು. ಒಮ್ಮೆ ಹಾಡು ಹೇಳಿ ಮಲಗಿಸುವ ಪರಿಪಾಠವಾದರೆ ಮಗು ಹಾಡನ್ನು ಚೆನ್ನಾಗಿ ಆಲಿಸುವುದು ಕಲಿಯುತ್ತದೆ. ಕ್ರಮೇಣ ತಾನೂ ಹಾಡಲು ಪ್ರಯತ್ನಿಸುತ್ತದೆ. ಇದು ಮಕ್ಕಳ ಮಾನಸಿಕ ಬೆಳವಣಿಗೆಗೆ ಪೂರಕವಾಗಿದೆ.



ನಾವು ಏನನ್ನು ಕಲಿಸುತ್ತೇವೆಯೋ ಅದನ್ನೇ ಮಗುವು ಕಲಿಯುತ್ತದೆ. ಬೆಳೆಯುವ ಮಕ್ಕಳಿಗೆ ಉತ್ತಮ ಸಂಸ್ಕಾರ ಮುಖ್ಯ. ವಾತಾವರಣ ಒಳ್ಳೆಯ ಸಂಸ್ಕೃತಿಯಿಂದ ಕೂಡಿದರೆ, ಮುಂದೆ ಉತ್ತಮ ನಡವಳಿಕೆಗಳನ್ನು ರೂಢಿಸಿಕೊಳ್ಳುತ್ತವೆ ಎಂಬುದು ಅನಾದಿ ಕಾಲದಿಂದಲೂ ತಿಳಿದು ಬಂದ ಸತ್ಯ. ತಾಯಿಯ ಮಮತೆ,





ವಾತ್ಸಲ್ಯದ ಎರಕ ಹೊಯ್ದಂತಿದ್ದ 'ಲಾಲಿ'ಹಾಡು ತಾಯಿ, ಮಕ್ಕಳ ಬಾಂಧವ್ಯ ಬೆಸೆಯಲು ಸಹಾಯವಾಗುವುದು.

ಕಂದಯ್ಯ ತಾಮುದ್ದು,
ಕೊಳಕೆ ತಾವರೆ ಮುದ್ದು
ಹಣ್ಣುಳ್ಳ ಮರಕೆ ಗಿಳಿಮುದ್ದು
ಕಂದಯ್ಯ ತಾ ಮುದ್ದು ತನ್ನ ಬಳಗಕ್ಕೆ.

ಹೆತ್ತ ತಾಯಿಗೆ ತನ್ನ ಮಗು ಹೇಗಿದ್ದರೂ ಮುದ್ದು. ಅದಕ್ಕೆ ಹಣ್ಣಿನ ಮರಕ್ಕೆ ಗಿಳಿ, ಕೊಳಕ್ಕೆ ತಾವರೆ ಚೆಂದವೆಂದು ಹೋಲಿಸಿ ತನ್ನ ಮಗು ಇಡೀ ಕುಟುಂಬದಲ್ಲೆ ಚೆನ್ನವೆಂದು ಹೇಳುವ ತಾಯಿಯ ಮೋಹಕ್ಕೆ ಏನೆನ್ನಬೇಕೋ?

ಆಡಿ ಬಾ ನನಕಂದ ಅಂಗಾಲ ತೊಳೆದೇನು,
ತೆಂಗಿನಕಾಯಿ ಎಳನೀರ ತಕ್ಕೊಂಡು,
ಶೃಂಗಾರದ ಮುಖವ ತೊಳೆದೇನು

ಆಟವಾಡಿ ದಣಿದು ಬಂದ ಮಗುವನ್ನು ಗದರಿಸದೆ, ತನ್ನ ಮಗುವಿನ ಮುಖವನ್ನು ಎಳನೀರಲ್ಲೆ ತೊಳೆಯುವೆನೆನ್ನುತ್ತ ಮುದ್ದಿಸುವ ಪರಿ ಅನನ್ಯ. ಆದರೆ ಇಂದಿನ ತಾಯಂದಿರಿಗೆ ಈ ನುಡಿಯನ್ನು ಹೇಳುವ ಸಂದರ್ಭವೆ ಬರುವುದಿಲ್ಲ ಎನ್ನುವುದು ಚೋದ್ಯ. ಏಕೆಂದರೆ ಟಿ.ವಿ. ಮುಂದೆ ಕುಳಿತು ಎಲ್ಲವನ್ನೂ ಮರೆಯುವ ಮಕ್ಕಳು, ಆಟವಾಡಿ ದಣಿದು ಬರುವ ಪ್ರಮೇಯವೇ ಇರುವುದಿಲ್ಲ. ಬಹುಃಶ ಹೀಗೇ ಮುಂದುವರಿದರೆ ಮಕ್ಕಳು ಆಟವನ್ನೂ ಮರೆಯುವ ದಿನ ದೂರವಿಲ್ಲ.

ಇನ್ನು 'ಲಾಲಿ' ಹಾಡುಗಳು ಹುಟ್ಟಿಕೊಂಡ ರೀತಿ ಸಹಜವಾದದ್ದಿರಬಹುದು. ಈಗಿನಂತೆ ಹಿಂದೆ ಯಂತ್ರದ ಬಳಕೆಯಿರಲಿಲ್ಲ. ಸ್ವತಃ ಕೆಲಸವನ್ನು ಮಾಡಿಕೊಳ್ಳುವ ತಾಯಂದಿರು, ಮಗುವಿನ ಯೋಚನೆಯಲ್ಲೇ ಹಾಡನ್ನು ಕಟ್ಟಿ ಹಾಡುತ್ತಾ ಕೆಲಸದ ಶ್ರಮವನ್ನು ಮರೆಯುತ್ತಿದ್ದರೇನೋ ಅಥವಾ ಹೀಗೂ ಇರಬಹುದು, ಕೆಲಸವನ್ನು ಮಾಡುತ್ತಿರುವಾಗ ಮಧ್ಯದಲ್ಲೇ ಬಿಟ್ಟು ಹೋಗದೆ, ಅಳುವ ಮಗುವನ್ನು ಸುಮ್ಮನಿರಿಸುವ ಸಲುವಾಗಿ ಹಾಡು ಹೇಳುತ್ತಿರಬಹುದು. ಹಾಡನ್ನು ಕೇಳಿದ ಮಗು ತಾಯಿ ತನ್ನ ಜೊತೆಯಲ್ಲೇ ಇದೆ ಎನ್ನುವ ನಂಬಿಕೆಯಿಂದ ಸುಮ್ಮನಾಗುತ್ತಿರಬಹುದು.

ಹೀಗೆ ಹುಟ್ಟಿದ 'ಲಾಲಿ'ಹಾಡು ತಾಯಿ ಮಗುವಿನ ಸಂಬಂಧವನ್ನು ಗಾಢವಾಗಿಸುತ್ತಾ ಹೋಗಿದೆ.

ಈಗಿನ ಸಿನೇಮಾ ಹಾಡುಗಳ ಸುಳಿಯಲ್ಲಿ ಸಿಲುಕಿ ಇಂಥ ಅಪೂರ್ವವಾದ 'ಲಾಲಿ' ಹಾಡು ಮರೆತು ಹೋದರೆ ಅಚ್ಚರಿಪಡಬೇಕಾಗಿಲ್ಲ. ಇನ್ನಾದರೂ ನಾವು ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಸಂಬಂಧವನ್ನು ಮಧುರವಾಗಿಸುವ ಇವುಗಳನ್ನು ಉಳಿಸುವ ದಿಕ್ಕಿನಲ್ಲಿ ಶ್ರಮ ಪಡಬೇಕಾಗಿದೆ. ■

## ಡೊಂಕೋಕ್ತಿಗಳು

- ನಮ್ಮಲ್ಲಿನ ರಸ್ತೆಗಳು ಗದ್ದೆಯಂತಿರುತ್ತದೆ. ರಸ್ತೆಯ ವಿಷಯದಲ್ಲೂ ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ.
- ಲಂಚ ಸ್ವೀಕರಿಸುವ ಮುನ್ನ ಮತ್ತು ನಂತರ ಕೈ ತೊಳೆದುಕೊಳ್ಳುವವರನ್ನು 'ಶುದ್ಧ ಹಸ್ತ'ರು ಎನ್ನಬಹುದು.

– ವಿ.ಸುಂಕಸಾಳ : 9844673588

# ಇದು ಬದುಕುವ ಸಮಯ !

● ವಿಘ್ನೇಶ್ ಯಲ್ಲಾಪುರ



"ಬಲಿದಾನದ ಸಮಯ ಯಾವಾಗ ಬರುತ್ತದೆ?"

ಪ್ರಶ್ನೆಯನ್ನು ಕೇಳಿದ ವ್ಯಕ್ತಿಯನ್ನೊಮ್ಮೆ ದಿಟ್ಟಿಸಿದರು ಸಾವರ್ಕರ್. ಮರುಕ್ಷಣದಲ್ಲಿಯೇ ದೃಢಸ್ವರದಲ್ಲಿ ನುಡಿದರು: "ಯಾರು ಬಲಿದಾನದ ದೃಢನಿರ್ಧಾರ ಮಾಡುತ್ತಾರೊ ಆಗ!"

ಪ್ರಶ್ನೆ ಕೇಳಿದವ ಮತ್ತೆ ಮಾತನಾಡಲಿಲ್ಲ. ತಲೆಯೆತ್ತಿ ಬಿರಬಿರನೆ ಹೊರನಡೆದ. ಅವನು ಬಲಿದಾನದ ನಿರ್ಧಾರ ಮಾಡಿಯಾಗಿತ್ತು.

ಕರ್ಜನ್ ವ್ಹಾಯಿಲೀ ಎಂದೊಬ್ಬ ಮಾಜಿ ಅಧಿಕಾರಿ. ಲಂಡನ್ನಿಗೆ ಬರುವ ಭಾರತೀಯರನ್ನೆಲ್ಲ ಸೇರಿಸಿ, ಭಾರತದ ಬಗ್ಗೆ ತಿರಸ್ಕಾರವನ್ನೂ ಬ್ರಿಟಿಷ್ ಪ್ರಭುತ್ವದ ಕುರಿತಂತೆ ಅಭಿಮಾನವನ್ನೂ ಬಿತ್ತುವುದಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದ. ವಿಶೇಷವಾಗಿ ಉನ್ನತ ವ್ಯಾಸಂಗಕ್ಕಾಗಿ ಬರುವ ಭಾರತೀಯ ತರುಣರನ್ನು ಸೇರಿಸಿ, ಅವರನ್ನು ಐಷಾರಾಮೀ ಬದುಕಿಗೆ ತಳ್ಳುವ, ಆ ಮೂಲಕ ಅವರು ಭಾರತದಲ್ಲಿನ ತಮ್ಮವರ ಕಷ್ಟನಷ್ಟಗಳನ್ನು ತಿರಸ್ಕಾರದಿಂದ ನೋಡುವಂತೆ ಮಾಡುವ ಮತ್ತು ಭಾರತೀಯ ಯುವಕರಾರೂ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳದಂತೆ ತಡೆಯುವ ಹುನ್ನಾರ ಆತನದಾಗಿತ್ತು. ಈ ಯುವಕ ಆತನನ್ನೇ ಗುರಿಯಾಗಿಸಿಕೊಂಡ.

ಕರ್ಜನ್ ವ್ಹಾಯಿಲೀ ಮತ್ತು ಈ ಯುವಕ ಇಬ್ಬರೂ ಪರಸ್ಪರ ಪರಿಚಿತರು. ನಿಯಮಿತವಾಗಿ ಭೇಟಿಯಾಗುತ್ತಿದ್ದವರು. ಆದರೆ ದೇಶದ ಗೌರವದ ಮುಂದೆ ಈ ಪರಿಚಯ, ಸ್ನೇಹವೆಲ್ಲವೂ ಗೌಣ. ೧೯೦೯ರ ಜೂನ್ ೨೦ರಂದು ಈತ ಮೊದಲ ಪ್ರಯತ್ನ ಮಾಡಿದ. ಆದರೆ ಗುರಿ ಸಾಧಿಸುವುದು ಸಾಧ್ಯವಾಗಲಿಲ್ಲ. ಹಾಗಂತ ಈತನ ನಿರ್ಧಾರದಲ್ಲೇನೂ ಬದಲಾವಣೆಯಾಗಲಿಲ್ಲ. ಸಮಯಕ್ಕಾಗಿ ಕಾದ.

ಗುರಿ ಸಾಧಿಸುವ ತುಡಿತದ ತೀವ್ರತೆಯ ಪ್ರಮಾಣಕ್ಕನುಸಾರವಾಗಿ ಗುರಿಯೇ ಸಾಧಕನ ಸಮೀಪ ಸಾರುತ್ತದೆಯಂತೆ. ಸಮಯ ಸಮೀಪಿಸಿತು. ೧೯೦೯ರ ಜುಲೈ ೧ನೇ ತಾರೀಖು ಲಂಡನ್ನಿನ ಸುಪ್ರಸಿದ್ಧ 'ಜಹಾಂಗೀರ್ ಹಾಲ್'ನಲ್ಲೊಂದು ಸಭೆ ಏರ್ಪಾಡಾಗಿತ್ತು. ಭಾರತೀಯ ವಿದ್ಯಾರ್ಥಿಗಳಿಗಾಗಿಯೇ ಏರ್ಪಾಡಾಗಿದ್ದ ಸಭೆಯಾದ್ದರಿಂದ ಈ ಯುವಕನೂ ಅದಕ್ಕೆ ಆಹ್ವಾನಿತನೇ. ಹಾಗಾಗಿ ಈತನ ಕುರಿತು ಯಾರಿಗೂ ಅನುಮಾನ ಬರಲಿಲ್ಲ. ನಿರಾಯಾಸವಾಗಿ ಈತ ಸಭಾಂಗಣ





ಪ್ರವೇಶಿಸಿದ. ಅಧಿಕಾರದ ಗತ್ತು ತೋರಿಸುತ್ತ ಮೆಟ್ಟಿಲಿನಿಂದ ಇಳಿದು ಬರುತ್ತಿದ್ದ ಕರ್ಜನ್ ವ್ಹಾಯಿಲೀಯ ಬಳಿಗೆ ಎಂದಿನಂತೆ ಸಾಗಿದ. ಕರ್ಜನ್ನನೂ ಈತನನ್ನು ನೋಡಿ ಈತನೆಡೆ ಹೆಜ್ಜೆಯಿಟ್ಟ. ಇನ್ನೇನು ಇಬ್ಬರೂ ಪರಸ್ಪರ ಆಲಿಂಗಿಸಿಕೊಳ್ಳಬೇಕು. ಅಷ್ಟರಲ್ಲಿ ಈ ಯುವಕ ತನ್ನ ಕೋಟಿನಿಂದ ಪಿಸ್ತೂಲು ತೆಗೆದು ಹಾರಿಸಿದ್ದ ಗುಂಡು ಕರ್ಜನ್ ವ್ಹಾಯಿಲೀಯ ಮೈಯನ್ನು ಹೊಕ್ಕಿತ್ತು. ದಾಸ್ಯರಕ್ಕಸನ ಮನೆಯಂಗಳದಲ್ಲೇ ಕಾಳಿ ಕೊಬ್ಬಿದ ಕುರಿಯ ಬಲಿ ಸ್ವೀಕರಿಸಿ ಸಂತುಷ್ಟಳಾದಳು!

ಯುವಕನ ಬಂಧನವಾಯಿತು. ಲಂಡನ್ನಿನಲ್ಲಿದ್ದ ಭಾರತೀಯರೆಲ್ಲ ಆಗಾ ಖಾನ್‌ರ ನೇತೃತ್ವದಲ್ಲಿ ಸಭೆ ಸೇರಿ ಈ ಕೊಲೆಯನ್ನು ಸರ್ವಾನುಮತದಿಂದ ಖಂಡಿಸಲು ನಡೆಸಿದ ಪ್ರಯತ್ನವನ್ನು ಸಾವರ್ಕರ್ ವಿಫಲಗೊಳಿಸಿದರು. ಈ ಯುವಕನ ಮನೆಯವರೆಲ್ಲ ತಮಗೂ ಆತನಿಗೂ ಸಂಬಂಧವೇ ಇಲ್ಲ. ಆತ ನಡೆಸಿದ ಕೃತ್ಯ ಖಂಡನೀಯ ಎಂದುಬಿಟ್ಟರು. ಬ್ರಿಟಿಷ್ ಸರಕಾರ ಜುಲೈ ೧೭ರಂದು ಆತನನ್ನು ಗಲ್ಲಿಗೇರಿಸಿತು.

ಉನ್ನತ ವ್ಯಾಸಂಗಕ್ಕೆಂದು ಹೋದ ಮಗ ಶಿಕ್ಷಣ ಮುಗಿಸಿ, ದೊಡ್ಡ ಅಧಿಕಾರಿಯಾಗಿ ಬರುತ್ತಾನೆಂದು ಮನೆಯವರೆಲ್ಲರೂ ಕನಸುಕಟ್ಟುತ್ತ ಕುಳಿತಿದ್ದರೆ, ಅತ್ತ ಆ ಯುವಕ ಇಡೀ ದೇಶವನ್ನೇ ತನ್ನ ಮನೆಯೆಂದು ಭಾವಿಸಿ, ಮನೆಯವರೆಲ್ಲರ ಕಷ್ಟನಿವಾರಣೆಗಾಗಿ, ಸ್ವಾಭಿಮಾನ ಸ್ಥಾಪನೆಗಾಗಿ ಬಲಿವೇದಿಯ ಮೇಲೆ ನಗುನಗುತ್ತ ನಿಂತಿದ್ದ. ಸಾವರ್ಕರ್‌ರ ವಿಶೇಷ ಪ್ರಯತ್ನದಿಂದ ಆತನ ಕೊನೆಯ ಹೇಳಿಕೆ ದೇಶ ವಿದೇಶಗಳ ಪತ್ರಿಕೆಗಳಲ್ಲಿ ರಾರಾಜಿಸಿತು. ಆತ ಹೇಳಿದ: "ಅಮ್ಮಾ, ನನ್ನಂಥ ದಡ್ಡ ಮಗ, ನಿನ್ನಂಥ ದೊಡ್ಡ ತಾಯಿಗೆ ತನ್ನ ರಕ್ತವನ್ನಲ್ಲದೆ ಇನ್ನೇನು ತಾನೆ ಕೊಡಬಲ್ಲ? ಇದೋ ಸ್ವೀಕರಿಸು, ನಾನು ಬಲಿದಾನಕ್ಕೆ ಸಿದ್ಧನಾಗಿದ್ದೀನಿ."

ಆತನೇ ಮದನ್‌ಲಾಲ್ ಧಿಂಗ್ರಾ. ಆತ ಕರ್ಜನ್‌ವ್ಹಾಯಿಲೀಯನ್ನು ಕೊಂದು ತಾನೂ ಗಲ್ಲಿಗೇರಿ ೧೦೦ ವರ್ಷಗಳಾಯಿತು. ಇದು ಆತನ ಬಲಿದಾನದ ೧೦೦ನೇ ವರ್ಷ.

ಚರಿತ್ರೆಯ ಪುಟಗಳನ್ನು ತಿರುವಿಹಾಕಿದಾಗಲೆಲ್ಲ ಅಚ್ಚರಿಯಾಗುತ್ತದೆ. "ಚಕ್ರವತ್ ಪರಿವರ್ತಂತೇ. . . ." ಎನ್ನುವುದು ಕೇವಲ ವ್ಯಕ್ತಿಯೊಬ್ಬನ ಬದುಕಿಗೆ ನೀಡಬಹುದಾದ ವ್ಯಾಖ್ಯಾನವಷ್ಟೆ ಅಲ್ಲ; ಅದು ಒಂದು ದೇಶಕ್ಕೆ, ಜನಾಂಗಕ್ಕೆ, ಸಂಸ್ಕೃತಿಗೆ ಎಲ್ಲಕ್ಕೂ ಅನ್ವಯಿಸುವ ಮಾತು ಎನಿಸುತ್ತದೆ. ಸಭ್ಯ, ಸುಂದರ, ಸರಳ ಜೀವನ ನಡೆಸಿದ ವೇದಗಳ ಯುಗ ಮುಗಿದು ತ್ರೇತಾ, ದ್ವಾಪರಗಳೂ ಕಳೆದು ಈಗ ಕಲಿಕಾಲದಲ್ಲಿದ್ದೇವೆ. ಯುಗದಿಂದ ಯುಗಕ್ಕೆ ಲುಪ್ತವಾಗುತ್ತ ಬಂದಿರುವ ಆದರ್ಶ ಮೌಲ್ಯಗಳು, ತಮ್ಮ ಕೊನೆಯ ಉಸಿರನ್ನು ಎಳೆಯುತ್ತಿವೆಯೇನೊ ಎನ್ನುವ ಸ್ಥಿತಿ ನಿರ್ಮಾಣವಾಗಿದೆ.

ಕಳೆದ ಮೂರ್‍ನಾಲ್ಕು ಸಾವಿರ ವರ್ಷಗಳ ಇತಿಹಾಸವನ್ನೇ ತೆಗೆದುಕೊಂಡರೂ, ಎಂತೆಂಥಹ ಆಕ್ರಮಣಗಳಿಗೆ ಭಾರತ ತುತ್ತಾಯಿತು. ಮತ್ತೆ ಕೆಲವೇ ವರ್ಷಗಳಲ್ಲಿ ಚೇತರಿಸಿಕೊಂಡು ಮೇಲೆದ್ದಿತು. ವೈಭವದ, ಸಮೃದ್ಧಿಯ ತುತ್ತತುದಿಯನ್ನು ತಲುಪಿತು. ಆದರೆ ಅಲ್ಲಿ ಹೆಚ್ಚು ಸಮಯ ಉಳಿಯಲಿಲ್ಲ, ಮತ್ತೆ ಪಾತಾಳಕ್ಕೆ ಜಾರಿತು. ಹೀಗೆ ದಕ್ಷಿಣಭಾರತದಲ್ಲಿ ಹಿಂದೂ ಧರ್ಮ, ಸಂಸ್ಕೃತಿ, ಗುಡಿ–ಗೋಪುರಗಳ ರಕ್ಷಣೆಗಾಗಿಯೇ ತಲೆಯೆತ್ತಿದ ವಿಜಯನಗರ ಸಾಮ್ರಾಜ್ಯ ಹಂತಹಂತವಾಗಿ ಮೇಲೇರುತ್ತ ಕೃಷ್ಣದೇವರಾಯನ ಕಾಲದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಉಚ್ಛ್ರಾಯ ಸ್ಥಿತಿಯನ್ನು ತಲಪಿತಾದರೂ ನಂತರದ ಕೆಲವೇ ವರ್ಷಗಳಲ್ಲಿ ಪತನ ಹೊಂದಿತು. ಹಾಗಾಗಿ, ಬಹುಶಃ ಮನುಷ್ಯನ ಜೀವನದಂತೆ–ನಿರಂತರವಾಗಿ ಶ್ರಮಿಸಿ ಗುರಿ ತಲಪುವುದು, ಮತ್ತೆ ಮೂಲಕ್ಕೆ ಮರಳುವುದು–

ಒಂದು ದೇಶ, ಜನಾಂಗ, ಸಂಸ್ಕೃತಿಗಳೂ ಕೂಡ ಎರುವಷ್ಟು ಏತ್ತರಕ್ಕೆ ಏರಿ ಕೆಳಗಿಳಿಯುತ್ತವೆ. ಮತ್ತೆ ಮೇಲೇರುತ್ತವೆ. ಪರಿವರ್ತನೆ ಜಗದ ನಿಯಮ !

ಆಗಲೇ ಹೇಳಿದಂತೆ ಮದನ್‌ಲಾಲ್ ಧಿಂಗ್ರಾ ಹುತಾತ್ಮರಾಗಿ ನೂರು ವರ್ಷ ಕಳೆಯಿತು. ತಮ್ಮನ್ನೇ ತಾವು ಉರಿಸಿಕೊಂಡು ಇಡೀ ದೇಶಕ್ಕೆ ಬೆಳಕು ನೀಡಿದ ಅವರಂತಹ ಲಕ್ಷಾಂತರ ಹುತಾತ್ಮರಿಂದಾಗಿ ನಾವಿಂದು ತಲೆಯೆತ್ತಿ ನಡೆಯುತ್ತಿದ್ದೇವೆ. ನಾವಿಂದು ಬಲಿದಾನದ ಹಾದಿಯಲ್ಲಿ ನಡೆಯಬೇಕಾದ ಸಂದರ್ಭ, ಸನ್ನಿವೇಶಗಳೇನೂ ಇಲ್ಲ. ಆದರೆ ಬಲಿದಾನಿಗಳ ಆಸೆ, ಆಕಾಂಕ್ಷೆಗಳನ್ನು ಪೂರೈಸುವ ದಿಕ್ಕಿನಲ್ಲಿ ದೃಢ ಹೆಜ್ಜೆಯನ್ನಿಟ್ಟು ಬದುಕಬೇಕಾದ ಅಗತ್ಯವಿದೆ. ಯಾವ ಸಂಗತಿಗಳು, ಜೀವನ ವಿಧಾನ, ಧ್ಯೇಯ ಇಂದು ಅವನತಿಯ ಪಾತಾಳಕ್ಕಿಳಿದಿದೆಯೊ ಅವುಗಳನ್ನರಸಿ ಉರಿಸಿ ಮತ್ತೆ ಜಗತ್ತಿಗೆ ಬೆಳಕು ನೀಡಬೇಕಾದ ಉನ್ನತಜೀವನವನ್ನು ನಡೆಸುವ ದಿಕ್ಕಿನಲ್ಲಿ ಸಾಗಬೇಕಾಗಿದೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಅಂದಿನ ನಾಗರಿಕರೆಲ್ಲರ ಮುಂದಿದ್ದ ಗುರಿ ಒಂದೇ ಆಗಿತ್ತು: ಹೋರಾಟ, ಸ್ವಾತಂತ್ರ್ಯಕ್ಕಾಗಿ ಹೋರಾಟ! ಕೆಂಪುಕೋಟೆಯ ಮೇಲೆ ಹಾರಾಡುತ್ತಿದ್ದ ಯೂನಿಯನ್ ಜಾಕ್ ಧ್ವಜವನ್ನು ಕಿತ್ತೆಸೆಯುವುದೊಂದೇ ಅವರ ಗುರಿಯಾಗಿತ್ತು. ಆದರೆ ಇಂದು ನಮ್ಮೆದುರು ಇರುವ ಗುರಿಗಳು ಅಸಂಖ್ಯ. ಇಂದು ನಾವು ಸ್ವಾತಂತ್ರ್ಯದ ಸವಿಯನ್ನುಣ್ಣುತ್ತಾ ಕನಸು ಕಟ್ಟುತ್ತಿದ್ದೇವೆ. ಹಾಗಾಗಿ ಸ್ವೇಚ್ಛೆಯ ಮಡುವಿಗೂ ಜಾರುತ್ತಿದ್ದೇವೆ. ಸರ್ವಾಧಿಕಾರದ ತೋಳ್ತೆಕ್ಕೆಗೂ ಸಿಲುಕುತ್ತಿದ್ದೇವೆ. ಅದಕ್ಕಿಂತಲೂ ಹೆಚ್ಚಿನದಾಗಿ ಗಾಂಧಿ, ನೆಹರೂ, ಸುಭಾಷ್, ಭಗತ್ ಮುಂತಾದವರ ಹೆಸರುಗಳನ್ನು ಹೇಳುತ್ತಲೇ, ಊರಿಗೆಲ್ಲ ಉಪದೇಶ ಮಾಡುತ್ತಲೇ ನಮ್ಮನ್ನು ಶೋಷಿಸುವ, ಗುಲಾಮರನ್ನಾಗಿಸುವ ಹೊಸ ಪೀಳಿಗೆಯ ಕೈಯಲ್ಲಿ ಸಿಲುಕಿ ಒದ್ದಾಡುತ್ತಿದ್ದೇವೆ. ಸರಕಾರದಿಂದ ಹಿಡಿದು ಸಾಮಾಜಿಕ ಸಂಘಟನೆಗಳವರೆಗೆ ಪ್ರತಿಯೊಂದು ಕ್ಷೇತ್ರ, ಸಂಸ್ಥೆಯೂ ಕೇವಲ ಉಪದೇಶಕ್ಕೋಸ್ಕರವಾಗಿ ಧ್ಯೇಯವಾದವನ್ನು, ತನ್ನ ಸ್ಥಾಪನೆಯ ಹಿಂದಿದ್ದ ಉದ್ದೇಶವನ್ನು ನೆನಪಿನಲ್ಲಿಟ್ಟುಕೊಂಡಿದೆ. ಅವುಗಳ ಆಚರಣೆಯಲ್ಲಿರುವುದೆಲ್ಲವೂ ಮೂಲೋದ್ದೇಶಕ್ಕೆ ವಿರುದ್ಧವಾದ ಸಂಗತಿಗಳೇ.

ಹಾಗಾಗಿಯೇ ಇದು ಬಲಿದಾನದ ಸಮಯವಲ್ಲ. ಮತ್ತೊಮ್ಮೆ ಬಲಿದಾನ ನೀಡಬೇಕಾದ ಸಮಯ ಬಾರದಂತೆ ತಡೆಯುವ, ಮತ್ತೊಮ್ಮೆ ದಾಸ್ಯಕ್ಕೊಳಗಾಗದಂತೆ ಎಚ್ಚರಿಕೆಯ ಹೆಜ್ಜೆಯನ್ನಿಟ್ಟು ನಡೆಯುವ ಸಮಯ. . .ಈ ಸಮಯದಲ್ಲಿ ಬಲಿದಾನಿಗಳನ್ನು ಸ್ಮರಿಸೋಣ. . . ಅವರ ಕನಸು ನನಸಾಗಿಸಲು ನಮ್ಮ ರಕ್ತವನ್ನು ಬೆವರಾಗಿಸೋಣ. . .

ಚುಟುಕ

**ಉಪಮೆ**

ನಿನ್ನ ನಗುವೆಂದರೆ
ಮುದ್ದಾದ,
ಹೂವಿನ ಮೇಲೆ
ಪತಂಗ ಕೂತಂಥ
ರಮ್ಯತೆ!

******

**ಆಹ್ವಾನ**

ಒಟ್ಟಾಗಿರೋಣ ಬಾ,
ಭಾವ ಭಿತ್ತಿಯಾಗಿ
ಕವಿತೆ ಬಾಗಿಲಾದ
ಕನಸುಗಳ ಭಾವಣಿಯ
ಮನೆ ಕಟ್ಟಿಕೊಂಡಿದ್ದೇನೆ!

**– ನವೀನ್ ಭಟ್, ಗಂಗೋತ್ರಿ**





# ನೀರ ಮೇಲಿನ ಗುಳ್ಳೆ ನಿಜವಲ್ಲ.... ಅರಿಯೇ

● ವೀರೇಶ್. ಕೆ. ದಾವಣಗೆರೆ.

ನಮ್ಮೂರಿನ ಸುಣ್ಣ ಬಣ್ಣ ಕಾಣದ ಏಕೋಪಾಧ್ಯಾಯ ಶಾಲೆಯ ಬೆಂಚಿನ ಮೇಲೆ ಅಕ್ಕಪಕ್ಕ ಕುಳಿತು ಪಾಠ ಕೇಳುವಾಗ ಶಿವು ನಿಜಕ್ಕೂ ಹೀಗಿರಲಿಲ್ಲ. ಅಷ್ಟೇ ಏಕೆ, ಕಾಲೇಜಿಗಂತ ನಾವು ನಗರಕ್ಕೆ ಬಂದು ಸೇರಿಕೊಂಡು ನಗರದ ಹುಡುಗರ ಎದುರು 'ಪ್ಯಾದೆ'ಗಳ ತರ ಓಡಾಡಿಕೊಂಡಿದ್ದಾಗಲೂ ಶಿವು 'ಹೀಗೆ' ಅನ್ನಿಸಿರಲಿಲ್ಲ. ಬಸ್‌ಸ್ಟ್ಯಾಂಡ್ ಹತ್ತಿರದ ಮಣಿ ಸೇಠುವಿನ ಚಾ ಅಂಗಡಿಯಲ್ಲಿ ಒಟ್ಟಿಗೆ ಚಾ ಕುಡಿಯುತ್ತಾ ನಾವು ಹರಟಿದ್ದು ಎಷ್ಟೋ, ಮಣಿ ಸೇಠುವೇ ಬಲ್ಲ. ಮೊನ್ನೆ ಮೊನ್ನೆ 'ಮೈ ಆಟೋಗ್ರಾಫ್' ಫಿಲ್ಮ್‌ನಲ್ಲಿ ನಮ್ಮ ಸುದೀಪು ಹಳೆಯ ಗೆಳೆಯರನ್ನೆಲ್ಲಾ ನೆನೆಸಿಕೊಳ್ಳುವಾಗ ನಂಗೆ ಶಿವೂನೇ ನೆನಪಾಗಿದ್ದ.

ಕಾಲೇಜು ಮುಗಿಸಿದ ನಂತರ ಶಿವು ಇಂಜಿನಿಯರಿಂಗ್ ಸೇರಿಕೊಂಡ. ನಾನು ಟೀಚರ್ ಆಗುವ ಕನಸು ಕಟ್ಟಿಕೊಂಡೆ. ನಮ್ಮಿಬ್ಬರ ಓದು ಬೇರೆಯಾದರೂ ಶಿವು ಆಗಲೂ ಸಿಗುತ್ತಿದ್ದ. ಅದೇನೋ ಇಂಟರ್ನಲ್ಸು, ಪ್ರಾಜೆಕ್ಟ್ ಅಂತೆಲ್ಲಾ ಅವನು ಬಡಬಡಿಸುವಾಗ ನಾನು 'ಅದೇನು ಮಹಾ ಇರ್ತದೋ ಬಿಡು' ಅಂತ ಉಡಾಫೆ ಮಾತಾಡಿ ಮಣಿ ಸೇಠುವಿನ ಸನ್ನಿಧಿಗೆ ಕರೆದೊಯ್ಯುತ್ತಿದ್ದೆ. ಆಗಲೂ ಬಿಸಳೇಗೌಡರ ಕ್ಯಾಂಟೀನಿನ ಮಂಡಕ್ಕಿ ಮಿರ್ಚಿಯೊಂದಿಗೆ ನಮ್ಮ ಅದೆಷ್ಟೋ ಸಂಜೆಗಳು ಮನೆಗೆ ಮರಳುತ್ತಿದ್ದವು.

ಯಾಕೋ ಶಿವು ಬದಲಾಗತೊಡಗಿದ್ದಾನೆ ಅನ್ನಿಸತೊಡಗಿದ್ದು ಅವನು ಬೆಂಗಳೂರು ಸೇರಿದ ಮೇಲೆಯೇ. ಯಾವತ್ತು ಅವನು ಸಾಫ್ಟ್‌ವೇರ್



**ಶಿವೂನ ದುಡ್ಡು ನೋಡಿ ಹತ್ತಿರವಾಗಿದ್ದವರೆಲ್ಲಾ ದೂರವಾಗತೊಡಗಿದ್ದಾರೆ. ಊರಲ್ಲೆಲ್ಲಾ ಸುದ್ಧಿ ಹರಡಿ ಮನಸ್ಸಿಗೆ ಕಿರಿಕಿರಿ. ಐ.ಟಿ. ಬಿದ್ದು ಹೋಗುತ್ತಿದೆ. ಲಕ್ಷಾಂತರ ಜನರ ಬದುಕು ಬರಡಾಗುತ್ತಿದೆ.**

ಎಂಬ ಮಾಯಾಂಗನೆಯ ಮಡಿಲಿಗೆ ಬಿದ್ದನೋ ಅವತ್ತಿನಿಂದ ಅವನ ವರ್ತನೆಯೇ ಬದಲಾಗಿಬಿಡ್ತು. ಮೊದ ಮೊದಲು ಹದಿನೈದು ದಿನಕ್ಕೊಮ್ಮೆ, ಆಮೇಲೆ ತಿಂಗಳಿಗೊಮ್ಮೆ, ನಂತರ 2 ತಿಂಗಳಿಗೊಮ್ಮೆಯೂ ಫೋನಿಗೂ ಸಿಗದಾದ. 'ಬಿಡು, ಬ್ಯುಸಿ ಇರ್ತಾನೆ' ಅಂತ ನಾನೇ ಸುಮ್ಮನಾಗ್ತಿದ್ದೆ.

ನಾನು ಬೆಂಗಳೂರು ಹತ್ತಿರದ ಊರಲ್ಲೇ ಕೆಲಸಕ್ಕೆ ಸೇರಿಕೊಂಡ ಮೇಲೆ ಸಿಗೋಣ ಅಂದ್ರೂ ಸಿಗದೆ ತಪ್ಪಿಸಿಕೊಳ್ಳತೊಡಗಿದ್ದ. ಯಾವಾಗಲಾದರೊಮ್ಮೆ ಕಾಲ್ ಮಾಡಿದರೆ ಬ್ಯುಸಿನೆಸ್, ಮೀಟಿಂಗ್, ಕ್ಲೈಂಟ್ ಕಾಲ್, ಟೀಮ್ ಲಂಚ್ ಅಂತೆಲ್ಲಾ ಹೇಳಿ ಆಮೇಲೆ ಕಾಲ್ ಮಾಡ್ತೀನಿ ಅಂತ ಹೇಳಿ ಮರೆತೇಬಿಡ್ತಿದ್ದ. ನನಗ್ಯಾಕೋ ಶಿವು ನಮ್ಮ ಬಳಿ ಏನೋ 'ಸ್ಟೇಟಸ್' ತೋರಿಸತೊಡಗಿದ್ದಾನೆ ಅನ್ನಿಸ್ಲಿಕ್ಕೆ ಶುರುವಾಯ್ತು.

ಒಮ್ಮೆ ಊರಿಗೆ ಹೋದಾಗ ಸಿಕ್ಕಿದ್ದ. ಚಾ ಕುಡೀಲಿಕ್ಕೆ ಮಣಿ ಸೇಠೂನ ಅಂಗಡಿಗೆ ಹೋಗೋಣ ಬಾ ಅಂದರೆ ಅಲ್ಲಿ 'ಕ್ಲೀನ್ ಇರಂಗಿಲ್ಲಲೇ' ಅಂದಿದ್ದ. ನಮ್ಮೂರಿನ ವರ್ಲ್ಡ್ ಫೇಮಸ್ ಬಿಸಳೇಗೌಡರ ಮಂಡಕ್ಕಿ ಮಿರ್ಚಿ 'ಲೋ ಕ್ವಾಲಿಟೀ' ಅಂದಿದ್ದ. ಅವನಿಗೆ ಬೇಜಾರಾಗಬಾರದಂತ ಕೆಲವೇ ದಿನಗಳ ಹಿಂದೆ ಆರಂಭವಾಗಿದ್ದ ಬೆಂಗಳೂರ್ ರಿಟರ್ನ್ಡ್ ಬಸವರಾಜುವಿನ ಗೋಬಿಮಂಚೂರಿ ತಿಂದು ಬಂದಿದ್ದೆವು. ನನಗಂತೂ ಇವನು 'ಶಿವೂನೇ ಅಲ್ಲ' ಅನ್ನಿಸತೊಡಗಿದ್ದ. ನಾನು ಸಾಫ್ಟ್‌ವೇರ್‌ಗೆ ಹೋಗಬಾರದಿತ್ತಾ ಅಂತಲೂ ಅನ್ನಿಸಿತ್ತು. ಕಾಲೇಜಿನಲ್ಲಿದ್ದಾಗ ಪಕ್ಕದ ಊರಿನ ಸುಶೀಲಳಿಗೆ ಲವ್‌ಲೆಟರ್ ಕೊಡಲು ಹೋಗಿ ಹೆದರಿ ಬೆವರಿ ಕುಸಿದುಬಿದ್ದಿದ್ದ 'ಶಿವ್ಯಾ' ಇವನೇನಾ ಅನ್ನಿಸೋ ತರ ಬದಲಾಗಿದ್ದ. ಅವನು ಶಿವು ಅಲ್ಲ, ಶಿವಕುಮಾರ್ ಪಾಟೀಲ್, ದಿ ಸಾಫ್ಟ್‌ವೇರ್ ಇಂಜಿನಿಯರ್ !!.

ನಾವು ಮಧ್ಯಮವರ್ಗದ ಜನ. ನಮಗೆ ಹೀಗೆ 'ಝಗಮಗ' ಅನ್ನೋತರ ಇರೋಕೆ ಬರಂಗಿಲ್ಲ. ಈ ಥಳುಕು – ಬಳುಕುಗಳು ಅರ್ಥವಾಗಂಗಿಲ್ಲ. ಅದಕ್ಕೆ ನಾ ಶಿವೂನಿಂದ ದೂರ ಉಳಿಯೋ ನಿರ್ಧಾರ ಮಾಡಿದ್ದೆ. ನಾನೇ ಸುಮ್ಮನಾದ ಮೇಲೆ ಅವನು ಸಂಪರ್ಕಕ್ಕೇ ಸಿಗಲಿಲ್ಲ. ಸಿಕ್ಕಾಗಲೆಲ್ಲಾ ಹತ್ತು ನಿಮಿಷ ಎದುರು ಕೂತಿದ್ರೆ 8 ನಿಮಿಷ ಮೊಬೈಲ್‌ನಲ್ಲೇ ಮಾತಾಡ್ತಿರ್ತಿದ್ದ. ದುಡ್ಡು, ಲೋನ್, ಇಂಟರೆಸ್ಟ್ ಎಂಬಿತ್ಯಾದಿ ಪದಗಳು ಪದೇ ಪದೇ ನಮ್ಮ ಮಾತಿನಲ್ಲಿ ನುಸುಳಿ ಹೋಗ್ತಿದ್ದವು. 'ಅಷ್ಟು ದುಡ್ಡಿನ ಹಿಂದೆ ಬೀಳಬೇಡಲೇ' ಅಂದ್ರೆ 'ವಾಸ್ತವದಲ್ಲಿ ಬದುಕಲೇ, ಬೆಂಗಳೂರು ಕಣಲೇ ಇದು' ಅಂತಿದ್ದ. ನಮ್ಮೂರಿನ ಶಿವು ಎಂಬ ಮುಗ್ಧ ಯುವಕ ಸಾಫ್ಟ್‌ವೇರ್ ಮಾಯಾಂಗನೆಯ ಮಡಿಲಿಗೆ ಬಿದ್ದು ಕುರುಡ ಕಾಂಚಾಣದ ಲಯಕ್ಕ ಥಕಥೈ ಅಂತ ಕುಣಿಯತೊಡಗಿದ್ದ.

'ಶಿವಕುಮಾರ್ ಪಾಟೀಲರು ಬೆಂಗಳೂರಿನಲ್ಲಿ ಒಂದು ಸೈಟು, ಒಂದು ಪ್ಲಾಟು ತಗೊಂಡರಂತೆ' ಅಂತ ಯಾರೋ ಊರಿನ ಮಂದಿ ಹೇಳಿದಾಗ 'ನನ್ನ ಗೆಳೆಯ ಅವನು, ಚೆಂದಾಗಿರಲಿ' ಅಂದಿದ್ದೆ. ಹಾಗೆ ನೋಡಿದರೆ ಒಂದು ಮಧ್ಯಮ ವರ್ಗದ ಮನೆಯಿಂದ ಹೋಗಿದ್ದ ಶಿವಕುಮಾರನದು ಇದೊಂದು ಸಾಧನೆಯೇ. 'ಅವ್ರದ್ದು ಬಿಡಿ ಸಾಫ್ಟೇರ್ ಅಲ್ಲವ್ರಾ, ನಮ್ಮ ನಿಮ್ಮ ಥರಾನಾ? ಅಲ್ಲಿ ರೊಕ್ಕಕ್ಕೇ ಬೆಲೆನೇ ಇರಂಗಿಲ್ಲಂತಲ್ಲ. ನಮ್ ಪಾಟೀಲರು ಸ್ವಲ್ಪ ದಿನಕ್ಕೆ ಇಮಾನದಾಗೆ ಊರಿಗೆ ಬಂದ್ರೂ ವಿಶೇಷ ಏನಿಲ್ಲ ಬುಡಿ', ಅಂದಿದ್ದ ನಮ್ಮೂರ ಅಂಗಡಿ ಜವರಪ್ಪ. ಶಿವಕುಮಾರ ಊರಿಗೆ ಇಮಾನದಲ್ಲಿ ಬಂದು, ಅದರ ಪೂಜೆಗೆ ಹೂವು ಕೇಳಿದರೆ ಎಷ್ಟು ಹೂವು ಬೇಕಾದೀತು ಅಂತ ಮನಸಲ್ಲೇ ಮಂಡಿಗೆ

> **ಕವನ**
>
> ಮನಸಾರೆ ಮುಕ್ಕಾಳು ಮೊಳ,
> ಮಲ್ಲಿಗೆ ತಂದಿದ್ದರೆ ಸಾಕಿತ್ತು,
> ಮೊರದಷ್ಟಗಲವಾಗುತಿತ್ತು,
> ಮಡದಿಯ ಮೊಗ, ಮುಂಚೆಲ್ಲಾ..
>
> ಈಗೀಗ, ಮುಕ್ಕಾಲು ಸಂಬಳ,
> ಖರ್ಚು ಮಾಡಿ, ಅವಳ ರಮಿಸಿದರೂ,
> ಒಂದು ಸಣ್ಣ ಹೂ ನಗೆ ನಕ್ಕು,
> ಸುಮ್ಮನಾಗುವಳಲ್ಲಾ..
>
> – ಭವ





ತಿಂದ ಹೂವಿನ ಯಮುನಕ್ಕ 'ನಿನ್ನ ಬಾಯಿ ಹರಕೆ ಅಂಗೇ ಆಗಲಿ, ಹೂವು ಮಾತ್ರ ನಂದೇಯ ಪೂಜೆಗೆ' ಅಂದಿದ್ದಳು.

ಮೊನ್ನೆ ಶಿವಕುಮಾರ ಊರಿಗೆ ಬಂದಿದ್ದ. ಬಸ್‌ಸ್ಟ್ಯಾಂಡಿನ ಅಂಗಡಿಯೆದುರು ಅವನ ಕಂಡಾಗ ಅಚ್ಚರಿಯಾಯಿತು. ಯಾಕೋ ಸೊರಗಿದವನಂತೆ ಕಾಣುತ್ತಿದ್ದ. ಕೆಲಸದ ಒತ್ತಡವಿರಬಹುದು ಅಂದುಕೊಳ್ಳುತ್ತಲೇ ಎಂದಿನ ಶೈಲಿಯಲ್ಲೇ 'ಏನೋ ಶಿವ್ಯಾ, ಇಲ್ಲಿ?, ಹೆಂಗಿದೀಯೋ?' ಅಂದೆ. ಅವನು 'ಇಲ್ಲಿ ಮಾತಾಡೋದು ಬೇಡ, ಬಾ ಸೇಠೂನ ಅಂಗಡೀಲಿ ಚಾ ಕುಡೀತ ಮಾತಾಡೋಣ' ಅಂದ. ಕ್ಲೀನ್ ಇರಂಗಿಲ್ಲಲೇ ಅಂದಿದ್ದ ಅದೇ ಮಣಿ ಸೇಠೂನ ಅಂಗಡಿಯಲ್ಲಿ! ಅಚ್ಚರಿಯಾಯಿತು. 'ಯಾಕೋ ಪಾಟೀಲರು, ಅಪರೂಪವಾಗಿ ಬಿಟ್ರಲ್ಲಾ' ಅಂತ ಮಣಿ ಸೇಠು ಕೇಳಿದಾಗ ಶಿವು ನಕ್ಕ ನಗೆ ಪೇಲವವಾಗಿತ್ತು ಅನ್ನಿಸ್ತು ನನಗೆ. ಚಾ ಕುಡಿಯುತ್ತಾ ಶಿವು ಕಳೆದ 3 ತಿಂಗಳಲ್ಲಿ ತನಗಾದ ತೊಂದರೆ, ಕಷ್ಟ–ನೋವುಗಳನ್ನು ಹೇಳಿಕೊಂಡ, ಸೇಠೂನ ಅಂಗಡಿಯಿಂದ ಶಾಲೆಯ ಬಯಲಿನ ಮುಂದೆ ಹೋಗಿ ಕೂತಾಗಲಂತೂ ಶಿವು ಅತ್ತುಬಿಟ್ಟ. ಶಿವೂನ ಆ ಸ್ಥಿತಿಯಲ್ಲಿ ನಾನು ನೋಡಿದ್ದು ಅದೇ ಮೊದಲು.

ಶಿವು ಕೆಲಸ ಕಳಕೊಂಡಿದ್ದ. ಕಳೆದ ನಾಲ್ಕು ವರ್ಷಗಳಿಂದ ಹಗಲಿರುಳೆನ್ನದೆ ದುಡಿದಿದ್ದ, ದುಡಿಸಿಕೊಂಡಿದ್ದ ಕಂಪನಿ ಏಕಾಏಕಿ ಶಿವೂನನ್ನು ಕೆಲಸದಿಂದ ತೆಗೆದುಹಾಕಿತ್ತು. ಅದಕ್ಕಿಟ್ಟ ಹೆಸರು 'ಕಾಸ್ಟ್ ಕಟಿಂಗ್', ಅಮೆರಿಕದಲ್ಲಾದ 'ಆರ್ಥಿಕ ಕುಸಿತ'ದ ಕಾರಣ ಕೊಟ್ಟು ಶಿವೂನ ತರಹ ಅವನ ಕಂಪನಿಯಿಂದ 800 ಜನರನ್ನು ಮನೆಗೆ ಕಳುಹಿಸಲಾಗಿತ್ತು. ಹಿಂದೆಯೇ ಒಂದು ಸೈಟ್ ಖರೀದಿಸಿದ್ದರೂ, ತನ್ನ ಏರುತ್ತಿರುವ ಸಂಬಳ ಹಾಗೂ ಗೆಳೆಯರ ಮಾತಿನ ಉಮೇದಿನಿಂದ ಒಂದು ಫ್ಲಾಟ್ ಕೂಡಾ ಖರೀದಿಸಿದ್ದ. ಅದಕ್ಕೇ ತಿಂಗಳಿಗೆ 30 ಸಾವಿರ ಸಾಲ ತುಂಬಬೇಕು. ಕ್ರೆಡಿಟ್ ಕಾರ್ಡ್, ಇನ್ಶೂರೆನ್ಸ್ ಅದೂ ಇದೂ ಅಂತ ಸಿಕ್ಕಾಪಟ್ಟೆ ಸಾಲಗಳಿವೆ. 3 ತಿಂಗಳ ಹಿಂದೆ ಅವನ ಬಂಧುಗಳ ಸಾಲಿನ ಹುಡುಗಿಯೊಬ್ಬಳ ಜತೆ ಮದುವೆ ನಿಶ್ಚಿತಾರ್ಥವೂ ಆಗಿ ಬಿಟ್ಟಿತ್ತು. ಈಗಂತೂ ಸಾವಿರಾರು ಮಂದಿ ಐಟಿ ಕಂಪನಿಗಳಿಂದ ಕೆಲಸ ಕಳೆದುಕೊಂಡು ಹೊರಬೀಳುತ್ತಿದ್ದಾರೆ. ಶಿವೂ ಕೆಲಸಕ್ಕೆ ಅಪ್ಲೈ ಮಾಡಿದ್ದರೂ ಇಂಟರ್‌ವ್ಯೂ ಕಾಲ್‌ಗಳೇ ಬರುತ್ತಿಲ್ಲ. ಗೆಳೆಯರ ಕಂಪನಿಗಳಲ್ಲೂ ಅದೇ ಕಥೆ. ಶಿವೂನ ದುಡ್ಡು ನೋಡಿ ಹತ್ತಿರವಾಗಿದ್ದವರೆಲ್ಲಾ ದೂರವಾಗತೊಡಗಿದ್ದಾರೆ. ಊರಲ್ಲೆಲ್ಲಾ ಸುದ್ದಿ ಹರಡಿ ಮನಸ್ಸಿಗೆ ಕಿರಿಕಿರಿ. ಐ.ಟಿ. ಬಿದ್ದು ಹೋಗುತ್ತಿದೆ. ಲಕ್ಷಾಂತರ ಜನರ ಬದುಕು ಬರಡಾಗುತ್ತಿದೆ.

ಈಗ ಶಿವು ವಿಚಿತ್ರವಾಗಿ ವರ್ತಿಸತೊಡಗಿದ್ದಾನೆ. ದಿನಗಟ್ಟಲೇ ಮೊಬೈಲ್ ಸ್ವಿಚ್ ಆಫ್. ರಾತ್ರಿ ಯಾವಾಗಲೋ ಫೋನ್ ಮಾಡಿ 'ಏನು ಮಾಡಲೋ' ಅಂತ ಬಿಕ್ಕುತ್ತಾನೆ. ಮದುವೆಯೂ ಮುರಿದ ದಿನ 'ಈ ಪ್ರೀತಿ, ಪ್ರೇಮ, ಸಂಬಂಧ ಎಲ್ಲ ಸುಳ್ಳು' ಅಂತ ಹತಾಶನಾಗಿ ಕೊರಗುತ್ತಿದ್ದ. ಅವನು ತುಂಬಾ ಧೈರ್ಯ ಕಳೆದುಕೊಂಡಿದ್ದಾನೆ. ಒಮ್ಮೊಮ್ಮೆ ಏನೇನೋ ಮಾತು, ಒಮ್ಮೊಮ್ಮೆ ತೀರಾ ಮೌನ, ಅಳು. ಅವನು ಏನಾದರೂ ಹೆಚ್ಚುಕಮ್ಮಿ ಮಾಡಿಕೊಂಡಾನೆಂಬ ಭಯದಿಂದ ನಾವು ಯಾರಾದರೊಬ್ಬರು ಸ್ನೇಹಿತರು ಜತೆಗಿದ್ದು 'ನಾವೆಲ್ಲ ಇದೀವಿ, ಭರವಸೆ ಕಳ್ಕೊಬೇಡೋ ಅಂತ ಧೈರ್ಯ ತುಂಬುತ್ತಿದ್ದೀವಿ. ಐ.ಟಿ. ಎಂಬ ಭ್ರಾಮಕ ಲೋಕ ಇಂದು ಬೆಂಗಳೂರಿನಲ್ಲಿ ಅದೆಷ್ಟು ಶಿವುಗಳನ್ನು ಸೃಷ್ಟಿಸಿದೆಯೋ?. ಸಾಫ್ಟ್‌ವೇರ್ ಕ್ಷೇತ್ರ ಪುನಶ್ಚೇತನಗೊಳ್ಳಲಿ, ಶಿವೂನಂತಹ ಮಧ್ಯಮ ವರ್ಗದ ಮಕ್ಕಳು ಮತ್ತೆ ನವಚೇತನ ಪಡೆಯಲಿ.

# ಹಣಕ್ಕೆ ನೆನಪುಗಳೆಂಬುದಿಲ್ಲ; ಆದರೆ ಅನುಭವಗಳಿಗಿದೆ

● ಮಹಮ್ಮದ್ ರಫೀಕ್, ಇಳಕಲ್



**ಅಂ**ಗನವಾಡಿ ಶಾಲೆಯಿಂದ ಆರಂಭಿಸಿ, ಸರಕಾರಿ ಕನ್ನಡ ಶಾಲೆಯಲ್ಲಿ ಓದಿ, ಯಾವುದೋ ದೊಡ್ಡ ಸಂಸ್ಥೆಯ ಖಾಸಗಿ ಕಾಲೇಜಿನಲ್ಲಿ ನೋಂದಾಯಿಸಿ ನಂತರ ದೇಸಿ/ವಿದೇಶಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುವಷ್ಟರಲ್ಲಿ ನಿಮ್ಮ ಶಿಕ್ಷಣಕ್ಕಾದ ಒಟ್ಟಾರೆ ಖರ್ಚು ನೆನಪಿಸಿರಲಿಕ್ಕಿಲ್ಲ. ಆದರೆ, ಅಳುತ್ತ ಹೋದ ಶಾಲೆಯ ಮೊದಲ ದಿನ, ಅಮ್ಮ ನೆನಪಿಸಿ ಕೊಡುವ ನಾವು ಬರೆದ/ ಓದಿದ ಮೊದಲ ಅಕ್ಷರ, ಪಡೆದ ಬಹುಮಾನಗಳು, ಸೋತ ಓಟಗಳು, ಮೊಣಕಾಲೊಡೆದುಕೊಂಡೂ ಆಡಿದ ಆಟಗಳು, ನಮ್ಮ ಪ್ರೀತಿಯ ಮೇಷ್ಟು, ಪ್ರೀತಿಯ ಗೆಳೆಯ/ಗೆಳತಿ, ಕಾಲೇಜಿನ ಆ ರಂಗು, ಪ್ಯಾಂಟು-ಬೂಟು-ಟೈಗಳಲ್ಲಿ ಮಿಂಚಿದ ಘಳಿಗೆಗಳ ನೆನಪುಗಳನ್ನು ಜೀವನಪರ್ಯಂತ ನಾವು ನೆನಪಿಸಿಕೊಳ್ಳುತ್ತೇವೆ ಅಲ್ಲವೇ?

ಆಸ್ಪತ್ರೆಗಾದ ಆ ಲಕ್ಷಾಂತರ ರೂಪಾಯಿಯ ಖರ್ಚು ಕಲವೇ ದಿನಗಳಲ್ಲಿ ಮರೆತುಹೋಗಬಹುದು. ಆದರೆ, ನಮಗೆ ಜೀವನ ನೀಡಿದ ಆ ಅಮ್ಮನ ಜೀವನವನ್ನು ಬದುಕಿಸಿಕೊಂಡ ಸಂತೋಷ, ನಮಗೆ ಬಾಳುನೀಡಿದ ಅಮ್ಮನೊಂದಿಗೆ ಬದುಕಲು ದೊರೆತ ಹೆಚ್ಚಿನ ದಿನಗಳಲ್ಲಿ ಕಳೆದ ಕ್ಷಣಗಳನ್ನು ಮರೆತುಹೋಗಬಹುದೇ?

ಮುಂದೆ ಮುದಿಮುಪ್ಪಾದಾಗ ನಿಮಗೆ ನಿಮ್ಮ ಹನಿಮೂನಿಗಾದ ವ್ಯಯ ನೆನಪಿಸಿರಲಿಕ್ಕಿಲ್ಲ. ಆದರೆ, ನಿಮ್ಮ ಜೀವನ

**ನಾವು ಬದುಕನ್ನು ಕಂಡುಕೊಳ್ಳುವ ರೀತಿಯಿಂದಲೇ ಈ ಭೂಮಿಯ ಮೇಲೆ ಹೆಜ್ಜೆ ಗುರುತನ್ನು ಮೂಡಿಸಬಹುದೇ ಹೊರತು, ನಮ್ಮಲ್ಲಿ ಎಷ್ಟಿದೆ ಏನಿದೆ ಎಂಬುದರ ಮೇಲೆ ನಮ್ಮ ಅನುಭವಗಳು ಮೂಡಬಾರದು.**

ಸಂಗಾತಿಯೊಡನೆ ಬೆರೆಯಲು ದೊರೆತ ಆ ಮಧುರಾತೀತ ದಿನಗಳು, ಒಡಮೂಡಿದ ದಾಂಪತ್ಯ, ಉಸಿರಲ್ಲಿ ಉಸಿರಾಗಿ ಕರಗಿ ಒಂದಾಗಿ ಹೋದ ಅನುಭವ ಕೊನೆಯುಸಿರಿರುವವರೆಗೂ ನೆನಪಿನಂಗಳ





ದಿಂದ ಅಳಿಸಿಹೋಗಬಹುದೇ?

ಹಣಕ್ಕೆ ನೆನಪುಗಳೆಂಬುದಿಲ್ಲ; ಆದರೆ ಅನುಭವಗಳಿಗಿದೆ.

ಒಳ್ಳೆಯ ಸಮಯ-ಕೆಟ್ಟ ಸಮಯ, ಶ್ರೀಮಂತಿಕೆ-ಬಡತನ, ಹೊಳೆಹೊಳೆವಂತೆ ಕಾಣುವ ನಾಳೆ ಜೀವನ-ಮುಂದೆ ಹೇಗೋ, ಏನೋ, ಇಲ್ಲೋ ಎಂಬಂತೆ ಗೋಚರಿಸಿದ ಅಭದ್ರ ಭವಿಷ್ಯ... ಪ್ರತಿಯೊಬ್ಬರಿಗೂ ಜೀವನವೆಂಬುದು ಒಂದಿಲ್ಲಾ ಒಂದು ರೀತಿಯಲ್ಲಿ ಮೇಲಿನಿಂದ ಕೆಳಗಿಳಗೆ - ಕೆಳಗಿನಿಂದ ಮೇಲಕ್ಕೆ ಗೊತ್ತಿಲ್ಲದೇ ತಿರುಗುವ ಚಕ್ರದ ಪಯಣ.

ಉಟ್ಟುಂಡು ದಾನ ಮಾಡಿದ ಆಗರ್ಭ ಶ್ರೀಮಂತಿಕೆ ಮತ್ತು ಉಸಿರನ್ನೇ ತಿಂದು ಕಳೆದ ಕಡು ಬಡತನ; ಇವೆರಡರಾಚೆಗೂ ಕೊನೆಯಲ್ಲಿ ಉಳಿಯುವುದು ನಾವು ಅನುಭವಿಸಿದ ಆ ಅಪೂರ್ವ ಕ್ಷಣಗಳ ನೆನಪು ಮಾತ್ರ,

ಒಮ್ಮೊಮ್ಮೆ ಕಿಸೆಗಳೆಲ್ಲೆಲ್ಲ ದುಡ್ಡು - ಕೆಲವೊಮ್ಮೆ ಪರ್ಸಿನಲ್ಲೂ ದುಡ್ಡಿಲ್ಲ!

ಎಲ್ಲ ಇದ್ದೂ ಬೇಸರ ಮುನಿಸು, ಸಿಟ್ಟು, ಅಸಮಾಧಾನ, ಆಶಾಂತಿ, ದು:ಖ ಮನಸ್ಸಿಗೆ; ಏನೇನೂ ಇಲ್ಲದೆಯೂ ಏನೋ ನಿರಾಳ, ಸಂತೃಪ್ತಿ, ಸಮಾಧಾನ, ಮುಖದಲ್ಲಿ ನೆಮ್ಮದಿಯ ನಗು.

ನಾವು ಗೆಳೆಯರೊಂದಿಗಿದ್ದು ಕಣ್ಣೀರು ಬರುವಷ್ಟು ನಕ್ಕು-ನಲಿದ ಆ ದಿನಗಳನ್ನು ನೆನೆದು ಬದುಕಿನ ಬಗ್ಗೆ ಧನ್ಯತಾಭಾವ ಹರಿದು ಮತ್ತೊಮ್ಮೆ ಕಣ್ಣೀರಾಗಬಹುದೇನೋ. ಆದರೆ ಒಬ್ಬರೇ ಕೂತುಕೊಂಡು ಅತ್ತು ಕಳೆದ ಆ ಘಳಿಗೆ ನೆನಪಾದರೆ ಮೊಗದಲ್ಲಿ ನಗೆ ಮೂಡುವುದಿಲ್ಲವೇ?

ಒಟ್ಟಾರೆ ಈ ಬದುಕೆಂಬುದು ನಮ್ಮೆಲ್ಲರನ್ನೂ ಹಲವು ಅನುಭವಗಳನ್ನು ನೀಡಿ ನಮ್ಮದೇ ಆದ ಒಂದು ಇತಿಹಾಸವನ್ನು ರಚಿಸಿಬಿಡುತ್ತದೆ.

ಮೊದಲ ಹೆಜ್ಜೆ,
ಮೊದಲ ತೊದಲು ಮಾತು,
ಮೊದಲ ಬಾರಿ ಸೈಕಲ್ ನಡೆಸಿದ್ದು
ಮೊದಲ ಪ್ರೇಮ / ಆಕರ್ಷಣೆ,
ಮೊದಲ ದಿನದ ಅಳು,
ಮೊದಲ ಕೆಲಸ,
ಮೊದಲ ಸಂಬಳ,
ಮೊದಲ ಗೆಲುವು - ಮೊದಲ ಸೋಲು,

ಅಪ್ಪ - ಅಮ್ಮನಿಗೆ ತಂದ ಮೊದಲ ಪ್ರೀತಿಯ ಗಿಫ್ಟು - ನಿಮ್ಮ ಮಗ / ಮಗಳು ನಿಮಗೆ ಕೊಡಿಸಿದ ಮೊದಲ ಗಿಫ್ಟು......

ಹೀಗೆ ಅನುಭವಗಳ ಪಟ್ಟಿ ವೇಳಾತೀತವಾಗಿ ಬೆಳೆಯುತ್ತ ಹೋಗುತ್ತದೆ.

ದುಡ್ಡಿನಿಂದ ಏನೇನೂ ಉಪಯೋಗವಿಲ್ಲವೆಂದು ಇಲ್ಲಿ ಹೇಳುತ್ತಿಲ್ಲ. ಪ್ರತಿಯೊಂದು ವಸ್ತುವಿಗೂ ಅದರದೇ ಆದ ಬೆಲೆ ಇರುತ್ತದೆ. ಹೌದು ಒಪ್ಪಿಕೊಳ್ಳೋಣ. ಕಲಿತ ಒಂದೊಂದು ಪಾಠಕ್ಕೆ ನಾವು ತೆತ್ತ ಬೆಲೆಯನ್ನು ಮರೆತುಬಿಡಬಹುದು ಅದರೆ ಆ ಅನುಭವಗಳಿಗೆ ಬೆಲೆ ಕಟ್ಟಲಾದೀತೇ? ಅವುಗಳನ್ನು ಮರೆಯಲಾದೀತೇ?

ಆರ್ಥಿಕ ಹಿಂಜರಿತ, ಮಾರುಕಟ್ಟೆ ಕುಸಿತಗಳಿದ್ದರೆ ಏನಾಯ್ತೀಗ??? ಬರಲಿ ಬಿಡಿ, ಇರಲಿ ಬಿಡಿ. ನಮ್ಮ ಜೀವನದ ಗುಣಮಟ್ಟದಲ್ಲಿ, ಬದುಕುವ ಶೈಲಿಯಲ್ಲಿ ಹಿಂಜರಿತ/ಕುಸಿತಗಳಿರದಿದ್ದರೆ ಸಾಕು.

ನಮ್ಮ ತಂದೆ-ತಾಯಿಯರನ್ನು ತೀರ್ಥಕ್ಷೇತ್ರಗಳಿಗೆ ಕರೆದೊಯ್ಯಲಾಗದಿದ್ದರೂ, ನಾವಿಂದೂ ಅವರನ್ನು ಹತ್ತಿರದಲಿರುವ ದೇವಸ್ಥಾನಕ್ಕೆ ಕರೆದೊಯ್ಯಬಹುದಲ್ಲ!

ಯಾವುದೋ ಅಂತರರಾಷ್ಟ್ರೀಯ ಸ್ಥಳಗಳಿಗೆ ರಜೆಗೆಂದು ಮಕ್ಕಳನ್ನು ಕರೆದುಕೊಂಡು

ಹೋಗಲಾಗದಿದ್ದರೂ ಪಕ್ಕದಲ್ಲೇ ಇರುವ ಪಾರ್ಕಿಗಾದರೂ ಹೋಗಿ ಅವರೊಂದಿಗೆ ನಕ್ಕುನಲಿದಾಡಬಹುದಲ್ಲ!!

ನಮ್ಮ ಪ್ರೀತಿಪಾತ್ರರನ್ನು ಕರೆದಪ್ಪಿಕೊಂಡು, ತೊಡೆಯ ಮೇಲೆ ತಲೆಯಿಟ್ಟು ಮುದ್ದಿಸಲು ಸಾವಿರಾರು ರೂಪಾಯಿಗಳ ಅವಶ್ಯಕತೆ ಯೇನೂ ಇಲ್ಲವಲ್ಲ!!!

ಉದ್ಯೋಗಾಕಾಂಕ್ಷಿಗಳಿಗೆ ಓದಿಕೊಳ್ಳಲು, ಇಚ್ಛೆಯಿದ್ದರೆ ಹೆಚ್ಚಿನ ವ್ಯಾಸಾಂಗ ಮಾಡಲು, ಕಂಪೆನಿಗಳಿಗೆ ತಮ್ಮ ಸಿಬ್ಬಂದಿಯನ್ನು ಇನ್ನು ಬೇರೆ ತಂತ್ರಾಂಶಗಳಿಗೆ ತರಬೇತಿ ಕೊಡಿಸಿ ಅವರಲ್ಲಿ ನಾಯಕತ್ವ ಗುಣವನ್ನು ಮೂಡಿಸಿ ಮುಂದೊಂದು ದಿನ ಈ ಆರ್ಥಿಕ ಹಿಂಜರಿತ ಕಳೆದು ಹೋಗಿ ಮಾರುಕಟ್ಟೆ ಗೂಳಿಯಂತೆ ಮುನ್ನುಗ್ಗುತ್ತಿರುವಾಗ ಆ ವಿಶ್ವಾಸಾರ್ಥ ಮಾನವ ಸಂಪನ್ಮೂಲಗಳನ್ನು ಯಥೇಚ್ಛವಾಗಿ ಬೆಳೆಸಲು ಇದು ಸಕಾಲವಲ್ಲವೇ?

ನಮ್ಮ ಆರೋಗ್ಯ, ಜ್ಞಾನ, ತೃಪ್ತಿ, ಆಧ್ಯಾತ್ಮಿಕ ತಾದಾತ್ಮ್ಯ, ಸುಖ ಸಂತೋಷಗಳು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿಲ್ಲ. ಆರ್ಥಿಕ; ಸ್ಥಿತಿಗತಿಗಳು ಚೆನ್ನಾಗಿದ್ದರೆ ಇನ್ನೂ ಒಂದು ತುತ್ತು ಹೆಚ್ಚಿಗೆ ಊಟ ಮಾಡಬಹುದಾಗಿತ್ತೇನೋ, ತಣ್ಣೀರಿನ ಬದಲು ಎಳೆನೀರು ಕುಡಿಯುತ್ತಿರಬಹುದಾಗಿತ್ತೇನೋ, ದೇವರಿಗೆ ಸೈಕಲ್ ಬ್ರಾಂಡ್ ಊದುಕಡ್ಡಿ ಬೆಳಗಬಹುದಿತ್ತೇನೋ, ಒಂದು ಜೊತೆ ಬಟ್ಟೆಯ ಬದಲು ಇನ್ನೊಂದು ಜೊತೆ ಹೆಚ್ಚು

ಖರೀದಿಸಬಹುದಾಗಿತ್ತೇನೋ... ಹೀಗೆ "ಏನೋ' ಗಳೆಲ್ಲ ನಮ್ಮ ದೈನಂದಿಕ ಅವಶ್ಯಕತೆಗಳ ವಿಸ್ತೃತ ಬೇಡಿಕೆಗಳೇ ಹೊರತು ಮೂಲಭೂತ ಅವಶ್ಯಕತೆಗಳೇನಲ್ಲ.

ಇಷ್ಟಾಗಿಯೂ ಹಸಿದವನಿಗೇ ಊಟದ ರುಚಿ ಹೊರತು ಫೈವ್ ಸ್ಟಾರ್ ಹೋಟೆಲ್‌ಗೆ ಹೋಗುವ ಅವಕಾಶವಿರುವವನಿಗಲ್ಲ.



ಈ ಸಮಯವೂ ಕಳೆದು ಹೋಗುತ್ತೆ, ಆರ್ಥಿಕ ಕುಸಿತ ದಾಟಿ ಅಬ್ಬರದಿಂದ ಮಾರುಕಟ್ಟೆ, ರೂಪಾಯಿ ಮೌಲ್ಯ ಸುಧಾರಿಸುತ್ತೆ... ಇವೆಲ್ಲಗಳಾದ ಮೇಲೆ ನಾವು ಹಿಂದೆ ಕಳೆದು ಹೋದ ಕ್ಷಣಗಳನ್ನು ನೆನಸಿಕೊಂಡಾಗ ನಮ್ಮ ಬದುಕಿನ ವಿಡಿಯೋ ಕೆಸೆಟ್ಟು ಖಾಲಿಯಾಗಿ ಕಾಣಿಸಬಾರದು. ಈ ಚೇತರಿಕೆಗಳಾಗುವ ದಿನಗಳಲ್ಲಿ ಜೋಲು ಮೋರೆ ಹಾಕಿಕೊಂಡು ನಮ್ಮ ಮುಖ ಆ ಕೆಸೆಟ್ಟಿನಲ್ಲಿ ಅಚ್ಚೊತ್ತಿ ಹೋಗಬಾರದು. ಆರ್ಥಿಕ ಸ್ಥಿತ್ಯಂತರಗಳಿಂದ ನಾವು ದುಡ್ಡನ್ನು ಗಳಿಸದಿರಬಹುದು, ಆದರೆ ಅನುಭವಗಳನ್ನಲ್ಲ.

ನಾವು ನಮ್ಮಲ್ಲಿ ಈಗ ಇರುವುದರಲ್ಲಿ ಸಂತೃಪ್ತರಾಗದೇ ಬದುಕುತ್ತಿದ್ದೇವೆ ಎನ್ನುವುದಾದರೆ ನಾಳೆ ಸಾಕಷ್ಟು ದೊರೆತ ಮೇಲೂ ನಾವು ಖುಷಿಯಾಗಿರುತ್ತೇವೆ ಎನ್ನುವುದು ಸುಳ್ಳು.

ನಾವು ಬದುಕನ್ನು ಕಂಡುಕೊಳ್ಳುವ ರೀತಿಯಿಂದಲೇ ಈ ಭೂಮಿಯ ಮೇಲೆ ಹೆಜ್ಜೆ ಗುರುತನ್ನು ಮೂಡಿಸಬಹುದೇ ಹೊರತು, ನಮ್ಮಲ್ಲಿ ಎಷ್ಟಿದೆ ಏನಿದೆ ಎಂಬುದರ ಮೇಲೆ ನಮ್ಮ ಅನುಭವಗಳು ಮೂಡಬಾರದು.

■

(ಈ-ಮೈಲ್ ಒಂದರ ಭಾವಾನುವಾದ)





# ಭಾರತೀಯ ನೃತ್ಯಕಲೆಗಳಲ್ಲಿ ಜೀವನದ ಅನುಸಂಧಾನ

ಚಿಂತನರಶ್ಮಿ

● ಮನೋರಮಾ. ಬಿ. ಎನ್, ಮಡಿಕೇರಿ

**ಭಾ**ರತೀಯ ನೃತ್ಯಕಲೆಗಳ ಅವಿಚ್ಛಿನ್ನ, ಅವಿನಾಶಿ ಪರಂಪರೆ ಜಗತ್ತಿನ ಉಳಿದೆಲ್ಲಾ ನೃತ್ಯಕಲೆಗಳಿಗೊಂದು ಆದರ್ಶ. ಅದು ಶಾಸ್ತ್ರೀಯವಾಗಿರಲಿ, ಅಥವಾ ಜಾನಪದವಾಗಿರಲಿ; ಜೀವನದ ಹಲವು ಮುಖಗಳನ್ನು ಸುಂದರವಾಗಿ ನಿರೂಪಿಸುವುದರೊಂದಿಗೆ ಭಾವಪ್ರಚೋದಿಸುವ ಈ ನೃತ್ಯ ಮಾಧ್ಯಮ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗಷ್ಟೆ ಅಲ್ಲ, ಬದುಕಿನ ಹಲವು ಆಯಾಮಗಳಿಗೆ ತನ್ನನ್ನು ವಿಸ್ತರಿಸಿಕೊಂಡಿದೆ.

ಭಾರತೀಯ ಶಾಸ್ತ್ರೀಯ ನೃತ್ಯದ ಪ್ರಸ್ತಾಪ ಋಗ್ವೇದದಲ್ಲಿ ಗುರುತಿಸಲಾಗಿದ್ದರೂ, ಋಗ್ವೇದಕ್ಕಿಂತಲೂ ಬಹಳಷ್ಟು ಪ್ರಾಚೀನವಾದುದು ಎಂಬುದನ್ನು ಕಂಡುಕೊಳ್ಳಬಹುದು. ಋಗ್ವೇದದಿಂದ ಪಠ್ಯವನ್ನು, ಯಜುರ್ವೇದದಿಂದ ಅಭಿನಯವನ್ನು, ಸಾಮವೇದದಿಂದ ಸಂಗೀತವನ್ನು, ಅಥರ್ವಣ ವೇದದಿಂದ ರಸವನ್ನು ತೆಗೆದು ಐದನೇಯ ವೇದವನ್ನಾಗಿ 'ನಾಟ್ಯವೇದ'ವನ್ನು ರಚಿಸಲಾಯಿತು ಎಂದು ಪ್ರಾಚೀನ ಗ್ರಂಥಗಳು ಹೇಳಲ್ಪಟ್ಟಿವೆಯಾದರೂ, ಇಂತಹ ದೈವಿಕ ಸ್ಪರ್ಶ ಕೇವಲ ಪೂಜ್ಯತಾಭಾವನೆಗೆ ಮಾತ್ರ ಮೀಸಲಾಗಿರದೆ, ರಕ್ಷಣಾತ್ಮಕ ಚೌಕಟ್ಟನ್ನು, ಶಾಸ್ತ್ರೀಯ ಪರಂಪರೆಯನ್ನು ಕಾಯ್ದುಕೊಳ್ಳಲು ಮೂಡಿರಬಹುದೆಂದು ಇತಿಹಾಸತಜ್ಞರ ಅಭಿಪ್ರಾಯ. ಏನೇ ಇರಲಿ, ಭಾರತೀಯ ನೃತ್ಯಕಲೆಯು ಚಿತ್ರಕಲೆಯ ರೇಖಾವಿನ್ಯಾಸ, ವರ್ಣವೈಭವ, ಶಿಲ್ಪಕಲೆಯ ರೂಪ-ಲಾವಣ್ಯ, ನಟನ ದೇವನಾನುಕರಣ, ಸಂಗೀತ-ರಾಗ-ಲಯ-ಪದವಿನ್ಯಾಸ, ಕವಿಯ ಭಾವನಾವಿಲಾಸದ ಸಂಗಮವಷ್ಟೆ ಆಗಿರದೆ ಜೀವನದ ಜೊತೆಗಿನ ಅನುಸಂಧಾನವೂ ಹೌದು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

ಈ ಎಲ್ಲಾ ಭಾರತೀಯ ನೃತ್ಯಕಲೆಗಳಿಗೆ ಭರತಮುನಿಯ ಶಾಸ್ತ್ರವೇ ಆಧಾರವೆಂದೇ ನಂಬಲಾಗಿದ್ದರೂ, ಅದಕ್ಕೂ ಹಿಂದೆ ಶಿಲಾಲಿ,



ಕೃಶಾಸ್ವರು 'ನಟಸೂತ್ರ' ಗಳನ್ನೇ ರಚಿಸಿದ್ದರು ಎಂದು ಪಾಣಿನಿಯ ವ್ಯಾಕರಣ ತಿಳಿಸುತ್ತದೆ. ಆದರೆ ಲಭ್ಯವಿರುವ ಗ್ರಂಥಗಳ ಪೈಕಿ ಭರತನ 'ನಾಟ್ಯಶಾಸ್ತ್ರ' ಅತೀ ಪ್ರಾಚೀನ ಮತ್ತು ಎಲ್ಲಾ ರಂಗ ಕಲೆಗಳಿಗೆ ಮಾತೃ ಗ್ರಂಥ ಎಂದೇ ನಿರ್ಧರಿಸಲ್ಪಟ್ಟಿದೆ. 'ಭರತ' ಎನ್ನುವ ಐತಿಹಾಸಿಕ ವ್ಯಕ್ತಿ ಇದ್ದನೇ? ಇದ್ದರೆ ಯಾರು? ಎಂಬ ಜಿಜ್ಞಾಸೆ ಇಂದಿಗೂ ಸಿದ್ಧಾಂತಕ್ಕೆ ಸಿಲುಕಿಲ್ಲ.

ಆದರೆ ಭರತಮುನಿಯ ಶಾಸ್ತ್ರವನ್ನು ಅವಲಂಬಿಸಿ ಬೆಳೆದು ಬಂದ ನಾಟ್ಯಸಂಪ್ರದಾಯಗಳೆಲ್ಲವೂ 'ಭರತನಾಟ್ಯ'ವೇ ಆಗಿದೆ. ಹಾಗಾದರೆ ಕೇವಲ ಇಂದಿನ ಪ್ರಚಲಿತ, 'ಭರತನಾಟ್ಯ ಪದ್ಧತಿ'ಯೊಂದೇ ಭರತನ ಕೊಡುಗೆ ಎನ್ನಲಾಗದು. (ಸಾದಿರ್, ದಾಸಿಆಟ್ಟಂ, ಕೇಲಿ, ನಿಲಂಬು, ದಾಸೀಕುಣಿತ ಎಂದು ಕರೆಯಲಾಗುತ್ತಿದ್ದ ನೃತ್ಯ ಪದ್ಧತಿ ಪುನರುಜ್ಜೀವನಗೊಂಡು 'ಭರತನಾಟ್ಯ' ಎಂದು ಕರೆಸಿಕೊಂಡಿತಷ್ಟೆ ವಿನಃ; ಇಂದಿಗೂ ವಿಮರ್ಶಕರು 'ಭರತನೃತ್ಯ' 'ಸಾದಿರ್' ಎಂದೇ ಕರೆಯಲು ಒತ್ತಾಯಿಸುತ್ತಿದ್ದಾರೆ, ಭರತನಾಟ್ಯವೆಂಬುದು ಶಾಸ್ತ್ರೀಯ ನೃತ್ಯದ ಒಂದು ಬಗೆ. ಅಷ್ಟೆ!)

ಆದರೆ, ಇಂದಿನ ಹಲವು ಯುವ ಮನಸ್ಸುಗಳು, ಆಧುನಿಕ ಪ್ರೇರೇಪಿತ ನಿಲುವುಗಳು ಶಾಸ್ತ್ರೀಯ ನೃತ್ಯವನ್ನು ಅಸಡ್ಡೆಯಿಂದ ಕಾಣುವುದು, ಅದರಲ್ಲಿ ನವೀನವೆನಿಸುವ ಅತಿರೇಕದ ಬದಲಾವಣೆಗಳನ್ನು, ಪ್ರಯೋಗಗಳನ್ನು ಕಲ್ಪಿಸುವುದು ಶಾಸ್ತ್ರೀಯ ಲಕ್ಷಣಗಳಿಗೆ ಕೊಡಲಿ ಪೆಟ್ಟು ಕೊಡುತ್ತಿದೆ. ಈ ನಿಟ್ಟಿನಿಂದ ನಾವು ಅರ್ಥ ಮಾಡಿಕೊಳ್ಳಬೇಕಾದುದು ಒಂದೇ!... "ಶಾಸ್ತ್ರೀಯವಾಗಿರುವುದರಿಂದಲೇ ಅದು ಶಾಸ್ತ್ರೀಯ ನೃತ್ಯ". ಆದರೆ ಅಷ್ಟು ಮಾತ್ರಕ್ಕೆ ಅದರ ವೈಭವೀಕರಣವೂ ಸಲ್ಲದು.

ಹಾಗೆ ನೋಡಿದರೆ ಭಾರತೀಯ ನೃತ್ಯ ಪರಂಪರೆಗಳಲ್ಲಿ ಇಂದಿಗೂ ೧೫೦೦ರಷ್ಟು ಜಾನಪದ ನೃತ್ಯದ ಸಂಪತ್ತು ಇದೆ. ಅದರಲ್ಲಿನ ಧಾರ್ಮಿಕ ಅಂಶ ಕಡಿಮೆಯಾಗುತ್ತಿದ್ದರೂ, ಜಾನಪದದ ವರ್ಣವೈವಿಧ್ಯ, ಸರಳತೆ, ಸ್ಫೂರ್ತಿ, ಲಯ-ಗತಿ, ಸಾತ್ವಿಕ ಆನಂದದಿಂದಾಗಿ ತೇಜಸ್ಸು ಕಡಿಮೆಯಾಗಿಲ್ಲ. ಜನಜೀವನದ ಪ್ರಮುಖ ಅಂಗವಾಗಿ ಸಂಸ್ಕೃತಿಯ ಅವಿಭಾಜ್ಯ ಅಂಶವಾಗಿ, ಆಕರ್ಷಣೀಯವಾಗಿರುವ ಇಂತಹ ನೃತ್ಯಗಳು ವೈವಿಧ್ಯತೆ, ಭಿನ್ನತೆ, ವ್ಯತ್ಯಾಸಗಳನ್ನು ತನ್ನೊಡಲಲ್ಲಿ ಕಾಯ್ದುಕೊಂಡು ರಂಜನೀಯವಾಗಿದೆ. ಇಂತಹ ಭಿನ್ನತೆಗಳು ಭಾರತೀಯ ಸಂಸ್ಕೃತಿಯ ಏಕತೆಯ ಮೂಲರೂಪ.

ಅಂತೆಯೇ ಒಂದೊಂದು ಪ್ರಾಂತ್ಯದ ಜನಜೀವನ, ಲಕ್ಷಣ, ಸ್ಥಳೀಯ ಸ್ಥಿತಿಗತಿ, ಅವಶ್ಯಕತೆಗಳ ಫಲವಾಗಿ ಆಯಾಯ ಪ್ರದೇಶದಲ್ಲಿ ಶಾಸ್ತ್ರೀಯ ನೃತ್ಯಗಳು ಮೈಗೂಡಿದವು. ಕೂಚಿಪುಡಿ, ಕಥಕ್ಕಳಿ, ಮೋಹಿನಿ ಆಟ್ಟಂ, ಮಣಿಪುರಿ, ಕಥಕ್, ಅಷ್ಟೇಕೆ ನಾಟ್ಯಶಾಸ್ತ್ರವನ್ನೇ ಅವಲಂಬಿಸಿರುವ ಕರ್ನಾಟಕದ ಯಕ್ಷಗಾನ, ಅಸ್ಸಾಮಿನ ಚೌ, ಸತ್ರಿಯಾ, ಕೊರವಂಜಿ, ಭಾಗವತಮೇಳ ನೃತ್ಯಗಳು ಶಾಸ್ತ್ರೀಯ ನೃತ್ಯಗಳೇ ಸರಿ! ಜೊತೆಗೆ ಸಾಮಾಜಿಕ, ಸಮಕಾಲೀನ ವಸ್ತು ನಿರೂಪಕಗಳು 'ನೃತ್ಯರೂಪಕ'ವೆಂಬ ಆಕರ್ಷಕ ವಿಧಾನದ ಮೂಲಕ ಅಸ್ತಿತ್ವ ಪಡೆದುಕೊಂಡು ಶಾಸ್ತ್ರೀಯ ಶೈಲಿಯೆನಿಸಿದವು. ಹಾಗೆ ನೋಡಿದರೆ ಉತ್ತರ ಭಾರತಕ್ಕೆ ಪರರ ಆಕ್ರಮಣದ ಫಲವಾಗಿ ಅಲ್ಲಿನ ನೃತ್ಯಕಲೆಗಳು ಹೆಚ್ಚಾಗಿ ಪರಕೀಯರ ಪ್ರಭಾವ ಪಡೆದುಕೊಂಡಿವೆ. ದಕ್ಷಿಣ ಭಾರತದ ನೃತ್ಯಸಂಪ್ರದಾಯಗಳು ಸಾಕಷ್ಟು ಮೂಲ ಸಂಪ್ರದಾಯ ಪರಿಶುದ್ಧತೆಯನ್ನು ಉಳಿಸಿಕೊಂಡಿದೆ.

**ಚುಟುಕು**

**ವೀಣೆ ಮತ್ತು ನೀನು**

ನಿನ್ನ ಬೆರಳುಗಳ ತುದಿಗೆ
ಬರೆದಿಟ್ಟ ರಾಗಗಳಿವೆ
ವೀಣೆ ತಂತಿಯ ಮೇಲೆ
ಒಮ್ಮೆ ಸವರು; ಸಾಕು-
ಹರಿಯುವಳು ಹಂಸಧ್ವನಿ

ನಾಗೇಶ್ ಪೈ, ಗಂಗೊಳ್ಳಿ





ಮೋಕ್ಷಕ್ಕೆ ಸಾಧನ, ಪ್ರಾರ್ಥನಾ ಸ್ವರೂಪ ಎಂದೆನಿಸಿಕೊಂಡಿರುವ ಇಂತಹ ಶಾಸ್ತ್ರೀಯ, ಸಾಂಪ್ರದಾಯಿಕ ನೃತ್ಯಗಳು ಜೀವನ ಮೌಲ್ಯಗಳನ್ನು ಪುನರ್‌ವಿಮರ್ಶಿಸುವಂತವು. ಇಂದಿನ ಆಧುನಿಕ ಯುಗದಲ್ಲೂ ಎಲ್ಲಾ ದೃಷ್ಟಿಯಿಂದಲೂ ಜನಜೀವನಕ್ಕೆ ಅಗತ್ಯವೆನಿಸುವಂತವು, ಕೆಲವೊಂದು ನೃತ್ಯಗಳು ಆಯಾಕಾಲದ ಪ್ರಗತಿಗೆ ಸಾಕ್ಷಿಯಾಗಿ, ತನ್ನ ಬದುಕಿನ ಯುಗವನ್ನು ಬಿಂಬಿಸುತ್ತವೆ. ಉದಾ: ಏಕವ್ಯಕ್ತಿ ಯಕ್ಷಗಾನದ ಪ್ರಸ್ತುತತೆ. ಅಂತವು ಆಯಾಕಾಲದ ಅವಶ್ಯಕತೆ, ವೈವಿಧ್ಯತೆಗಳಿಗೆ ಅಗತ್ಯವೂ ಕೂಡಾ!..

ಅಷ್ಟಕ್ಕೂ ಭಾರತೀಯ ಸಂಪ್ರದಾಯವೆಂಬುದು ಶಿಸ್ತಿನ ಕಟ್ಟುಪಾಡುಗಳಿಂದ ಕೂಡಿದ್ದಲ್ಲ ಸ್ವತಃ ಭರತಮುನಿಯೇ ತನ್ನ ಗ್ರಂಥದಲ್ಲಿ "ಪಾಂಡಿತ್ಯ, ಅನುಭವ, ಲೋಕಜ್ಞಾನದಿಂದ ನೃತ್ಯದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಹುದು" ಎಂದಿದ್ದಾನೆ. ಹಾಗಾಗಿ ಸ್ವಾತಂತ್ರ್ಯದ ಅಭಿವ್ಯಕ್ತಿ ಭಾರತೀಯ ಕಲೆಗಳ ಮೂಲಸ್ರೋತವೂ ಹೌದು. ಜೊತೆಗೆ ಪರಂಪರೆಯ ರಕ್ಷಣೆ, ಪ್ರಗತಿಯ ಸೂಕ್ಷ್ಮಗಳನ್ನು ಅರಿತುಕೊಳ್ಳಬೇಕಾದ್ದು ನಮ್ಮ ಕರ್ತವ್ಯವೂ ಕೂಡಾ. ಅಷ್ಟಕ್ಕೂ ಸ್ವಾತಂತ್ರ್ಯವೆಂದರೆ ಸ್ವೇಚ್ಛೆಯಲ್ಲವಲ್ಲ!

ಭಾರತೀಯ ನೃತ್ಯಗಳೂ ಹಲವು ಸ್ಥಿತ್ಯಂತರಕ್ಕೆ ಒಳಪಟ್ಟಿವೆ. ಸ್ವಾತಂತ್ರ್ಯಾ ನಂತರವಂತೂ ಅಂಟಿದ್ದ ಕಳಂಕಗಳ ಬೇಡಿಯನ್ನು ಸ್ವಲ್ಪ ಸ್ವಲ್ಪವಾಗಿಯೇ ಬಿಡಿಸಿಕೊಳ್ಳುತ್ತಾ ಜನಾದರಣೆ, ಪ್ರೋತ್ಸಾಹವನ್ನು ಪಡೆದುಕೊಂಡಿವೆ. ಆದರೆ ನಾಗರೀಕತೆಯ, ಪರಕೀಯತೆಯ ಗಾಳಿಗೆ ಕಲುಷಿತಗೊಳ್ಳದಂತೆ ಪರಿಶುದ್ಧವಾಗಿ ಉಳಿಸಿಕೊಳ್ಳುವುದೂ ಸಂಸ್ಕೃತಿಯ ಬಗೆಗೆ ನಾವು ನಿರ್ವಹಿಸಬೇಕಾದ ಕರ್ತವ್ಯ.

ಪ್ರಸ್ತುತ ಕಾಲದಲ್ಲಿ ನೃತ್ಯಶೈಲಿಯನ್ನು ಕರಗತ ಮಾಡಿಕೊಳ್ಳಲು ಬೇಕಾದ ಸಂಯಮ, ಶ್ರದ್ಧೆ, ನಿಷ್ಟೆ, ಏಕಾಗ್ರತೆ, ಅರ್ಪಣಾಭಾವಗಳು ಮರೆಯಾಗಿ ಅವಕಾಶವಾದಿಗಳು, ಅಪ್ರಬುದ್ಧರು ಅಟ್ಟಣಿಗೆ ಏರುತ್ತಾ ನೃತ್ಯಸಂಪ್ರದಾಯಕ್ಕೆ ಹೊಸತೆನಿಸುವ ಕಳಂಕವನ್ನು ಅಂಟಿಸುತ್ತಿದ್ದಾರೆ. ಎಲ್ಲಾ ನೃತ್ಯಶೈಲಿಗಳಲ್ಲೂ ನಿಪುಣರೆಂದು ತೋರಿಸಿಕೊಳ್ಳುವ ಆಶೆಯಲ್ಲಿ ಪರಂಪರೆಯನ್ನು ಮರೆಯುತ್ತಿರುವುದಲ್ಲದೆ, ಪೌರಾತ್ಯದ ಬೆರಕೆ, ವ್ಯಾಪಾರೀಕರಣ ನೃತ್ಯಶೈಲಿಯ ಪ್ರಮುಖ ಸಮಸ್ಯೆ ಮತ್ತು ಸವಾಲು.

ಆದರೆ ಇಂತಹ ತಾಳ್ಮೆ ಎಲ್ಲದರಂತೆ ನೃತ್ಯರಂಗದಲ್ಲೂ, ಮುಂದುವರಿದರೆ ಶಾಸ್ತ್ರೀಯ-ಸಂಪ್ರದಾಯ-ಜನಪದಗಳ ಅಸ್ತಿತ್ವವಷ್ಟೆ ಅಲ್ಲ. ನಮ್ಮ ಅಸ್ತಿತ್ವವನ್ನು ಅದರೊಂದಿಗೆ ಕಳೆದುಕೊಳ್ಳಬೇಕಾದೀತು. ಕಲೆಯ ಪ್ರಗತಿ ಪರಂಪರೆಯ ಸುಭದ್ರ ಬುನಾದಿಯ ಮೇಲೆ ಭಾರತೀಯವಾಗಿ ಮುಂದುವರಿದರಷ್ಟೆ ಅದು ಅರ್ಥಪೂರ್ಣ, ಪರಿಪೂರ್ಣ, ಅವಿನಾಶಿ... ಅಲ್ಲವೇ? ■

## ಡೊಂಕೋಕ್ತಿಗಳು

- ಓದುವಾಗ ಮನಸ್ಸು ಕೊಡಬೇಕು. ಆದರೆ, ಮನಸ್ಸು ಕೊಟ್ಟ ನಂತರ ಓದಲಾಗುವುದಿಲ್ಲ.
- ಪ್ರಶಸ್ತಿಗಳು ಸಿಗುತ್ತವೆಯೆಂದಾದರೆ ಎಷ್ಟೇ ಖರ್ಚಾದರೂ ಬಿಡಬಾರದು.
- ಒಂದೇ ವರ್ಗದ ವ್ಯಕ್ತಿಗಳಿಗೆ ಸೇರಿದ 'ವೃದ್ಧಾಶ್ರಮ'ಕ್ಕೆ ರಾಜಕೀಯ ಎನ್ನಬಹುದು.

– ವಿ.ಸುಂಕಸಾಳ : 9844673588

# ಅವಿಸ್ಮರಣೀಯ ಈಜಿಪ್ಟಿನ ಪ್ರವಾಸ

ಪ್ರವಾಸ ಕಥನ



● ರಾಘವೇಂದ್ರ ಅಗರ್ಖೇಡ್, ಬೆಂಗಳೂರು

**ಕೆ**ಲಸದ ನಿಮಿತ್ತ ನಾನು ಪಿರಮಿಡ್ಡುಗಳ ದೇಶವಾದ ಈಜಿಪ್ಟಿನ ರಾಜಧಾನಿಯಾದ ಕೈರೊ ನಗರಕ್ಕೆ ಹದಿನೈದು ದಿವಸಗಳ ಪ್ರವಾಸ ಕೈಗೊಂಡಿದ್ದೆ. ಪ್ರಪಂಚದ ಏಳು ಅದ್ಭುತಗಳಲ್ಲಿ ಮೊದಲ ಸ್ಥಾನದಲ್ಲಿರುವ ಪಿರಮಿಡ್‌ಗಳನ್ನು ಕಣ್ಣಾರೆ ನೋಡುವ ಆಸೆ ಚಿಕ್ಕಂದಿನಿಂದಲೂ ಮನದಲ್ಲಿತ್ತು. ಆದರೆ ಅದು ಈ ರೀತಿಯ ಅವಕಾಶದೊಂದಿಗೆ ಈಡೇರುತ್ತದೆ ಎಂದು ಎಣಿಸಿರಲಿಲ್ಲ.

ನಾನು ಇಳಿದುಕೊಂಡಿದ್ದ ಅಪಾರ್ಟ್‌ಮೆಂಟ್ ಎದುರಿಗೆ ಶಾಲೆಯೊಂದಿತ್ತು. ಬೆಳಗ್ಗೆ ಏಳು ಗಂಟೆಗೆ ಶಾಲೆ ನಮಾಜ್‌ನೊಂದಿಗೆ ಅಥವಾ ನಮಾಜ್ ತರಹ ಇರುವ ಪ್ರಾರ್ಥನೆಯೊಂದಿಗೆ ಆರಂಭವಾಗುತ್ತಿತ್ತು. ಅದು ನನಗೆ ನಿತ್ಯದ ಸುಪ್ರಭಾತ.





ನನ್ನ ಸಹೋದ್ಯೋಗಿಗಳಿಬ್ಬರು ಸುಮಾರು ಆರು ತಿಂಗಳುಗಳಿಂದ ಅಲ್ಲೇ ನೆಲೆಸಿದ್ದರು. ನಮ್ಮ ಕೆಲಸ ಬ್ಯಾಂಕೊಂದರಲ್ಲಿ ನಡೆಯುತ್ತಿತ್ತು. ಮನೆಯಿಂದ ಆ ಜಾಗಕ್ಕೆ ಸುಮಾರು ೧೫ ಕಿ. ಮೀ. ನಮ್ಮನ್ನು ಕರೆದುಕೊಂಡು ಹೋಗಲು ಮತ್ತು ವಾಪಸ್ ಮನೆಗೆ ತಂದು ಬಿಡಲು ವ್ಯಾನೊಂದರ ವ್ಯವಸ್ಥೆಯಾಗಿತ್ತು.

ಕೈರೊ ನಗರದಲ್ಲಿಯೂ ಸಹ ನಮ್ಮ ಬೆಂಗಳೂರಿನಂತೆಯೇ ವಾಹನ ದಟ್ಟಣೆ ಅಧಿಕ. ಆದರೆ ಅಲ್ಲಿ ಕಂಡುಬಂದ ಆಶ್ಚರ್ಯವೆಂದರೆ ಒಂದೇ ಒಂದು ಸಿಗ್ನಲ್ ಸಹ ಇರಲಿಲ್ಲ, ಅದೂ ಸಹ ನಗರದ ಅತ್ಯಂತ ಉದ್ದವಾದ ರಸ್ತೆಯಲ್ಲಿ. ಪ್ರತಿ ೧ ಕಿ. ಮೀಗೂ ಸಹ ಒಂದು ಕಿರುರಸ್ತೆ ಮುಖ್ಯರಸ್ತೆಯನ್ನು ಅಕ್ಕಪಕ್ಕದಲ್ಲಿರುವ ಅಡ್ಡರಸ್ತೆಗಳಿಗೆ ಸಂಪರ್ಕ ಒದಗಿಸುವಂತೆ ನಿರ್ಮಿಸಲಾಗಿದೆ. ಹಾಗಾಗಿ ಅಲ್ಲಿ ವಾಹನಗಳು ಒಳರಸ್ತೆಯನ್ನು ಅನುಸರಿಸಿ ಸಾಗಿಬಿಡುತ್ತವೆ. ಆದ್ದರಿಂದ ಒಂದೇ ಕಡೆ ಹೆಚ್ಚು ವಾಹನಗಳು ಜಮಾಯಿಸುವ ಪರಿಸ್ಥಿತಿ ಬರುವುದೇ ಇಲ್ಲ. ಆದ್ದರಿಂದಲೇ ಏನೋ ಟ್ರಾಫಿಕ್ ಸಿಗ್ನಲ್‌ಗಳು ಅಲ್ಲಿ ಕಂಡುಬರುವುದಿಲ್ಲ. ಎಷ್ಟೇ ಆದರೂ ಪಿರಮಿಡ್ಡುಗಳನ್ನು ನಿರ್ಮಿಸಿರುವ ಮಹಾನ್ ದೇಶವಲ್ಲವೇ ಇದು!!!

ಅಲ್ಲಿ ನನಗೆ ಮುಖ್ಯವಾಗಿ ಆದದ್ದು ಊಟದ ಸಮಸ್ಯೆ, ಅದೂ ನನ್ನಂಥ ಸಸ್ಯಾಹಾರಿಗೆ ಅತ್ಯಂತ ಕಡಿಮೆ ಆಯ್ಕೆಗಳಿದ್ದವು. ರೊಟ್ಟಿಯಂತಹ ಒಂದು ಭಕ್ಷ್ಯದ ಜೊತೆ ಬದನೆಕಾಯಿ ಪಲ್ಯ ಸಿಗುತ್ತಿತ್ತು, ಅದೂ ಒಂದೋ ಅಥವ ಎರಡೋ ಅಂಗಡಿಗಳಲ್ಲಿ ಮಾತ್ರ ಸಿಗುವಂತಹ ಅಮೂಲ್ಯವಾದ ಸಸ್ಯಾಹಾರಿ ಅಡುಗೆ. ಹೀಗಾಗಿ ನಾನು ಖಡ್ಡಾಯ ಡಯಟ್ ಮಾಡುವ ಪರಿಸ್ಥಿತಿ ಎದುರಾಯಿತು!!!

ಇನ್ನು ಅಲ್ಲಿಯ ಜನಜೀವನದ ಬಗ್ಗೆ ಹೇಳುವುದಾದರೆ, ಅದು ಅರಬರನ್ನು, ಮುಸ್ಲಿಮರನ್ನು ಮತ್ತು ಕ್ರಿಶ್ಚಿಯನ್‌ರನ್ನು ಒಳಗೊಂಡಿರುವ ದೇಶ. ಅಲ್ಲಿಯ ಜನಗಳ ಬಣ್ಣ ಕೆಂಪು ಅಥವಾ ಬಿಳಿ. ಕಪ್ಪು ಅಥವಾ ಗೋಧಿ ಮೈಬಣ್ಣದವರನ್ನು ಕಂಡದ್ದು ಅತಿ ವಿರಳ. ಸಹಾರಾ ಮರುಭೂಮಿಯನ್ನು ಒಳಗೊಂಡಿರುವ ಆಫ್ರಿಕಾದ ಈ ದೇಶದಲ್ಲಿ ಹರಿಯುವ ನೈಲ್ ನದಿಯೊಂದೇ ಈಜಿಪ್ಟಿನ ಜೀವಾಳ ಎನ್ನಬಹುದು. ಶತಮಾನಗಳಿಂದ ಈ ದೇಶದಲ್ಲಿ ಸಮೃದ್ಧಿ ಮತ್ತು ಜನರ ವಾಸಕ್ಕೆ ಯೋಗ್ಯವನ್ನಾಗಿ ಮಾಡಿರುವ ಜಲದೇವತೆ ನೈಲ್. ಇತಿಹಾಸದ ಭೀಕರ ಕ್ಷಾಮವನ್ನು ಕಂಡಿರುವ ಈಜಿಪ್ಟ್ ದೇಶದಲ್ಲಿ, ಆ ವರ್ಷ ನೈಲ್ ನದಿಯ ಪಾತ್ರದಲ್ಲಿ ನೀರು ಬತ್ತಿದ್ದೇ ಕಾರಣವಂತೆ. ಇದರಿಂದಲೇ ನೀವು ಊಹಿಸಬಹುದು ಪ್ರಕೃತಿಯ ಪ್ರಭಾವ ನಾಗರೀಕತೆಯ ಬೆಳವಣಿಗೆಯಲ್ಲಿ ಯಾವ ಮಟ್ಟದ ಪಾತ್ರವನ್ನು ವಹಿಸಿರುತ್ತದೆಯೆಂದು!!! ಇಂತಹ ಪ್ರಕೃತಿಯನ್ನೇ ನಾವು ನಾಗರೀಕರು ಹೇಗೆ ಹಾಳು ಮಾಡುತ್ತಿದ್ದೇವೆ, ಆಶ್ಚರ್ಯವಾ ಗುತ್ತದಲ್ಲವೇ?



ಈಜಿಪ್ಟಿನಲ್ಲಿಯೇ ಮೊದಲು ಪೇಪರ್(ಪ್ಯಾಪಿರಸ್)ನ ಉಪಯೋಗ ಮಾಡಿದರಂತೆ. ಈಗಲೂ ಸಹ ಅಲ್ಲಿನ ಕಲಾತ್ಮಕ ವಸ್ತುಗಳ ಮಾರಾಟಗಾರರ ಬಳಿ ಪ್ಯಾಪಿರಸ್‌ನ ಮೇಲೆ ಮೂಡಿಸಿರುವ ಚಿತ್ರಪಟಗಳು ದೊರೆಯುತ್ತವೆ.



ಪೇಪರ್(ಪ್ಯಾಪಿರಸ್)ನ ಚಿಒಂದು ಮಾದರಿ

ಇನ್ನು ಅಲ್ಲಿನ ಜನಗಳ ಮತಶ್ರದ್ಧೆ ಮೆಚ್ಚಲೇಬೇಕಾದದ್ದು. ದಿನಕ್ಕೆ ಐದು ಬಾರಿ ನಮಾಜ್ ಮಾಡಲೇಬೇಕೆಂಬ ನಿಯಮವನ್ನು ಪ್ರಾಯಶಃ ಎಲ್ಲ ಮುಸ್ಲಿಮರು ಪಾಲಿಸುತ್ತಾರೆಂದೆನಿಸುತ್ತದೆ. ಕಚೇರಿಗಳಲ್ಲಿರಲಿ, ರಸ್ತೆಯಲ್ಲಿರಲಿ ಆ ಸಮಯಕ್ಕೆ ಸರಿಯಾಗಿ ಮೆಕ್ಕಾ ಇರುವ ದಿಕ್ಕಿಗೆ ತಿರುಗಿ ನಮಾಜ್ ಮಾಡುತ್ತಾರೆ. ದಿನಕ್ಕೆ ಐದು ಬಾರಿ!!!

ಇನ್ನು ಈಜಿಪ್ಟಿನ ಆಕರ್ಷಣೆಯಾದ, ಏಳು ಅದ್ಭುತಗಳಲ್ಲೊಂದಾದ, ಪ್ರಪಂಚದ ಮೂಲೆ ಮೂಲೆಗಳಿಂದ ಪ್ರವಾಸಿಗರನ್ನು ತನ್ನೆಡೆಗೆ ಸೆಳೆಯುವ ಮತ್ತು ಸರಕಾರದ ಆದಾಯದ ಪ್ರಮುಖ ಮೂಲಗಳಲ್ಲೊಂದಾದ ಪಿರಮಿಡ್ಡುಗಳ ಬಗ್ಗೆ ಒಂದಿಷ್ಟಾದರೂ ಬರೆಯದೇ ಈ ಪ್ರವಾಸ ಕಥನವನ್ನು ಮುಗಿಸಲಾರದು.

ಕೈರೋ ನಗರದ ತುಸು ದೂರದಲ್ಲಿಯೇ ಇರುವ ಗೀಜಾ ಪಟ್ಟಣದಲ್ಲಿ ವಿಶ್ವಪ್ರಸಿದ್ಧವಾದ ಮೂರು ಪಿರಮಿಡ್ಡುಗಳಿವೆ. ಅವನ್ನು ನೋಡಲು ನಾನು ಮತ್ತು ನನ್ನ ಸಹೋದ್ಯೋಗಿ ಹೋದೆವು. ಕಾರಿನಿಂದ ಇಳಿದ ಕೂಡಲೇ ಆಕಾಶದೆತ್ತರಕ್ಕೆ ನಿಂತಿರುವಂತೆ ಭಾಸವಾದ ಮೊದಲನೆಯ ಪಿರಮಿಡ್ಡನ್ನು ನೋಡಿ ಭಯ ಮತ್ತು ರೋಮಾಂಚನದ ಅನುಭವವಾಯ್ತು. ಸುಮಾರು ೫೦ ಈಜಿಪ್ಟಿಯನ್ ಡಾಲರುಗಳ ಟಿಕೆಟ್ ತೆಗೆಸಿ ಅಲ್ಲಿಯ ಪ್ರವೇಶ ಪಡೆಯಬೇಕು. ದಿನಕ್ಕೆ ಸಾವಿರಾರು ಪ್ರವಾಸಿಗರು ಭೇಟಿ ಕೊಡುತ್ತಾರೆ. ದಿನಪೂರ್ತಿ ಅಲ್ಲಿಯೇ ಇದ್ದುಬಿಡಬೇಕೆಂದು ಅನ್ನಿಸಿಬಿಟ್ಟಿತು. ಅಷ್ಟು ಅದ್ಭುತ ಮತ್ತು ನಿಖರವಾದ ನಿರ್ಮಾಣವನ್ನು ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಹೇಗೆ ಮಾಡಿದ್ದರು? ಅದು ಎಷ್ಟು ಪ್ರಕೃತಿ ವೈಪರೀತ್ಯಗಳಿಗೆ ಒಳಪಟ್ಟಿರಬಹುದು ಎಂಬುದನ್ನು ಊಹಿಸಲೂ ಸಾಧ್ಯವಾಗದು. ಆದರೂ ಸಹ ಒಂದಿಷ್ಟೂ ಅಲುಗಾಡದೆಯೇ ಸ್ಥಿರವಾಗಿ, ಮಾನವನ ಸಾಧನೆಯ ಪ್ರತೀಕವಾಗಿ ನಿಂತಿದೆ!!!!

ಇನ್ನು ಹೇಳಲು ಸಾಕಷ್ಟು ವಿಷಯಗಳಿದ್ದರೂ ಸಹ ಇಲ್ಲಿಗೇ ಮುಗಿಸುತ್ತಿದ್ದೇನೆ. ಈಜಿಪ್ಟಿನ ಬಗ್ಗೆ ಹಲವಾರು ಪುಸ್ತಕಗಳಲ್ಲಿ, ಇಂಟರ್‌ನೆಟ್‌ನಲ್ಲಿ ವಿಷಯಗಳ ಮಹಾಪೂರವೇ ದೊರೆಯುತ್ತದೆ.

### ವಿಚಾರ ರಶ್ಮಿ

ಪ್ರತ್ಯೇಕಸುಖವಲ್ಪದುದು, ಗಳಿಗೆ ತೋರ್ಕೆಯದು
ಆತ್ಮವಿಸ್ತಾರವಾಗಿಪುದೆ ನಿತ್ಯ ಸುಖ ॥
ವ್ಯಕ್ತಿ ಜೀವನದ ಸೊಂಪು ಸಮಷ್ಟಿ ಜೀವನದಿ
ಒಟ್ಟು ಬಾಳ್ವುದ ಕಲಿಯೊ – ಮಂಕುತಿಮ್ಮ ॥

ಗೌರವಿಸು ಜೀವನವ, ಗೌರವಿಸು ಚೇತನವ
ಆರದೋ ಜಗವೆಂದು ಭೇದವೆಣಿಸದಿರು ।
ಹೋರುವುದೆ ಜೀವನ ಸಮೃದ್ಧಿಗೋಸುಗ ನಿನಗೆ
ದಾರಿಯಾತ್ಮೋನ್ನತಿಗೆ ಮಂಕುತಿಮ್ಮ ॥
ಮಣಿ ಮಂತ್ರ ತಂತ್ರ ಸಿದ್ಧಿಗಳ ಸಾಕ್ಷ್ಯಗಳೇಕೆ

ಮನಗಾಣಿಸಲು ನಿನಗೆ ದೈವದದ್ಭುತವ ?
ಮನುಜರೊಳಗಾಗಾಗ ತೋರ್ಪ ಮಹನೀಯ ಗುಣ
ಅನುವಾದ ಬೊಮ್ಮನದು – ಮಂಕುತಿಮ್ಮ ॥

ಪ್ರತ್ಯೇಕ ಸುಖವ, ನೀಂ ಪ್ರತ್ಯೇಕ ಸಂಪದವ
ನತ್ಯಾಶೆಯಿಂದರಸಿ ಮಿಕ್ಕೆಲ್ಲ ಜಗವ –
ನೊತ್ತಟ್ಟಿಗಿಡುವೆನೆನೆ, ನಷ್ಟವಾರಿಗೊ ಮರುಳೆ ?
ಬತ್ತುವುದು ನಿನ್ನಾತ್ಮ – ಮಂಕುತಿಮ್ಮ ॥

– ಡಿ.ವಿ.ಜಿ.





## ಮರೆಯಲೇಬೇಕಿಲ್ಲ ಎಲ್ಲವನೂ

ಕವನ

ನೀನಿಟ್ಟ ಆ ಪ್ರೀತಿ
ಕಣ್ಣೀರಾಗಿದೆ ಗೆಳೆಯ
ಮಾತು ಹರಿದಾಗಿದೆ
ಭಾಷೆ ದೂರಾಗಿದೆ
ಪುಟಕಿಟ್ಟ ಚಿನ್ನದಂತೆ
ನನ್ನ ಬದುಕಾಗಿದೆ.

ನಿನಗೊಂದು ಥ್ಯಾಂಕ್ಸ್ ಕಣೊ
ನಿನ್ನ ಪ್ರೀತಿಯ ತವಕ
ನನಗಿತ್ತ ಪುಳಕ
ನಿನಗಾಗಿ ನಿಡುಸುಯ್ದು ತಂಬೆಲರ ರಾತ್ರಿ
ಮೌನವನು ಹೊದ್ದು ಮಲಗಿದ್ದ ಮೈತ್ರಿ
ನೂರು ನೆನಕೆಗಳಲ್ಲಿ
ವೈಭವದ ತೇರು
ಹೆಚ್ಚೇನೂ ಇಲ್ಲ ಬಿಡು
ನಿನ್ನ ಮೇಲೆ ದೂರು.

ಇದ್ದಷ್ಟು ದಿನ ನೀನು ಬದುಕಾಗೇ ಇದ್ದವನು
ಹೋದ ಮೇಲೊಂದಿಷ್ಟು ತಿಳುವಳಿಕೆ ಕೊಟ್ಟವನು
ಒಲವ ಪುಟಗಳಲಷ್ಟು ಸಹಿ ಹಾಕಿ ಹೋದವನು
ಮರೆತ ನೆಪದಲ್ಲಷ್ಟು ಬದುಕು ಕಲಿಸಿದವನು.

ಇರಲಿ ಬಿಡು ಹೀಗೇನೇ ಪುಟ್ಟ ಪ್ರೀತಿಯ ನೆನಪು
ಅಷ್ಟಕ್ಕೂ ಮರೆಯಲೇ ಬೇಕಿಲ್ಲ ಎಲ್ಲವನೂ
ಈ ರಾಗದಾ ಗುಂಗು ಮನದಾಳಕಿಳಿದಿರಲಿ
ಹೊಸ ರಾಗವನು ಗುನಗೋ ಮನ ನನ್ನದಾಗಿರಲಿ
ನಕ್ಕು ಬಿಡು ಓ ಗೆಳೆಯಾ
ಚಿಕ್ಕ ತಿರುವಿನಲ್ಲೊಂದು
ಹಚ್ಚ ಹಸುರಿನ ಮಲ್ಲಿಗೆಯ ಬಳ್ಳಿ
ಸಿಕ್ಕಬಹುದೇನೋ.

ಸುಮದ ಪರಿಮಳದಂತೆ
ಅರಳಿರಲಿ ನಿನ ಮನಸು
ಬಾಡದಿರಲಿ ನಿನ್ನ ನಲುಮೆ ಬಳ್ಳಿ
ಅಂತೆ ನಾ ಕಾಯುವೆನು
ಯಾವುದೋ ತೀರದಲಿ
ನನಗಾಗಿ ಕಾದಿರುವ ಪುಟ್ಟ ದೋಣಿಯ ನೆನೆದು
ಹೊಸ ಬದುಕು ಕಟ್ಟುವೆನು
ಹೊಸ ಪ್ರೀತಿ ಹುಟ್ಟಿನಲಿ
ಅಷ್ಟಕ್ಕೂ ಮರೆಯಲೇ ಬೇಕಿಲ್ಲ ಇಲ್ಲಿ ಎಲ್ಲವನು.

– ಕಪಿಲಾ ಶ್ರೀಧರ್

### ವಿಷಯ – ವಿಶೇಷ



## ಇನ್ನೂ ಇದ್ದಾರೆ ಇಂಥವರು !

'ಪ್ರಾಮಾಣಿಕರು' ಅವರೆಲ್ಲಿದ್ದಾರೆ? ಎಂಬ ಪ್ರಶ್ನೆ ಆಗಾಗ ಮೂಡುವುದು ಸಹಜ. ಈ ಪ್ರಶ್ನೆಗೆ ತಮ್ಮ ಕಾರ್ಯದ ಮೂಲಕ ಉತ್ತರ ನೀಡಿದ್ದು ಒಬ್ಬ ಸಾಮಾನ್ಯ ಆಟೋ ಚಾಲಕ. ಸುಮಾರು ಒಂದೂವರೆ ಲಕ್ಷರೂಗಿಂತ ಹೆಚ್ಚಿನ ಹಣ ಹೊಂದಿದ್ದ ಬ್ಯಾಗನ್ನು ಮರಳಿಸುವ ಮೂಲಕ ಪುದುಚೇರಿಯ ಆಟೋ ಚಾಲಕ ಪ್ರಾಮಾಣಿಕತೆಗೆ ಅನ್ವರ್ಥರಾಗಿದ್ದಾರೆ. ಕೆ.ರಾಮಲಿಂಗಮ್ ಫ್ರಾನ್ಸ್‌ನಿಂದ ಬಂದಿದ್ದ ಮಹಿಳೆ ಮತ್ತು ಆಕೆಯ ಪುತ್ರನನ್ನು ರಾಮಲಿಂಗಮ್ ತಮ್ಮ ಆಟೋದಲ್ಲಿ ಪುದುಚೇರಿಯ ಪ್ರದೇಶವೊಂದಕ್ಕೆ ತಲುಪಿಸಿದ್ದರು. ಈ ಸಂದರ್ಭದಲ್ಲಿ ಆ ಫ್ರೆಂಚ್ ಮಹಿಳೆ 1.50 ಲಕ್ಷ ರೂ.ಗಿಂತ ಹೆಚ್ಚಿನ ಮೌಲ್ಯದ ಹಣದ ಬ್ಯಾಗನ್ನು ಆಟೋದಲ್ಲಿ ಮರೆತಿದ್ದಳು. ರಾಮಲಿಂಗಮ್ ಆಕೆಯನ್ನು ಪತ್ತೆ ಹಚ್ಚಿ ಪೋಲೀಸರ ಸಮ್ಮುಖದಲ್ಲಿ ಹಣದ ಬ್ಯಾಗನ್ನು ಮರಳಿಸಿ ಪ್ರಾಮಾಣಿಕತೆಗೆ ಹೊಸ ಭಾಷ್ಯ ಬರೆದರು. ಪೋಲಿಸ್ ಇಲಾಖೆ ಅವರನ್ನು ಸನ್ಮಾನಿಸಿದೆ.

# ‘ಚೈತ್ರರಶ್ಮಿ’ಗೆ ವಂದನೆ, ಕೃತಜ್ಞತೆಯ ನಾಲ್ಕು ಮಾತು

**‘ಮಾರುತಿ ಮೊಗೇರ್’ – ವಿದ್ಯಾರ್ಥಿ ಜೀವನದಲ್ಲಿಯೇ ತಮ್ಮ ಎರಡೂ ಕಣ್ಣುಗಳನ್ನು ಕಳೆದುಕೊಂಡರೂ ಸಹ ಧೃತಿಗೆಡದೇ ಬ್ರೈಲ್ ಲಿಪಿ ಕಲಿತು ರಾಷ್ಟ್ರಮಟ್ಟದವರೆಗಿನ ಅನೇಕ ಸ್ಪರ್ಧೆಗಳಲ್ಲಿ ವಿಜೇತರಾಗಿ ಪ್ರಸ್ತುತ ‘ರಮಣಮಹರ್ಷಿ ಅಂಧರ ಶಾಲೆ’ಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಾ ಅನೇಕ ಸಾಹಿತ್ಯ ಹಾಗೂ ಸೃಜನಶೀಲ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಸಾಧಕರು. ‘ಚೈತ್ರರಶ್ಮಿ’ಯ ‘ನಾಲ್ಕನೇ ವರ್ಷ ಸಂಭ್ರಮ’ದ ಕಾರ್ಯಕ್ರಮದಲ್ಲಿ ಚೈತ್ರರಶ್ಮಿಯ ಗೌರವ ಸನ್ಮಾನಕ್ಕೆ ಪಾತ್ರರಾದವರು. ಕಳೆದ ತಿಂಗಳು ಸಿಕ್ಕಾಗ ‘ಸರ್, ಚೈತ್ರರಶ್ಮಿಯ ಕುರಿತು ಕೃತಜ್ಞತೆಯ ನಾಲ್ಕು ಮಾತು ಬರೆದಿದ್ದೇನೆ, ದಯವಿಟ್ಟು ಪ್ರಕಟಿಸಿ’ ಅಂತ ಪುಟ್ಟ ಬರಹ ಹಾಗೂ ಚೈತ್ರರಶ್ಮಿ ಕಾರ್ಯಕ್ರಮದ ವಿವರವಾದ ವರದಿಯನ್ನು ಕೈಗಿತ್ತಿದ್ದರು. ಮಾರುತಿ ಮೊಗೇರ್ ಅವರ ಅಭಿಮಾನದ ನಾಲ್ಕು ಮಾತು ಇಲ್ಲಿದೆ.**

ಜೂನ್ 8, 2008, ಆಹಾ! ಎಂಟರ ನಂಟು, ಹೊತ್ತು ತಂದಿತ್ತು ಸಾರಸ್ವತ ಲೋಕದ, ಸಾಹಿತ್ಯದ ಸವಿಯ ಬುತ್ತಿಯ ಗಂಟು. ಎಲ್ಲವೂ ಹೊಸಮಯ, ಹೊಸ ಹೊಸ ಧ್ವನಿಗಳು, ಹೊಸ ಹೊಸ ಮಾತುಗಳು, ಹೊಸ ತರಂಗದಲೆಗಳು, ಕಾಣಿಸುವವರಿಗೆ ನೋಡಿ ಅನುಭವಿಸುವ ಆನಂದ. ನೋಡಲಾಗದ ನನಗೆ ಆಲಿಸಿ ಆಸ್ವಾದಿಸುವ ಸ್ವಾನುಭವ. ಚೈತ್ರರಶ್ಮಿಯ ನಾಲ್ಕನೇ ವರ್ಷದ ಕಾರ್ಯಕ್ರಮ ನನಗೆ ತಂದುಕೊಟ್ಟ ಆನಂದ ವರ್ಣನಾತೀತ.

ಜನಸ್ತೋಮದಿಂದ ತುಂಬಿ ತುಳುಕಾಡುತ್ತಿದ್ದ ನಯನ ಸಭಾಂಗಣ, ರಶ್ಮಿಯ ನಾಲ್ಕನೇ ಜನ್ಮದಿನದ ಸಂಭ್ರಮ. ರಾಘವೇಂದ್ರ ಕಾಂಚನ್ ಅವರ ನಿರೂಪಣಾ ಸಾಹಿತ್ಯದ ಸವಿನುಡಿ, ಕನ್ನಡದ ಸುಪ್ರಸಿದ್ಧ ಬರಹಗಾರರಾದ ಶ್ರೀ ಚಕ್ರವರ್ತಿ ಸೂಲಿಬೆಲೆ, ಶ್ರೀ ವಸುಧೇಂದ್ರ ಹಾಗೂ ಶ್ರೀ ಅರುಣ ಅವರಂತಹ ಗಣ್ಯ ವ್ಯಕ್ತಿಗಳ ಸಾನಿಧ್ಯ, ಅವರಾಡಿದ ಹಿತನುಡಿಗಳು ನಮ್ಮೆಲ್ಲರ ಮನಸ್ಸಿಗೆ ನಾಟುವಂತಿದ್ದವು.

ನಾಲ್ಕು ವ್ಯಕ್ತಿಗಳು ಮತ್ತು ನಾಲ್ಕು ಸಂಸ್ಥೆಗಳಿಗೆ ನೀಡಿದ ಪುರಸ್ಕಾರದ ಪರಿ, ಅವರ ಜೀವನ ಸಾಧನೆಯ ಚಿತ್ರಣ, ಕೇಳುಗರ ಕರತಾಡನ ನನಗೆ ಹಿಂದೆಂದೂ ಕಾಣದ ಕೇಳರಿಯದ ಹೊಸ ಅನುಭವ ತಂದಿತು. ನನ್ನ ಜೀವನದ ಸಾಧನೆಯ ಹೆಜ್ಜೆಗಳನ್ನು ಓದುತ್ತಿದ್ದಾಗ ಕೇಳುಗರ ಚಪ್ಪಾಳೆಯ ಸುರಿಮಳೆ, ನನಗೆ ಮಾತನಾಡಲು ಹಾಗೂ ಸ್ವರಚಿತ ಕವನ ವಾಚಿಸಲು ದೊರೆತ ಅವಕಾಶ, ಅದಕ್ಕೆ ವ್ಯಕ್ತವಾದ ಹರ್ಷೋದ್ಗಾರ ಅಂಧನಾದ ನನ್ನಲ್ಲಿ ಬಾಳಿನ ಸಾರ್ಥಕತೆಯ ಅನುಭವ ತಂದಿತು.

ನನ್ನಂತಹ ಒಬ್ಬ ಅಂಧನನ್ನು ಹುಡುಕಿ, ಗುರುತಿಸಿ, ಸಮಾಜಕ್ಕೆ ಪರಿಚಯಿಸಿದ ಚೈತ್ರರಶ್ಮಿಗೆ ನಾನು ಎಂದೆಂದಿಗೂ ಕೃತಜ್ಞ, ಅದೇ ರೀತಿ ಉಳಿದ ಮೂವರು ನನಗಿಂತ ಎಲ್ಲಾ ರೀತಿಯಲ್ಲಿಯೂ ಹಿರಿಯರು. ವಿದ್ಯೆ, ಬುದ್ಧಿ, ಸಾಧನೆ, ಸಮಾಜಸೇವೆ, ಎಲ್ಲದರಲ್ಲೂ ಅವರ ಸೇವೆ ನನಗಿಂತ ವಿಭಿನ್ನ, ಅವಿಸ್ಮರಣೀಯ. ನಾಲ್ಕು ಸಂಸ್ಥೆಗಳ ಸಾಮಾಜಿಕ ಕಾಳಜಿ, ಪ್ರಯತ್ನ ಶ್ಲಾಘನೀಯ. ಈ ಎಲ್ಲ ವಿಶೇಷಗಳು, ಹಿರಿಯರಾಡಿದ ಹಿತನುಡಿಗಳು ಚೈತ್ರರಶ್ಮಿಯ ಮಡಿಲಿಗೆ ಬಿದ್ದವು. ಆಕೆ ಅದನ್ನಾಲಿಸಿ





ಪುನೀತಳಾದಳು.

ಅಂಧನಾಗಿ, ನೋಡಲಾಗದಿದ್ದರೂ ನಾನು ಸ್ವತಃ ಆಲಿಸಿ, ಅನುಭವಿಸಿ, ಆನಂದಿಸಿದ ಚೈತ್ರರಶ್ಮಿಯ ನಾಲ್ಕನೇ ಜನ್ಮದಿನದ ಸಂಭ್ರಮದ ಆ ಕ್ಷಣಗಳು ನನ್ನ ಪಾಲಿಗೆ ಮರೆಯಲಾಗದ್ದು. ನನ್ನಂತಹ ಸಾಮಾನ್ಯನಿಗೆ ಇಂತಹ ಸಂಭ್ರಮದ ಕ್ಷಣಗಳನ್ನು ಕಟ್ಟಿಕೊಟ್ಟ ‘ಚೈತ್ರರಶ್ಮಿ’ಗೆ ನಾನು ಮನತುಂಬಿ ವಂದಿಸುತ್ತೇನೆ. ಚೈತ್ರರಶ್ಮಿಯ ಬೆಳಕು, ಪ್ರಭೆ ರಾಜ್ಯದಾದ್ಯಂತ ವ್ಯಾಪಿಸಲಿ ಎಂದು ಹಾರೈಸುತ್ತೇನೆ.

**– ಮಾರುತಿ ಮಾಸ್ತಿ ಮೊಗೇರ್, ರಮಣ ಮಹರ್ಷಿ ಅಂಧರ ಶಾಲೆ, ಜೆ.ಪಿ.ನಗರ, ಬೆಂಗಳೂರು.**

## ಸಾವು

**ಕವನ**

ನಾನು ನಿನ್ನಂತಲ್ಲ
ನನಗೆ ಯಾರಿಲ್ಲ.
ಒಂಟಿ ಬಡಕ
ಆದರೂ ನನ್ನವರೇ ಎಲ್ಲ
ಬರಲೇ ಬೇಕಲ್ಲ
ಒಂದಲ್ಲ ಒಂದು ದಿನ.

ರಾಕ್ಷಸಾಕಾರವಿಲ್ಲ
ಭಯವ್ಯಾಕೆ ಚಿನ್ನ?
ಮಾರು ದೂರ ಹಾಯ್ದು
ಹೋಗಲ್ಯಾಕೋ ಕಂಪನ?

ತೊಗಲೇನು? ವ್ಯಾಧಿಯೇನು?
ಬಣ್ಣ , ಜಾತಿ, ಭಾಷೆ, ಗೀಷೆ
ನೋಡುವುದಿಲ್ಲ ನಾ
ದೂರುವುದಿಲ್ಲ, ಬಯ್ಯುವುದಿಲ್ಲ
ಬಾರಯ್ಯ ಒಂದು ದಿನ
ಕುಳಿತು ಮಾತನಾಡೋಣ.

ಹಣ ಗುಣ ಗುಣಿಸಿ
ಎಷ್ಟಿದೆ ಬ್ಯಾಲೆನ್ಸು
ತೂಗುವುದಿಲ್ಲ ಕಣೋ
ಅಳುವವರಿದ್ದಾರೆಯೇ,
ಹಾರ ತುರಾಯಿಯಿದೆಯೆ,
ಯಾವ ಕಟ್ಟಿಗೆ ತಂದಿದ್ದಾರೋ
ನೋಡುವುದಿಲ್ಲ ಮಾರಾಯಾ
ನಂಬು ನನ್ನ.

ಭೂತ ಪ್ರೇತದ ಹೆಸರ
ನನ್ನೊಂದಿಗೆ ಜೋಡಿಸಿದರೆ
ಹೆದರಬೇಡ
ಅದು ಬರೀ ಬೂದಿ
ಹಾರಿದೆ ಆಕಾಶದತ್ತ
ಜೊತೆಯಲ್ಲ ನನಗೆ.

ದೆವ್ವವಿರಲಿ, ದೇವರನು
ನಂಬುವೆಯಾ?
ಯಾವ ದೇವರು ನಿನ್ನ
ಕಾಯುವನೋ ಮಳ್ಳ
ಎಲ್ಲ ದೇವರು ನನ್ನಬಳಿ
ಬಿಸುಟುವರು ನಿನ್ನ.

ನಾನು ಸುಟ್ಟರೆ  ಬೂದಿ
ಹೂತರೆ ಮಣ್ಣು
ನನಗಿಲ್ಲ ಬೇಧ.
ನಿಧಾನವಾಗಿ ಬಾ
ಅವಸರವೇನಿಲ್ಲ.
ಬಂದು ಹಿಂತಿರುಗುವಂತಿಲ್ಲ.
ಯಾವಾಗ ಬಂದರೂ
ನಾನಿರುವೆ ಇಲ್ಲಿಯೇ
ನಿನಗಾಗಿಯೇ.

**–ಪ್ರಿಯಾ. ಎಂ. ಕಲ್ಲಬ್ಬೆ.**

ಚಾರಣ ಕಥನ



# ಎತ್ತಿನ ಭುಜಕ್ಕಾಗಿ ಬಾಲ ಏರಿದ ಎಂಟೆದೆಯ ಭಂಟರ ಗುಟ್ಟಿನ ಕಥೆಯಿದು...!

● ಅಕ್ಷಯರಾಮ ಕಾವಿನಮೂಲೆ, ಬೆಂಗಳೂರು.

**ಪ**ಶ್ಚಿಮ ಘಟ್ಟಗಳ ಶ್ರೇಣಿಯಲ್ಲಿ ಅದೆಂಥದ್ದೋ ಒಂದು ಅದ್ಭುತ ಸೆಳೆತ ! ಸಾವಿರಾರು ಚಾರಣಿಗರನ್ನು ತನ್ನೊಡಲತ್ತ ಸೆಳೆದುಕೊಳ್ಳುವ ಸೂಜಿಗಲ್ಲು ಅದು !

ಅದೊಂದು ಶುಭ ಶನಿವಾರದ ಮುಂಜಾನೆ ಸಂದೀಪ, ಗಣರಾಜ ಇಬ್ಬರೂ ಬೆಂಗಳೂರಿನಿಂದ ಮೂಡಿಗೆರೆಗೆ ಬಂದು ನನ್ನನ್ನು ಸೇರಿಕೊಂಡಾಗ ಆರೂವರೆ. ಕತ್ತಲಲ್ಲಿ ದಾರಿ ತಪ್ಪಿದ 'ರಾತ್ರಿ ಬಸ್ಸು' ಯಾವುದೋ ಒಂದು ಕಾಫಿ ಎಸ್ಟೇಟಿನೊಳಗೆ ಹೋಗಿ ನಿಂತ ಬಗ್ಗೆ ಸಂದೀಪನ ವಿವರಣೆಯೋ ವಿವರಣೆ. ಒಂದಷ್ಟು ಹೊತ್ತು ವಿಶ್ರಾಂತಿ ಪಡೆದು, ತಿಂಡಿ ತಿಂದು, ತೋಟಗಾರಿಕಾ ಮಹಾವಿದ್ಯಾಲಯ ನೋಡಿ ಬಂದ ಮೂವರ ಪಡೆ ಮೂಡಿಗೆರೆ ಬಸ್ಸು ನಿಲ್ದಾಣಕ್ಕೆ ಲಗ್ಗೆಯಿಟ್ಟಿತು.

ಮಧ್ಯಾಹ್ನದ ಊಟಕ್ಕೆಂದು ಒಂದಷ್ಟು ತಿಂಡಿ, ಬಿಸ್ಕೇಟು, ಬಾಳೆಹಣ್ಣುಗಳು ಚೀಲ ಸೇರಿದವು. 'ಹೊಸಕೆರೆ–ಭೈರಾಪುರ'ಕ್ಕೆ





ಹೋಗುವ 'ಗೋರ್ಮೆಂಟು' ಬಸ್ಸು ಹತ್ತಿ ಕುಳಿತವರ ಕಣ್ಣು ತುಂಬಾ 'ಎತ್ತಿನ ಭುಜ'ದ್ದೇ ಕನಸು. ಕಾಫಿ ತೋಟಗಳ ಮಧ್ಯೆ ಮುಂದೆ ಸಾಗಿದ ಬಸ್ಸಿನ ತುಂಬಾ ಹಳ್ಳಿ ಜನ, ಅಪ್ಪಟ ಮಲೆನಾಡಿನ ಘಮ ! "ಕೈ ತೋರಿದಲ್ಲೆಲ್ಲಾ" ನಿಲ್ಲುತ್ತಾ ಬಸ್ಸು ದಾರದಹಳ್ಳಿ, ಹೊಸಕೆರೆ ಸುತ್ತಿಕೊಂಡು ಭೈರಾಪುರ ತಲುಪಿ ನಿಟ್ಟುಸಿರಿಟ್ಟಿತು. ಘಂಟೆ ಹತ್ತೂವರೆ ಆಗಿದ್ದರೂ ಭೈರಾಪುರವೆಂಬ ಪುಟ್ಟ ಹಳ್ಳಿಯನ್ನು 'ಚಳಿರಾಯ' ಬಿಟ್ಟು ಹೊರಟಿರಲಿಲ್ಲ !

ಅದಾಗಲೇ ಎರಡು ಬಾರಿ 'ಎತ್ತಿನ ಭುಜ' ಶಿಖರವೇರಿದ್ದ ನಾನು ನಮ್ಮ ತಂಡಕ್ಕೆ 'ಗೈಡ್'! "ದಾರಿ ಚೆನ್ನಾಗಿ ಗೊತ್ತು" ಎಂಬ ಹುಂಬತನ ಮನದಲ್ಲಿದ್ದರೂ ಎದುರಿಗೆ ಸಿಕ್ಕಿದ ಹಳ್ಳಿಗರ ಬಳಿ ದಾರಿ ಕೇಳಿ ತಿಳಿದುಕೊಂಡೆವು. ನಾಣ್ಯದ ಭೈರವೇಶ್ವರ ದೇವಾಲಯದ ಎದುರು ಸಾಗುವ ಟಾರು ರಸ್ತೆ ಬಹಳ ದೂರ ಎಂದು ಹೇಳಿ ಪಕ್ಕದಲ್ಲೇ ಇದ್ದ ಕಾಲುದಾರಿ ಹಿಡಿದೆವು. ಕಟಾವು ಮಾಡಿದ ಭತ್ತದ ಗದ್ದೆಗಳನ್ನು ದಾಟಿ ಪುಟ್ಟದೊಂದು ತೊರೆಯ ಬಳಿ ತಲುಪಿದೆವು. ಕ್ಯಾಮೆರಾಗಳು ತುಸು ಜೋರಾಗಿಯೇ ಕೆಲಸ ಮಾಡಲಾರಂಭಿಸಿದವು. ಎತ್ತ ನೋಡಿದರೂ ಬೆಟ್ಟಗುಡ್ಡಗಳು, ಮಾನವನ ಇರವೇ ಇಲ್ಲ ! ದೂರದಲ್ಲೊಂದು ಮನೆ ಕಾಣಿಸಿದಾಗ "ಅಬ್ಬಾ" ಎಂದುಕೊಂಡು ಬಳಿ ಹೋದರೆ ನಮ್ಮನ್ನು ಸ್ವಾಗತಿಸಲು ಅಲ್ಲಿ ಇದ್ದಿದ್ದು ಒಂದು 'ಬಡಕಲು ಧೀರ ನಾಯಿ' ಮಾತ್ರ. "ಸರಿಯಾದ ದಾರಿ ಇನ್ನೊಮ್ಮೆ ಕೇಳಿಕೊಳ್ಳೋಣ" ಎಂದು ಹೋದವನಿಗೆ ಪುಟ್ಟ ನಿರಾಸೆ. "ಎರಡು ಸಲ ಬಂದಿದ್ದೇನೆ" ಎನ್ನುವ ಒಣ ಜಂಭ ನನ್ನನ್ನು ಮುನ್ನಡೆಸಿತು. ಹಿಂದಿನಿಂದ ಸಂದೀಪ, ಗಣರಾಜ ಖುಷಿಯಿಂದ ಬರುತ್ತಿದ್ದರು.

ಇನ್ನೇನು ಮನುಷ್ಯರ ಸಂಪರ್ಕ ಕಡಿದು ಪ್ರಕೃತಿ ಮಾತೆಯ ರಮ್ಯ ಮಡಿಲೊಳಗೆ ಸೇರಿಕೊಂಡೆವು ಎಂಬ ಸಂತಸದಲ್ಲಿದ್ದ ನಮ್ಮನ್ನು ಎಚ್ಚರಿಸಿದ್ದು ಸಂದೀಪನ ಸಂಚಾರಿ ದೂರವಾಣಿ (ಮೊಬೈಲ್). "ಆಫೀಸಿಂದ ಫೋನ್" ಸಂದೀಪನಿಗೆ ಮೊಸರಲ್ಲಿ ಕಲ್ಲು ಸಿಕ್ಕಿದಂತಾಯಿತು. " ಅಯ್ಯೋ ! ರಾಮೇಶ್ವರಕ್ಕೆ ಹೋದರೂ ಶನೀಶ್ವರನ ಕಾಟ ತಪ್ಪಲಿಲ್ಲ ! ಸ್ವಿಚ್ ಆಫ್ ಮಾಡು ಮಾರಾಯಾ" ನಾನು ಗೊಣಗಿದೆ. ಕಾಡಿನ ಒಡಲು ಸೀಳುವ ತವಕದಲ್ಲಿ ಮುಂದೆ ಸಾಗಿದೆವು.

ಮಾತನಾಡುತ್ತಾ, ಮಧ್ಯೆ ಮಧ್ಯೆ ನಿಂತು ಫೋಟೋ ತೆಗೆಯುತ್ತಾ ನಾವು ನುಗ್ಗಿದ್ದು

## ಎತ್ತಿನ ಭುಜ ತಲುಪುವುದು ಹೇಗೆ?

**ಚಿಕ್ಕಮಗಳೂರು ಜಿಲ್ಲೆಯ, ಮೂಡಿಗೆರೆಯಿಂದ ಭೈರಾಪುರ ಸುಮಾರು 28 ಕಿ. ಮೀ. ದೂರದಲ್ಲಿದೆ. ದಿನಕ್ಕೆ ಎರಡು ಬಾರಿ ಸರಕಾರೀ ಬಸ್ಸಿನ ಸೌಲಭ್ಯವಿದೆ. ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಗಡಿ ಗ್ರಾಮ ಇದು. ಬೆಳ್ತಂಗಡಿ ತಾಲೂಕು, ಶಿಶಿಲ ಗ್ರಾಮದಿಂದಲೂ ಕಾಲ್ನಡಿಗೆಯ ಮೂಲಕ ಎತ್ತಿನ ಭುಜ ತಲುಪಬಹುದು. ಈ ಬೆಟ್ಟಕ್ಕೆ "ಶಿಶಿಲದ ಗುಡ್ಡ" ಎಂದೂ ಹೆಸರಿದೆ. ಮಳೆಗಾಲದಲ್ಲಿ ಜಿಗಣೆಗಳ ಕಾಟ, ಚಳಿಗಾಲದಲ್ಲಿ ಗಾಳಿಯ ಆಟ ಜಾಸ್ತಿ. ಬೇಸಗೆ ಸೂಕ್ತ. ರಾತ್ರಿ ಉಳಿದುಕೊಳ್ಳುವ ಯೋಜನೆ ಇದ್ದರೆ ಪಾತ್ರೆ, ಪಡಿತರಗಳ ಜೊತೆಗೆ ಬೆಚ್ಚನೆಯ ಉಡುಪು, ಟಾರ್ಪಾಲು ಕೂಡಾ ಅತ್ಯಗತ್ಯ. ಇಲ್ಲವಾದಲ್ಲಿ ರಾತ್ರಿ ಬೀಸುವ ಚಳಿಗಾಳಿ ಕಂಗಾಲು ಮಾಡಿಬಿಟ್ಟೀತು.**



ಒಂದು ಏಲಕ್ಕಿ ತೋಟಕ್ಕೆ! "ಮಗ ದಾರಿ ತಪ್ಪಿದ" ಎಂದು ಅರಿವಾಗಿದ್ದು ಆಗಲೇ ! ಮತ್ತೆ ಒಂದಷ್ಟು ಹಿಂದೆ ಬಂದವರಿಗೆ ಮತ್ತೊಂದು ಕಾಲುದಾರಿ ಎದುರಾಗಿತ್ತು. ದನಗಳನ್ನು ಮೇಯಿಸಲು ಹೋಗುವ ಹಳ್ಳಿ ಜನರಿಂದಾಗಿ ಅಲ್ಲಲ್ಲಿ ಸಾಕಷ್ಟು ಕವಲು ದಾರಿಗಳಿದ್ದವು. ನಮಗಂತೂ 'ಕಣ್ಣು ಕಟ್ಟಿ ಕಾಡಿನೊಳಗೆ ಬಿಟ್ಟ' ಹಾಗಾಗಿತ್ತು. ಕೊನೆಗೂ ಧೈರ್ಯ ಮಾಡಿ ಚೆನ್ನಾಗಿ ಸವೆದಿದ್ದ ಒಂದು ಕಾಲು ದಾರಿ ಹಿಡಿದು ಬೆಟ್ಟ ಏರತೊಡಗಿದೆವು. ನಮ್ಮ ಗುರಿಯಾಗಿದ್ದ 'ಎತ್ತಿನ ಭುಜ' ಶಿಖರ ಎದುರಿಗೇ ಇತ್ತು, ಆದರೆ ಅದನ್ನು ತಲುಪುವ ದಾರಿ ಮಾತ್ರ ಗೋಜಲು ಗೋಜಲು. ನಮ್ಮ ಮತ್ತು ನಮ್ಮ ಕನಸಿನ ಕನ್ಯೆಯ ಮಧ್ಯೆ ಕಗ್ಗಾಡು. ಕಾಲಿಡಲೂ ಸಾಧ್ಯವಿರದಷ್ಟು ಒತ್ತಾಗಿ ಬೆಳೆದಿದ್ದ ಗಿಡಮರಗಳು. "ದಾರಿ ತಪ್ಪಿ ಬೇರೆಡೆಗೆ ಹೋಗುತ್ತಿದ್ದೇವೆ" ಎಂಬ ವಿಚಾರವಂತೂ ಖಚಿತವಾಗಿತ್ತು. ಕಾಡಿನ ಮಧ್ಯೆ ದಾರಿಮಾಡಿಕೊಂಡು ಹೋಗುವ ಯೋಚನೆ ಬಂತಾದರೂ ಅದು ಬಹು ದೊಡ್ಡ ದುಸ್ಸಾಹಸ ಆಗುತ್ತದೆ ಎಂದುಕೊಂಡು ಎದುರಿಗಿದ್ದ ಕಾಲುದಾರಿಯಲ್ಲೇ ಮುಂದೆ ಹೋದೆವು.

ದಾರಿಯುದ್ದಕ್ಕೂ ಆಹ್ಲಾದಕರ ವಾತಾವರಣ. ಸುಸ್ತಾಗುತ್ತಿದ್ದಂತೆ ಸ್ವಲ್ಪ ನಿಂತುಕೊಂಡು, ನೀರು ಕುಡಿದು ಒಂದು 'ಫೋಟೋ ಸೆಶನ್'. ಮತ್ತೆ ಮಾತಾಡುತ್ತಾ, ಹರಟುತ್ತಾ ಪಯಣ. ಮುಂದೆ ಹೋದ ಹಾಗೇ ನಮ್ಮಿಂದ ದೂರವಾಗುತ್ತಾ ಹೋಯಿತು 'ಎತ್ತಿನ ಭುಜ'. "ಉಂಬುಳು(ಜಿಗಣೆ) ಇದ್ದು ಜಾಗ್ರತೆ" ಎಚ್ಚರಿಕೆ ಕೊಡುತ್ತಾ ಹೋದವನಿಗೆ ಒಂದು ಅಚ್ಚರಿ ಕಾದಿತ್ತು. ಗಣರಾಜನ ಕೈಯಲ್ಲಿದ್ದ ನೀರಿನ ಬಾಟಲಿ ನಾಪತ್ತೆ ! ಫೋಟೋ ತೆಗೆಯುವ ಗೌಜಿಯಲ್ಲಿ ಬಾಟಲಿ ಎಲ್ಲೋ ಬಾಕಿಯಾಗಿತ್ತು. ಮತ್ತೆ ಹಿಂದಕ್ಕೆ ಓಡಿ ಹುಡುಕಿ ತಂದಾಯಿತು. ಬಿಸಿಲೇರುತ್ತಾ ಹೋದಂತೆ ನಾವೂ ಬೆಟ್ಟದ ಮೇಲೆ ಸಾಗಿದೆವು. ಮಾರ್ಗದ ಮಧ್ಯೆ ಕೆಂಪು ವಸ್ತುವೊಂದು ಕಂಡುಬಂತು. "ಏನಿದು ?" ಎಂದು ಹೆಕ್ಕಿ ನೋಡಿದರೆ ಬಂದೂಕಿನ ಗುಂಡಿನ ಖಾಲಿ ಕವಚ ! ಯಾರೋ ಬೇಟೆಗೆ ಬಂದವರು ಎಸೆದು ಹೋಗಿದ್ದು, ನಮಗೆ ಸಿಕ್ಕಿತ್ತು. ಚಾರಣದ ನೆನಪಿಗೆಂದು ಎತ್ತಿಟ್ಟುಕೊಂಡೆ.

ನಡು ಮಧ್ಯಾಹ್ನದ ವೇಳೆಗೆ ನಾವು ಬೆಟ್ಟದ ನೆತ್ತಿ ತಲುಪಿದೆವು. ನಾವು ಏರಬೇಕೆಂದು ಹೊರಟಿದ್ದ 'ಎತ್ತಿನ ಭುಜ' ಶಿಖರ ಪಕ್ಕದಲ್ಲೇ ನಮ್ಮನ್ನು ಅಣಕಿಸುತ್ತಾ ನಿಂತಿತ್ತು. ಎತ್ತಿನ ಭುಜಕ್ಕೆ ಏರಲು ತವಕದಿಂದಿದ್ದವರು ಬಾಲದ ಬುಡಕ್ಕೆ ಬಂದು ತಲುಪಿದ್ದೆವು. ಪಕ್ಕದಲ್ಲೇ ಇದೆ ಎಂಬ ಭ್ರಮೆ ಹುಟ್ಟಿಸುತ್ತಿತ್ತು ಎತ್ತಿನಭುಜ. ಆದರೆ ಅಲ್ಲಿಗೆ ಹೋಗುವ ದಾರಿ ಮಾತ್ರ ಕಾಣುತ್ತಿಲ್ಲ. ಮಧ್ಯೆ ದೊಡ್ಡದೊಂದು ಪ್ರಪಾತ, ಅಗಾಧ ಕಾಡು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಕನಸು ಕನಸಾಗಿಯೇ ಉಳಿಯಿತು. ನಾವು ಏರಿದ್ದ ಶಿಖರದ ಹೆಸರಂತೂ ಗೊತ್ತಿರಲಿಲ್ಲ. 'ಎತ್ತಿನ ಬಾಲ' ಎಂದು ನಾಮಕರಣ ಮಾಡಿ ಖುಷಿಪಟ್ಟುಕೊಂಡೆವು.





ಗುಡ್ಡದ ನೆತ್ತಿ ತುಂಬಾ ಓಡಾಡಿದೆವು. ವಿವಿಧ ಭಂಗಿಗಳಲ್ಲಿ ನಿಂತು ಫೋಟೊ ತೆಗೆದದ್ದೂ ಆಯಿತು. ಇದ್ದಕ್ಕಿದ್ದಂತೆ ಗಣರಾಜನ ಕೈಯಲ್ಲಿ ರಕ್ತ ! ಮಲೆನಾಡಿನ ಪರಿಚಯವಿದ್ದ ನನಗೆ ಕೂಡಲೇ ಹೊಳೆಯಿತು. 'ಜಿಗಣೆರಾಯ' ನಮ್ಮ ಕಣ್ಣು ತಪ್ಪಿಸಿ ತನ್ನ ಕಾರ್ಯ ಪೂರೈಸಿಕೊಂಡಿದ್ದಾನೆ ! "ಹುಂ ! ಇನ್ಯಾವ ಭಾಗಕ್ಕೆಲ್ಲಾ ಅವನು ಮುತ್ತಿಟ್ಟಿದ್ದಾನೆ ?" ಎನ್ನುವ ಅನುಮಾನದಲ್ಲಿ ಕೈಕಾಲುಗಳನ್ನೆಲ್ಲಾ ಹುಡುಕಿದ್ದಾಯಿತು. ಗಣರಾಜನ ಕಾಲಲ್ಲಿ ಮತ್ತೊಂದು ರಕ್ತಸ್ರಾವ ! ಸಂದೀಪ ತಪ್ಪಿಸಿಕೊಂಡಿದ್ದ. ರಕ್ತ ಹೆಪ್ಪುಗಟ್ಟಲು ಇನ್ನೂ ಸ್ವಲ್ಪ ಹೊತ್ತು ಬೇಕು. ಮತ್ತೆ ಫೋಟೊ ಸೆಶನ್ ಮುಂದುವರೆಯಿತು.

ನಾವು ಹೊತ್ತು ತಂದಿದ್ದ ಬಿಸ್ಕೇಟು, ಬನ್, ಬಾಳೆಹಣ್ಣು, ಜ್ಯೂಸ್ ಎಲ್ಲವೂ ಒಂದೊಂದಾಗಿ ಖಾಲಿಯಾದವು. ನಾವು ಆ ಗುಡ್ಡ ಏರಿದ ಸಾಹಸದ ನೆನಪಿಗಾಗಿ ಅಲ್ಲೊಂದು 'ಸ್ಮಾರಕ' ನಿರ್ಮಾಣ ನಮ್ಮ ಕರ್ತವ್ಯವಾಗಿತ್ತು! ವಾನರ ಸೇನೆ ತಕ್ಷಣ ಕಾರ್ಯಪ್ರವೃತ್ತವಾಯಿತು. ಅಲ್ಲಲ್ಲಿ ಚದುರಿದ್ದ ಕಲ್ಲುಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ರಾಶಿ ಹಾಕಿದೆವು. ಒಂದು ಪುಟ್ಟ ಕಟ್ಟೆ ನಿರ್ಮಾಣವಾಯಿತು. ಆದರೆ ಹಾರಿಸಲು ಯಾವ ಧ್ವಜವೂ ಈ ತುಂಡರಸರಲ್ಲಿ ಇರಲಿಲ್ಲ ! ಮತ್ತೊಮ್ಮೆ ಬಂದಾಗ ಧ್ವಜದೊಂದಿಗೆ ಬರಲೇಬೇಕೆಂಬ ನಿರ್ಣಯದೊಂದಿಗೆ ಸಭೆಯನ್ನು ವಿಸರ್ಜಿಸಿದೆವು.

ಮರಳಿ ಹೊರಡುವ ಮುನ್ನ ನಮ್ಮ 'ಕನಸಿನ ಕನ್ಯೆ' ಶಿಖರದತ್ತ ಮತ್ತೊಮ್ಮೆ ದೃಷ್ಟಿ ಹಾಯಿಸಿದೆವು. ನಮ್ಮಂತೆಯೇ ಬಂದ ಇನ್ಯಾವುದೋ ತಂಡ ಗುಡ್ಡ ಹತ್ತುತ್ತಿತ್ತು. ಅವರನ್ನು ಸಂಪರ್ಕಿಸಲು ಮಾಡಿದ ನಮ್ಮ ಪ್ರಯತ್ನ ಫಲಿಸಲೇ ಇಲ್ಲ. ದಾರಿ ತಪ್ಪಿದ ಬೇಸರ ಒಂದೆಡೆಯಿದ್ದರೂ ಹೊಸತೊಂದು ಗುಡ್ಡವೇರಿದ ಖುಷಿಯಿಂದ ಕೆಳಗಿಳಿಯತೊಡಗಿದೆವು. ಮತ್ತೊಮ್ಮೆ ಸರಿಯಾದ ಹಾದಿಯಲ್ಲೇ 'ಎತ್ತಿನ ಭುಜ'ವನ್ನು ಏರುವ ಸಂಕಲ್ಪ ಹೊತ್ತುಕೊಂಡು ನಡೆದೆವು.

ಈ ಬಾರಿ ನಾವು ಬಂದ ಕಾಲ್ದಾರಿಯಲ್ಲೇ ದಾರಿ ತಪ್ಪದೆ ಸಾಗಿದ್ದೆವು. ಒಂದು ಘಂಟೆಗೂ ಕಡಿಮೆ ಅವಧಿಯಲ್ಲಿ ನಾವು ಭೈರಾಪುರ ಹಳ್ಳಿಯ ಸಮೀಪ ತಲುಪಿದ್ದೆವು. ಮೂಡಿಗೆರೆಗೆ ಮರಳಿ ಹೋಗಲು ಬಸ್ಸು ಇರುವುದು ಐದೂವರೆಯ ಅನಂತರದ ಲಗ್ನದಲ್ಲಿ! ಇನ್ನೂ ಸಾಕಷ್ಟು ಸಮಯ ಉಳಿದಿತ್ತು. ಅಲ್ಲೇ ಹರಿಯುತ್ತಿದ್ದ ಪುಟ್ಟ ತೊರೆಯೊಂದರ ಬಳಿ ಕುಳಿತು ಸುಧಾರಿಸಿಕೊಂಡೆವು. ಸಂದೀಪ ನೀರಿನಲ್ಲೊಂದು ಮುಳುಗು ಹಾಕಿದ. ಕಟಾವು ಮಾಡಿದ ಗದ್ದೆ ಏರಿನಲ್ಲಿ ನಡೆಯುತ್ತಾ ಮುಖ್ಯ ರಸ್ತೆಗೆ ಮರಳಿ ಬಂದೆವು. ಕ್ಯಾಮೆರಾಗಳು ಅಲ್ಲಲ್ಲಿ ತಮ್ಮ ಕಾರ್ಯ ಮಾಡುತ್ತಿದ್ದವು.



ಸೈಕಲ್ ಏರಿ ದನಗಳನ್ನು ಮನೆಯತ್ತ ಅಟ್ಟುತ್ತಿದ್ದ ಹುಡುಗ ಎದುರಾದ. ಕುಶಲೋಪರಿ ವಿಚಾರಿಸಿದಾಗ ತಿಳಿಯಿತು, ಅವನ ಹೆಸರು ಅಮೃತ್, ದ್ವಿತೀಯ ಪಿ.ಯು.ಸಿ. ಮುಗಿಸಿದ್ದ, ಸಿ.ಇ.ಟಿ.ಯ ವೈದ್ಯಕೀಯ ವಿಭಾಗದಲ್ಲಿ 97ನೇ ಸ್ಥಾನ. ಅಬ್ಬಾ! ಎಂದು ಮೂಗಿನ ಮೇಲೆ



ಬೆರಳಿಟ್ಟುಕೊಂಡೆವು. "ಹಳ್ಳಿಯಾದರೇನು ಶಿವಾ ?" ಭೈರಾಪುರವೆಂಬ ಹಳ್ಳಿಯಲ್ಲಿ, ವರ್ಷಕ್ಕೆ 2–3 ತಿಂಗಳು ವಿದ್ಯುತ್ತಿನ ಮುಖವನ್ನೇ ನೋಡದ ಕುಗ್ರಾಮದಲ್ಲಿ ಹುಟ್ಟಿದ ಹುಡುಗ ಸ್ವಂತ ಪ್ರಯತ್ನದಿಂದ ಓದಿ ಉಜಿರೆ ಕಾಲೇಜು ಸೇರಿದ್ದು, ಉತ್ತಮ ಸ್ಥಾನ ಪಡೆದಿದ್ದನ್ನು ಕೇಳಿ ಹೆಮ್ಮೆಯೆನಿಸಿತು. ಹೀಗೇ ಮಾತಾಡುತ್ತಾ ಅಮೃತ್‌ನ ಮನೆ ಸೇರಿದೆವು. ಅವನ ತಂದೆ ಪದ್ಮೇಗೌಡರು ಪರಿಚಯವಾದರು. ಚಹಾ ಸಮಾರಾಧನೆಯೂ ಆಯಿತು.

ಹಳ್ಳಿಯ ಬದುಕು, ವಾತಾವರಣದ ವಿವರ ನಮ್ಮ ಮುಂದೆ ತೆರೆದಿಟ್ಟರು ಗೌಡರು. "ಹಿಂದೆ ಇದ್ದ ಮಳೆ, ಚಳಿ, ಗಾಳಿ, ಪರಿಸರ ಈಗ ಇಲ್ಲವೇ ಇಲ್ಲ. ಸಾಕಷ್ಟು ಅನುಕೂಲಗಳು ಈಗ ಹಳ್ಳಿಗೆ ಬಂದಿವೆ. ದೂರವಾಣಿ, ವಿದ್ಯುತ್, ದೂರದರ್ಶನ, ಎಲ್ಲವೂ ಇದೆ, ಆದರೆ ಹಳ್ಳಿಗಳಲ್ಲಿ ಜನರೇ ಇಲ್ಲ ! ಹೊಸ ತಲೆಮಾರಿನವರೆಲ್ಲಾ ಪೇಟೆಯತ್ತ ಹೋಗುತ್ತಿದ್ದಾರೆ. ಭೈರಾಪುರದ 35 ಮನೆಗಳಲ್ಲಿ ಈಗಾಗಲೇ ಮೂರ್ನಾಲ್ಕು ಮನೆಗಳು ಖಾಲಿಯಾಗಿವೆ. ಇಲ್ಲೇ ಇದ್ದು ಕೃಷಿ ಮಾಡುವವರಿಗೂ ಸಾಕಷ್ಟು ತೊಂದರೆಗಳಿವೆ. ಕೆಲಸಕ್ಕೆ ಜನ ಇಲ್ಲ. ಅಕ್ಕಪಕ್ಕದ ಮನೆಯವರೆಲ್ಲಾ ಪರಸ್ಪರ ಹೊಂದಾಣಿಕೆ ಮಾಡಿಕೊಂಡು ಕೃಷಿ ಕೆಲಸ ಮಾಡುತ್ತೇವೆ. ಇದು ಎಷ್ಟು ದಿನ ನಡೆಯುತ್ತದೋ ಗೊತ್ತಿಲ್ಲ ! ಈಗ ಕಷ್ಟ ಪಟ್ಟು ದುಡಿಯುವ ಜನ ಎಲ್ಲಿದ್ದಾರೆ ?" ಗೌಡರ ಪ್ರಶ್ನೆಗಳಿಗೆ ಉತ್ತರ ಕೊಡುವಷ್ಟು ಸಾಮರ್ಥ್ಯ ನಮ್ಮಲ್ಲಿರಲಿಲ್ಲ. 'ನಗರೀಕರಣ'ದ ನಾಗಾಲೋಟಕ್ಕೆ ಕಡಿವಾಣ ಹಾಕುವವರ್ಯಾರು ?

ಗೌಡರ ಕುಟುಂಬ ನಮ್ಮನ್ನು ಬೀಳ್ಕೊಟ್ಟ ನಂತರ ರಸ್ತೆಯಲ್ಲೇ ಮುಂದೆ ಸಾಗಿದೆವು. ಹಳ್ಳಿಯ ಹಲವರು ಎದುರಾದರು. ನಮ್ಮೊಡನೆ ಮಾತನಾಡಿದ್ದು ಜಗದೀಶ್. ನಾವು ದಾರಿ ತಪ್ಪಿದ ಕತೆ ಕೇಳಿ ಬೇಸರಗೊಂಡರು. " ಮತ್ತೊಮ್ಮೆ ಬರುವಾಗ ನಮ್ಮನ್ನು ಸಂಪರ್ಕಿಸಿಯೇ ಬನ್ನಿ" ಎಂದು ಹೇಳಿ ದೂರವಾಣಿ ಸಂಖ್ಯೆಯನ್ನೂ ಕೊಟ್ಟ ಅವರ ಔದಾರ್ಯವನ್ನು ಮೆಚ್ಚಿಕೊಂಡು ಟಾರ್‍ರು ರಸ್ತೆಯಲ್ಲೇ ಹೆಜ್ಜೆ ಹಾಕಿದೆವು. ಬಾನಂಗಳದಲ್ಲಿ ಮೋಡಗಳ ಸಮ್ಮೇಳನ ಜರುಗುವ ಲಕ್ಷಣ ಕಾಣಿಸತೊಡಗಿತ್ತು. ಗೂಡಿನತ್ತ ಹೊರಟ ಕೊಕ್ಕರೆಗಳ ಸಾಲು, ಕೊಟ್ಟಿಗೆಗೆ ಮರಳುತ್ತಿದ್ದ ಹಸು, ಎಮ್ಮೆಗಳ ದಂಡನ್ನು ವೀಕ್ಷಿಸುತ್ತಾ ಬಸ್ಸಿಗಾಗಿ ಕಾಯತೊಡಗಿದೆವು. ನೋಡ ನೋಡುತ್ತಿದ್ದಂತೆಯೇ ನಾವು ಹತ್ತಿ ಇಳಿದಿದ್ದ 'ಎತ್ತಿನ ಬಾಲ'ಕ್ಕೂ ಕರಿಮೋಡದ ಆಲಿಂಗನ.

ಸರಕಾರೀ ಬಸ್ಸು ಹತ್ತಿ ಮೂಡಿಗೆರೆಯತ್ತ ಹೊರಟೆವು. ಬಸ್ಸು ಖಾಲಿ ಖಾಲಿ. ಬೆಳಗ್ಗಿನಿಂದ ನಡೆದು ಬೆಂಡಾಗಿ ಹೋದ ಕಾಲುಗಳನ್ನು ಚಾಚಿ ಕುಳಿತೆವು. ಮಳೆರಾಯ ನಿಧಾನವಾಗಿ ಬಿರುಸಾಗತೊಡಗಿದ. ಅರ್ಧಗಂಟೆಯ ಕಾಲ ಭುವಿಯನ್ನು ತೋಯಿಸಿದ. ಮೂಡಿಗೆರೆ ಹ್ಯಾಂಡ್ ಪೋಸ್ಟ್ ಬಳಿ ಇಳಿದಾಗ ಸೂರ್ಯಾಸ್ತದ ಕೆಂಪು ಕಾಫಿ ತೋಟಗಳನ್ನು ರಂಗಾಗಿಸಿತ್ತು. ಪಶ್ಚಿಮ ಘಟ್ಟಗಳನ್ನು ಸೌಂದರ್ಯದ ಉತ್ತುಂಗಕ್ಕೇರಿಸಿತ್ತು. ಭೈರಾಪುರದ ಪರಿಸರ, ಎತ್ತಿನ ಭುಜ, ಅಮೃತ್, ಪದ್ಮೇಗೌಡರ ಮಾತು, ತುಂತುರು ಮಳೆ, ಎಲ್ಲವೂ ಕಣ್ಣಲ್ಲಿ ಹಸಿರಾಗಿ ಉಳಿದಿದ್ದವು. ವಿದ್ಯುತ್ತಿಲ್ಲದ ಒಂದು ಮಧುರ ರಾತ್ರಿ ನಮಗಾಗಿ ಮೂಡಿಗೆರೆಯಲ್ಲಿ ಕಾಯುತ್ತಿತ್ತು! ■





# ಪತ್ರ ಬಂದಿದೆ...

ಚೈತ್ರರಶ್ಮಿಗೆ ಐದು ತುಂಬಿದೆ. ಕೇವಲ ಆದರ್ಶದ ನೆಲೆಗಟ್ಟಿನಲ್ಲಿ ಜಾಹೀರಾತು, ನಕಾರಾತ್ಮಕ ಸುದ್ದಿಗಳ ಲಂಗು–ಲಗಾಮಿಲ್ಲದೆ ಪತ್ರಿಕೆಯೊಂದನ್ನ ಕಟ್ಟೋದು, ಬೆಳೆಸೋದು ಸುಲಭದ ಮಾತಲ್ಲ. ಪತ್ರಿಕೆ ಶ್ರಮಿಸಬೇಕಾದ ಹಾದಿ ದೊಡ್ಡದಿದೆ. ಎಲೆಮರೆಯ ಕಾಯಿಯಂತಿರುವ ಬರಹಗಾರರಿಗೆ ಉದಯೋನ್ಮುಖರಿಗೆ ಒಂದು ವೇದಿಕೆ ಕಲ್ಪಿಸುತ್ತಿರುವ ನಿಮ್ಮ ಪ್ರಯತ್ನ ಶ್ಲಾಘನೀಯ, ಸೃಜನಶೀಲತೆಯ ಹುಡುಕಾಟದಲ್ಲಿ ಪತ್ರಿಕೆಯ ವೈವಿಧ್ಯತೆ, 'ಆಳ–ಅಗಲ–ಎತ್ತರ' ಕೊಚ್ಚಿ ಹೋಗದಿರಲಿ.

ತರಾತುರಿಯ ಯಾಂತ್ರಿಕ ಜೀವನದ ನಡುವೆಯೂ ಭಾವಬಿಂಬವಾಗಿ ಮೂಡಿಬರುತ್ತಿರುವ 'ಚೈತ್ರರಶ್ಮಿ'ಯ ಯಶಸ್ಸಿನಿಂದ ಖುಷಿಯಾಗಿದೆ. ಮುಂದಿನ ಹಾದಿ ಇನ್ನಷ್ಟು ಸುಗಮವಾಗಲಿ, ಬೆಳಗಲಿ...

**– ಪ್ರಶಾಂತ್ ಪಡುಕರೆ, ಕುಂದಾಪುರ**

*********

ನಾನು ಕರ್ನಾಟಕ ಬಿಟ್ಟು ಉನ್ನತ ವ್ಯಾಸಂಗಕ್ಕಾಗಿ ಹರಿಯಾಣಕ್ಕೆ ಹೊರಟಾಗ ಮಾತೃ ಭಾಷೆಯಿಂದ ದೂರಾಗುತ್ತಿರುವೆನೆಂಬ ಕೊರಗಿತ್ತು. ಮಾತೃ ಭಾಷೆಯೊಂದಿಗಿನ ನಂಟು ಅಂತಹುದು ನೋಡಿ. ಅಂತಹ ಸಮಯದಲ್ಲಿ ಸಿಕ್ಕಿದ 'ಚೈತ್ರರಶ್ಮಿ' ಮರಳುಗಾಡಿನಲ್ಲಿ ಓಯಸಿಸ್ ಸಿಕ್ಕಿದ ಹಾಗೆ ಆಯಿತು. ಇಲ್ಲಿ ಎಲ್ಲರೂ ಅವರವರ ಲೋಕದಲ್ಲಿ ಮುಳುಗಿದ್ದಾಗ ನನಗೆ ಹೊಸ ಲೋಕದ ಪರಿಚಯ ಮಾಡಿಕೊಟ್ಟದ್ದು 'ಚೈತ್ರರಶ್ಮಿ'ಯಲ್ಲಿನ ಬರಹಗಳು. ನಿಮ್ಮ ಪತ್ರಿಕೆ ಓದಿ ಅದನ್ನು ಮೆಲುಕು ಹಾಕಿದಾಗ ಸಿಗುವ ಖುಷಿ ನನಗೆ ಬೇರೆಲ್ಲೂ ಸಿಗುವುದಿಲ್ಲ.

**– ರಶ್ಮಿ ಎಚ್.ಎಮ್, ಎಮ್.ಟೆಕ್ ವಿದ್ಯಾರ್ಥಿನಿ.**
ಡೈರಿ ಮೈಕ್ರೊಬಯಾಲಜಿ ವಿಭಾಗ, ನ್ಯಾಷನಲ್ ಡೈರಿ ರಿಸರ್ಚ್
ಇನಿಸ್ಟಿಟ್ಯೂಟ್, ಕರ್ನಾಲ್, ಹರಿಯಾಣ –೧೩೨೦೦೧

*********

ಹೊರದೇಶದಲ್ಲಿದ್ದರೂ ಆಗಾಗ ಇಂಟರ್‌ನೆಟ್‌ನಲ್ಲಿ ಕನ್ನಡ ಪತ್ರಿಕೆಗಳ ಮೇಲೆ ಕಣ್ಣಾಡಿಸುವ ನನ್ನ ಹವ್ಯಾಸದಿಂದಾಗಿ, ಗೆಳೆಯರ ಮೂಲಕ ಫಾರ್ವರ್ಡ್ ಆಗಿ ಸಿಕ್ಕಿದ್ದು 'ಚೈತ್ರರಶ್ಮಿ'. ತನ್ನ ವಿಶಿಷ್ಟ ಹೆಸರಿನಿಂದಲೇ ಗಮನ ಸೆಳೆದ ಪತ್ರಿಕೆ ಮುಂದೆ ಅದರೊಳಗಿನ ಭಾವಪೂರ್ಣ, ವಿಚಾರಶೀಲ ಬರಹಗಳಿಂದ ಮತ್ತಷ್ಟು

ಆಪ್ತವಾಯಿತು. ಭಾರತದಿಂದ ಹೊರಗಿನ ದೇಶದಲ್ಲಿ ಕೂತು ಡಿ.ವಿ.ಜಿ, ರಾಜರತ್ನಂ, ಕೈಲಾಸಂ, ಆನಂದ ಕುಮಾರಸ್ವಾಮಿ ಅವರಂಥ ನಮ್ಮ ದೇಶದ ಮಹನೀಯರ ಕುರಿತು ಓದುವುದೇ ಒಂದು ದಿವ್ಯಾನುಭವ. ಚೈತ್ರರಶ್ಮಿ ಆ ಕಾರಣಕ್ಕೇ ತುಂಬಾ ಆತ್ಮೀಯವಾಗುತ್ತದೆ. ನಮ್ಮ ದೇಶದ ಗ್ರಾಮೀಣ ಬರಹಗಾರರ ಬರಹಗಳನ್ನು ಮತ್ತೊಂದು ದೇಶದ ನಗರವೊಂದರಲ್ಲಿ ಕುಳಿತು ಓದುವ ಅಪೂರ್ವ ಅವಕಾಶ ನೀಡುತ್ತಿರುವ, ನಾಡು ನುಡಿಯ ಕುರಿತು ಅಭಿಮಾನ ಹೆಚ್ಚಿಸುತ್ತಿರುವ ಪತ್ರಿಕೆಗೆ ಶತಶತ ಪ್ರಣಾಮ.

– ಡಾ॥ ಮಹಾಂತೇಶ್ ಪ್ರಭು, ಆಸ್ಟ್ರೇಲಿಯಾ

*********

ಪತ್ರಿಕೆಗೆ ಶುಭಾಶಯಗಳು. 'ಚೈತ್ರರಶ್ಮಿ' ಎಂಬ ಹೆಸರೇ ಒಂದು ತರಹದ ಆಶಾಕಿರಣವನ್ನು ಸೂಸುವಂತಹುದು. ನನಗೆ ಪ್ರತೀ ಸಂಚಿಕೆಯಲ್ಲಿ ಮೆಚ್ಚಿಗೆಯಾಗುವುದು ಸಂಪಾದಕೀಯ ಲೇಖನ. ಸಂಪಾದಕರ ಸೌಮ್ಯ ನುಡಿಗಳಿಂದ ತುಂಬಿದ, ಸಮಾಜದ ಬಗ್ಗೆ ಕಳಕಳಿಯನ್ನೊಳಗೊಂಡ, ವಿಷಯಗಳನ್ನು ತುಂಬಾ ನವಿರಾಗಿ ತಿಳಿಸುವ ಪರಿ ಖುಷಿ ಕೊಡುವಂತಹುದು. ಇದರ ಜತೆಗೆ ಈ ಪತ್ರಿಕೆಯ ಮೂಲಕ ಎಲೆಮರೆಯ ಹಣ್ಣುಗಳಂತಿರುವ ಗ್ರಾಮೀಣ

## ಕತ್ತಲು ಬೆಳಕಿನ ಬೀಜಗಳು

ಹನಿ — ನವೀನ್ ಭಟ್, ಗಂಗೋತ್ರಿ

ಈ ಕತ್ತಲೆಯ ಬಗ್ಗೆ
ಕುತೂಹಲ ಮೂಡಿ
ಪಕ್ಕಾ ತಿಳಿಯುವುದಕ್ಕೆ
ದೀಪ ಹಚ್ಚಿದೆ.
ಪುಕ್ಕಲು ಕತ್ತಲು
ಓಡಿ ಹೋಗಬೇಕೆ!

ಮತ್ತದೇ ಕತ್ತಲೆಯ ಬಗ್ಗೆ
ಭಯವೂ ಹುಟ್ಟಿ
ಕಾವಲು ಕಾಯಲಿಟ್ಟೆ
ಪುಟ್ಟದೊಂದು ಪ್ರಣತಿ
ಬರಲೇ ಇಲ್ಲ ಕತ್ತಲು.

ಇದೇ ಕತ್ತಲಿನ ಬಗ್ಗೆ
ಸಂಶಯ ಸುಳಿದು
ದಿಗ್ಗನೇ ಬೆಳಕು ಚೆಲ್ಲಿದೆ.
ದಿಟವಾಯ್ತು
ಕತ್ತಲೆ ಎಂಬುದಿಲ್ಲ!!

ಯಾಕೋ ಸುಮ್ಮನೆ
ಈ ದೀಪ, ಬೆಳಕಿನ ಬಗ್ಗೆ
ಪೆದ್ದು ಸಂಶಯ ಸುಳಿದು
ಫಕ್ಕನೇ ಆರಿಸಿದೆ.
ಅಯ್ಯೋ ಬರೀ ಕತ್ತಲು...!





ಚುಟುಕ — ನವೀನ್ ಭಟ್, ಗಂಗೋತ್ರಿ

### ಚಂದ್ರನ ಚೂರು

ಅವಳ ಕಂಗಳಲ್ಲಿ
ಚಂದ್ರ ಪ್ರತಿಬಿಂಬಿಸುತ್ತಿದ್ದ;
ಅವಳು ಕಣ್ಣೀರಾದಳು-ಅಷ್ಟೆ
ಚಂದ್ರ ಚೂರಾದ
ಬೆಳದಿಂಗಳು ಚಿತ್ತಿತು

### ಲಾಲಿತ್ಯ

ಜಲಪಾತ ಸುರಿವಂಥ
ಅವಳ ಜಡೆ ಜಾತ್ರೆಯಲಿ
ಮಲ್ಲಿಗೆಯ ತೇರು,
ಅದರ ಘಮದ್ದೇ ಯಾತ್ರೆ
ಗಾಳಿಗದುರುವ ಮುಂಗುರುಳು
ಚಾಮರದ ಹಾಗೆ...

### ಪ್ರತ್ಯೂಷ

ಮೊಂಬತ್ತಿ ಕೂಡ ಆರಿತು
ಕನಸುಗಳ ಪುಸ್ತಕ
ಮುಚ್ಚಿಟ್ಟು,
ಮನೆ ಬಾಗಿಲು ತೆರೆದೆ
ಈಗ ಬೆಳಗಾಗಿದೆ!

### ಡೈರಿ

ಹಾಳೆಗಳ ತಿರುವಿ ನೋಡು;
ನಿನ್ನೆಗಳು ಮಲಗಿವೆ
ಎಚ್ಚರ ಮಾಡದೆ
ಸುಮ್ಮನೇ ಸವರಿ
ಹಾದು ಬಂದು ಬಿಡು

ಪ್ರತಿಭಾವಂತರ ಲೇಖನದ ಸೊಗಸು ಮಧುರ, ಅತಿ ಮಧುರ. ಗುಜ್ಜು–ಗಲಾಟೆಗಳಿಲ್ಲದೆ, ರಾಜಕೀಯ ದೊಂಬರಾಟಗಳ ಕಾಟವಿಲ್ಲದೆ, ಅಸಹ್ಯ ಭಾಷೆಯ ಪರಿತಾಪವಿಲ್ಲದೆ ಈ ಪತ್ರಿಕೆ ಹಲವು ವಿಷಯಗಳಲ್ಲಿ ಮೋಡಿ ಮಾಡುತ್ತಿದೆ. ಒಟ್ಟಿನಲ್ಲಿ ಈ ಪತ್ರಿಕೆ ಹಲವು ಪತ್ರಿಕೆಗಳಿಗಿಂತ ಭಿನ್ನ.

ಹಣಕ್ಕಾಗಿಯೇ ಎಲ್ಲಾ ನಡೆಯುವ ಈ ಕಾಲದಲ್ಲಿ, ಹಣವನ್ನು ಅಪೇಕ್ಷಿಸದೆ ನಿಸ್ವಾರ್ಥ ಸೇವೆ ಮಾಡುತ್ತಿರುವ ಪತ್ರಿಕಾ ಬಳಗಕ್ಕೆ, ಭಾಗಿಯಾದ ಎಲ್ಲರಿಗೂ ಐವತ್ತನೇ ಸಂಚಿಕೆಯ ಶುಭ ಸಂದರ್ಭದಲ್ಲಿ ನನ್ನ ಮನತುಂಬಿದ ಧನ್ಯವಾದಗಳ ಜತೆಗೆ ಹೃತ್ಪೂರ್ವಕ ಶುಭಾಶಯಗಳು.

– ವೆಂಕಟೇಶ್ ದೊಡ್ಮನೆ ತಲಕಾಲಕೊಪ್ಪ, ಟೆಕ್ಸಾಸ್, ಅಮೇರಿಕಾ

ಪ್ರಸ್ತುತ ಸಮಾಜದಲ್ಲಿರುವ ಬಹಳಷ್ಟು ಭಾವನೆಗಳನ್ನು 'ಕೆರಳಿಸುವ' ಪತ್ರಿಕೆಗಳ ಮಧ್ಯೆ 'ಚೈತ್ರರಶ್ಮಿ' ಆಪ್ತವಾಗುವುದು ಭಾವನೆಗಳನ್ನು 'ಅರಳಿಸುವ' ಅದರ ವಿಶಿಷ್ಟತೆಗಳಿಂದಾಗಿ. ವ್ಯಕ್ತಿತ್ವವನ್ನು ನಿರ್ಮಿಸುವಲ್ಲಿ, ರಾಷ್ಟ್ರಭಕ್ತಿಯನ್ನು ಜಾಗ್ರತಗೊಳಿಸುವಲ್ಲಿ, ಗ್ರಾಮೀಣ ಸುಪ್ತ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಟ್ಟು ಅವರ ಬರಹ ಸಾಮರ್ಥ್ಯ ಗಳನ್ನು ಇಮ್ಮಡಿಗೊಳಿಸುವಲ್ಲಿ , ಭಾವನೆಗಳನ್ನು ಅರಳಿಸುವಲ್ಲಿ ಚೈತ್ರರಶ್ಮಿ ತುಂಬಾ ಸಹಕಾರಿಯಾಗಿದೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. 'ಸಾವಿರ ಮುಳ್ಳುಗಳಿದ್ದರೂ ಮಿಂಚುವುದು ಗುಲಾಬಿ ಹೂ' ಎಂಬಂತೆ ಅನೇಕ ಪತ್ರಿಕೆಗಳಿದ್ದರೂ ಚೈತ್ರರಶ್ಮಿಯು ಮಾತ್ರ ಗುಲಾಬಿ ಹೂನಂತೆ ಮಿಂಚಲಿ. ಚಿರಾಯುವಾಗಲಿ.

– ಬಸವನಗೌಡ ಎಚ್.ಸಿ, ಶಿಕ್ಷಕರು, ಚಿಕ್ಕಬಳ್ಳಾಪುರ



# ಧನ್ಯವಾದಗಳ ಹೂಗುಚ್ಛ...

- ಪ್ರೀತಿಯಿಂದಲೇ 50 ನೇ ಸಂಚಿಕೆಯ ಖರ್ಚು ವೆಚ್ಚಗಳನ್ನು ವಹಿಸಿಕೊಂಡು ಸಂಚಿಕೆಯನ್ನು ಪ್ರಾಯೋಜಿಸಿದ ಗೆಳೆಯ ವಿಷ್ಣುಪ್ರಸಾದ್ ನಿಡ್ಡಾಜೆಗೆ,

- ಚೈತ್ರರಶ್ಮಿಯ 50 ನೇ ಸಂಚಿಕೆಯನ್ನು ಹೊರತರಲು ಪ್ರೇರೇಪಿಸಿ, ಸಂಚಿಕೆ ಹೊರಬರಲು ಮುಖ್ಯಕಾರಣರಾದ 'ನೂಪುರಭ್ರಮರಿ' ಪತ್ರಿಕೆಯ ಸಂಪಾದಕಿ ಮನೋರಮಾ ಬಿ. ಎನ್. ಅವರಿಗೆ ಮತ್ತು 'ನೂಪುರಭ್ರಮರಿ' ಬಳಗಕ್ಕೆ,

- ಪ್ರೀತಿಯಿಂದಲೇ ಚೈತ್ರರಶ್ಮಿಯ ವೆಬ್‌ಸೈಟ್‌ನ್ನು ನಿರ್ವಹಿಸುತ್ತಿರುವ 'ಧ್ಯೇಯ ಟೆಕ್ನಾಲಜೀಸ್' ನ ಗೆಳೆಯ ಮಹೇಶ್ ಎಳ್ಯಡ್ಕ ಮತ್ತು ಅವರ ಮಿತ್ರವೃಂದಕ್ಕೆ,

- ಚೈತ್ರರಶ್ಮಿಗೆ ಬರೆಯುತ್ತ, ಓದುತ್ತಾ ತಮ್ಮ ಪ್ರೀತಿ ಅಕ್ಕರೆ ಅಭಿಮಾನಗಳಿಂದಲೇ ಪತ್ರಿಕೆಯನ್ನು ಮುನ್ನಡೆಸುತ್ತಿರುವ 'ಚೈತ್ರರಶ್ಮಿ ಬಳಗ'ದ ಮಿತ್ರರಿಗೆ ಮತ್ತು ಎಲ್ಲಾ ಓದುಗ ಬಂಧುಗಳಿಗೆ,

- ಚೈತ್ರರಶ್ಮಿಯ 50ನೇ ಸಂಚಿಕೆಯ ಅಂದವಾದ ಮುಖಪುಟ ಹಾಗೂ ಒಳಪುಟಗಳನ್ನು ವಿನ್ಯಾಸ ಮಾಡಿಕೊಟ್ಟ ಮಂಗಳೂರಿನ ಅಕ್ಷರೋದ್ಯಮದ ಮಿತ್ರ ಶ್ರೀ ಸುನಿಲ್ ಕುಲಕರ್ಣಿ ಅವರಿಗೆ,

- ಚೈತ್ರರಶ್ಮಿಯ ಕನಸನ್ನು ತಮ್ಮ ಅತೀವ ಸಾಮಾಜಿಕ ಕಳಕಳಿಯಿಂದ ಕಾರ್ಯರೂಪಕ್ಕಿಳಿಸುತ್ತಿರುವ 'ಸಮಾಜ ಸೇವಕರ ಸಮಿತಿ' ಯ ಎಲ್ಲ ಮಿತ್ರರಿಗೆ.

## ೫೦ರ ವರೆಗಿನ ಕೆಲವು ಹೆಜ್ಜೆಗಳು...

